ಅಧ್ಯಾಯ ೧೫

# ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಸೇವೆಗಳು

ದಕ್ಷಿಣ ಕನ್ನಡ ಜಿಲ್ಲೆಯು ಕರಾವಳಿ ಜಿಲ್ಲೆಯಾಗಿದ್ದು, ವಿಶಿಷ್ಟವಾದ ವಾಯುಗುಣ ಲಕ್ಷಣಗಳನ್ನು ಹೊಂದಿದೆ. ಈ ಪ್ರದೇಶದಲ್ಲಿ ತೇವಾಂಶ ಹೆಚ್ಚಾಗಿದ್ದು, ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಕಾಲಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮಳೆಗಾಲದ ಪ್ರಾರಂಭಕ್ಕೆ ಮೊದಲು (ಜೂನ್–ಅಕ್ಟೋಬರ್) ಗಾಳಿಯಲ್ಲಿ ಒತ್ತಡವು ಹೆಚ್ಚಾಗಿರುತ್ತದೆ. ನವೆಂಬರ್–ಫೆಬ್ರವರಿ ಅವಧಿಯಲ್ಲಿ ಚಳಿಯಿದ್ದು ತಂಪಾದ, ಹಿತವಾದ ವಾತಾವರಣವಿರುತ್ತದೆ. ಮಾರ್ಚ್ ಬಳಿಕ ಉಷ್ಣತೆ ಹೆಚ್ಚಾಗುತ್ತಾ, ಏಪ್ರಿಲ್–ಮೇ ತಿಂಗಳಲ್ಲಿ ಅತ್ಯಂತ ಹೆಚ್ಚು ಉಷ್ಣತೆಯಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ವಾರ್ಷಿಕ ಸಾಮಾನ್ಯ ಮಳೆಯು ಸರಾಸರಿ ೩೯೭೫.೨ ಮಿ.ಮಿ. ಆಗಿರುತ್ತದೆ. ಇಲ್ಲಿನ ಪರಿಸರ, ಸ್ಥಳೀಯ ಗಿಡ ಮರಗಳು, ಜನರ ಆಹಾರ ಅಭ್ಯಾಸಗಳು ಆರೋಗ್ಯ ಮತ್ತು ವೈದ್ಯಕೀಯ ಪದ್ಧತಿಯ ಮೇಲೆ ಪ್ರಭಾವವನ್ನು ಬೀರುತ್ತವೆ. ಗುಡ್ಡ ಪ್ರದೇಶಗಳನ್ನು ಒಳಗೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಗುಡ್ಡಗಳ ನಡುವೆ ಇರುವ ತಗ್ಗು ಪ್ರದೇಶದ ಮಲೆನಾಡಿನ ಹಳ್ಳಿಗಳಲ್ಲಿ ಅನಾರೋಗ್ಯವು ಹೆಚ್ಚು ಕಾಣಿಸಿಕೊಳ್ಳುತ್ತದೆ. ಈ ಎಲ್ಲಾ ಪ್ರಾಕೃತಿಕ ಲಕ್ಷಣದಿಂದ ಕರಾವಳಿ ಜಿಲ್ಲೆಯಲ್ಲಿ ಬೆವರುವುದು ಹೆಚ್ಚು. ದೈಹಿಕ ಶ್ರಮವಹಿಸಿ ದುಡಿಯುವವರು ಹೆಚ್ಚು ಆರೋಗ್ಯವಂತರಾಗಿರುವುದನ್ನು ಜಿಲ್ಲೆಯಲ್ಲಿ ಕಾಣಬಹುದು.

ಪ್ರಾಚೀನ ಕಾಲದಿಂದಲೂ ಆಯುರ್ವೇದ, ಹೋಮಿಯೋಪತಿ, ಯುನಾನಿ ಮೊದಲಾದ ವೈದ್ಯಕೀಯ ಪದ್ಧತಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾರಿಯಲ್ಲಿದ್ದವು. ಬ್ರಿಟೀಷರ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಆಗಮನದೊಂದಿಗೆ ಆಲೋಪತಿ ವೈದ್ಯಕೀಯ ಪದ್ಧತಿಯು ಪ್ರಾರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲೆಯು ೧೯೫೬ರ ವರೆಗೆ ಮದ್ರಾಸ್ ಪ್ರಸಿಡೆನ್ಸಿಯ ಭಾಗವಾಗಿತ್ತು. ಆದ್ದರಿಂದ ಈ ಜಿಲ್ಲೆಯಲ್ಲಿ ಆಗಿನ ಮದ್ರಾಸ್ ಸರಕಾರ, ಸಾರ್ವಜನಿಕ ಆರೋಗ್ಯದ ವಿಚಾರದಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿಶ್ಲೇಷಿಸುವುದು ಸೂಕ್ತವೆನಿಸುತ್ತದೆ. ೧೮೦೨ ರಲ್ಲಿ ಮದ್ರಾಸಿನಲ್ಲಿ ರೋಗಗಳು ಬಾರದಿರುವಂತೆ ಮುಂಜಾಗರೂಕತೆಯ ನೆಲೆಯಲ್ಲಿ ವಿವಿಧ ಚುಚ್ಚುಮದ್ದುಗಳ ಕಾರ್ಯಕ್ರಮಗಳು ಪ್ರಾರಂಭವಾದವು. ಆ ವರ್ಷದಲ್ಲೆ ಚುಚ್ಚು ಮದ್ದನ್ನು ಪ್ರಥಮವಾಗಿ ಭಾರತಕ್ಕೆ ತರಲಾಯಿತು. ಡಾ.ಜೇಮ್ಸ್ ಆಂಡರ್‌ಸನ್ ಇದಕ್ಕೆ ಕಾರಣರಾಗಿದ್ದು, ೧೮೫೧ ರವರೆಗೆ ಚುಚ್ಚು ಮದ್ದುಗಳ ಕಾರ್ಯವು ಕಂದಾಯ ಇಲಾಖೆಯ ಹತೋಟಿಯಲ್ಲಿತ್ತು. ಅನಂತರ ಇದನ್ನು ವೈದ್ಯಕೀಯ ವಿಭಾಗದ ಮೇಲ್ವಿಚಾರಣೆಗೆ ತರಲಾಯಿತಾದರೂ ಜಿಲ್ಲೆಯ ಸಾಮಾನ್ಯ ಜನತೆಯ ಆರೋಗ್ಯ ರಕ್ಷಣೆಯನ್ನು ಸಿವಿಲ್ ಸರ್ಜನ್ನರ ಹತೋಟಿಯಲ್ಲಿರಿಸಲಾಗಿತ್ತು. ಏಪ್ರಿಲ್ ೧೮೬೪ ರಲ್ಲಿ ಮದ್ರಾಸಿನಲ್ಲಿ ಸ್ಯಾನಿಟೇಷನ್ ಡಿಪಾರ್ಟಮೆಂಟ್ (ನೈರ್ಮಲ್ಯ–ಇಲಾಖೆ) ರಚಿಸಲಾಯಿತು. ಇದರಲ್ಲಿ ಅಧ್ಯಕ್ಷರು ಹಾಗೂ ನಾಲ್ವರು ಸದಸ್ಯರಿದ್ದು, ಅವರಲ್ಲೊಬ್ಬರು ಕಾರ್ಯದರ್ಶಿಯಾಗಿರುತ್ತಿದ್ದರು. ಈ ಸಮಿತಿ ೧೮೬೬ ರವರೆಗೆ ಅಸ್ತಿತ್ವದಲ್ಲಿತ್ತು. ೧೯೭೦ರ ಬಳಿಕ, ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಮುಖ ಅಂಕಿ ಅಂಶಗಳನ್ನು

ನೊಂದಾಯಿಸಿಕೊಳ್ಳಲು ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. ಅದರಂತೆ ೧೮೯೯ ರಲ್ಲಿ ಮದ್ರಾಸ್ ಜನನ ಮರಣ ನೋಂದಾವಣಿಯ ಮಸೂದೆಯನ್ನು ಜಾರಿಗೊಳಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಮಸೂದೆಯನ್ನು ೧೮೯೯ ರಲ್ಲಿ ಜಾರಿಗೆ ತರಲಾಯಿತು. ೧೯೧೯ ರಲ್ಲೇ ಮಾಂಟೆಗೊ–ಚೆಲ್ಮ್ಸ್‌ಫರ್ಡ್ ಸುಧಾರಣೆ ಜಾರಿಗೊಳಿಸಿದ್ದರಿಂದ, ನೈರ್ಮಲ್ಯ (sanitation) ಮತ್ತು ಸಾರ್ವಜನಿಕ ಆರೋಗ್ಯದ ವಿಷಯಗಳನ್ನು ಹಾಗೂ ಸ್ಥಳೀಯ ಸಂಸ್ಥೆಗಳ ಪ್ರಭಾರವನ್ನು ಮಂತ್ರಿಗಳ ಹತೋಟಿಗೆ ವರ್ಗಾಯಿಸಲಾಯಿತು. ನೈರ್ಮಲ್ಯ ಇಲಾಖೆಯನ್ನು ಸಾರ್ವಜನಿಕ ಆರೋಗ್ಯ ಇಲಾಖೆ ಎಂದು ಕಾಲಕ್ರಮೇಣ ಮಾರ್ಪಡಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹೊಸ ನಿಯಮಗಳು ೧೯೨೩ ಏಪ್ರಿಲ್ ೧ ರಿಂದ ಪ್ರಾರಂಭವಾದವು. ೧೯೩೯ ರಲ್ಲಿ ಮದ್ರಾಸ್ ಆರೋಗ್ಯ ಕಾಯಿದೆಯನ್ನು ಜಾರಿಗೊಳಿಸಲಾಯಿತು, ಅದೇ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಈ ಕಾನೂನನ್ನು ಜಾರಿಗೊಳಿಸಲಾಯಿತು. ಹಳ್ಳಿಯ ಪಟೇಲರು ಜನನ ಮರಣ ನೋಂದಾವಣಿಯ ಜವಾಬ್ದಾರಿ ಹೊಂದಿದ್ದರು. ಪಟ್ಟಣಗಳಲ್ಲಿ ಟೌನ್ ಪಂಚಾಯತ್ ಮತ್ತು ಮುನ್ಸಿಪಾಲಿಟಿಗಳು ಜನನ ಮರಣದ ಅಂಕಿ ಅಂಶಗಳನ್ನು ಇಟ್ಟುಕೊಳ್ಳುತ್ತಿದ್ದವು. ಹಳ್ಳಿಯ ಪಟೇಲರು ಮತ್ತು ಸ್ಥಳೀಯ ನಗರ ಸಂಸ್ಥೆಗಳು ಈ ಮಾಹಿತಿಗಳನ್ನು, ಜನನ ಮರಣ ಮಹಾ ಪಂಜಿಕಾರ (ರಿಜಿಸ್ಟ್ರಾರ್ ಜನರಲ್)ರಿಗೆ ತಹಶೀಲ್ದಾರರ ಮೂಲಕ ಕಳುಹಿಸಿಕೊಡುತ್ತಿದ್ದರು. ಅಯಾ ಆರೋಗ್ಯವರ್ತುಲದ, ಆರೋಗ್ಯ ನಿರೀಕ್ಷಕರು(Inspectors)ಗಳು ಈ ಮಾಹಿತಿಗಳನ್ನು ಸಂಗ್ರಹಿಸುತ್ತಿದ್ದರು, ಮಾತ್ರವಲ್ಲದೆ ಪಟೇಲರು ಅಂಕಿ ಅಂಶಗಳನ್ನು ಸರಿಯಾದ ರೀತಿಯಲ್ಲಿ ಸಂಗ್ರಹಿಸಿ, ವ್ಯವಸ್ಥಿತ ದಾಖಲಾತಿ ಮಾಡುತ್ತಿದ್ದ ಬಗ್ಗೆ ಪರಿಶೀಲಿಸುತ್ತಿದ್ದರು.

ನಗರೀಕರಣ, ಕೈಗಾರಿಕೀಕರಣ, ಆಧುನಿಕರಣ ಮುಂತಾದವು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಹೊಸ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿವೆ. ಕ್ಯಾನ್ಸರ್, ಹೃದ್ರೋಗ, ಏಡ್ಸ್, ಶ್ವಾಸಸಂಬಂಧಿ ರೋಗಗಳು, ಅಂಧತ್ವ, ಪೋಲಿಯೋದಂತಹ ಹೊಸ ಆರೋಗ್ಯ ಸಮಸ್ಯೆಗಳು ಜನರನ್ನು ಪದೇಪದೇ ಕಾಡುತ್ತಿವೆ. ಹೀಗಾಗಿ ಆರೋಗ್ಯ ಹಾಗೂ ವೈದ್ಯಕೀಯ ಸೇವೆಗಳು ನಿರಂತರ ಬದಲಾಗುತ್ತಿರುವ ವ್ಯವಸ್ಥೆಗಳಾಗಿದ್ದು ಹಿಂದೆ ಇದ್ದ ಭಯಾನಕ ಸಾಂಕ್ರಾಮಿಕ ರೋಗಗಳಾದ ಪ್ಲೇಗು, ಸಿಡುಬು, ವಿಷಮಶೀತಜ್ವರ, ಕಾಲರಾ ಮುಂತಾದವು ಈಗ ಸಂಪೂರ್ಣವಾಗಿ ನಿವಾರಣೆಯಾಗಿವೆ ಇಲ್ಲವೆ ನಿಯಂತ್ರಣದಲ್ಲಿವೆ. ಆದರೆ ಕುಷ್ಠ, ಕ್ಷಯ, ಮಲೇರಿಯಾದಂತಹ ಪಿಡುಗುಗಳು ಇನ್ನೂ ಸಮಸ್ಯೆಗಳಾಗಿಯೇ ಪುನರಾವರ್ತಿಸುತ್ತಿವೆ. ಈ ಆರೋಗ್ಯ ಸಮಸ್ಯೆಗಳ ಪರಿಹಾರ ಹಾಗೂ ನಿಯಂತ್ರಣಕ್ಕಾಗಿ ಸತತ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ. **'ಕ್ರಿ.ಶ.೨೦೦೦ಕ್ಕೆ ಎಲ್ಲರಿಗೂ ಆರೋಗ್ಯ'** ಕಾರ್ಯಕ್ರಮದಡಿ ಸರ್ಕಾರ ತನ್ನ ಪ್ರಯತ್ನ ಮುಂದುವರಿಸಿದ್ದು, ಹಲವಾರು ಹೊಸ ಸಂಶೋಧನೆಗಳನ್ನು ಮಾಡುವುದರೊಂದಿಗೆ ರೋಗ ತಡೆಗಟ್ಟುವಲ್ಲಿ, ಮರಣ ಪ್ರಮಾಣ ತಗ್ಗಿಸುವಲ್ಲಿ ಮತ್ತು ಆರೋಗ್ಯವಂತ ಸಮಾಜ ನಿರ್ಮಾಣದ ದಿಶೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

## ಆಯುರ್ವೇದ ಪದ್ಧತಿ

ಆಯುರ್ವೇದ ಪದ್ಧತಿಯು ಪುರಾತನ ಕಾಲದಿಂದಲೂ ಭಾರತದಾದ್ಯಂತ ಅನುಸರಿಸುತ್ತಿದ್ದ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ. ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ಮನುಷ್ಯನ ದೇಹ ಪ್ರಕೃತಿಗೂ ಮತ್ತು ಆ ಪ್ರದೇಶದ ಪ್ರಾಕೃತಿಕ ಗುಣ ಲಕ್ಷಣಗಳಿಗೂ ಹೆಚ್ಚಿನ ಸಂಬಂಧಗಳನ್ನು ಕಲ್ಪಿಸಲಾಗಿದೆ. ಈ ಪದ್ಧತಿಯ ಅಭ್ಯಾಸವು ಸಂಸ್ಕೃತ ಕಲಿಕೆಯ ಒಂದು ಭಾಗವಾಗಿದ್ದು ಅನೇಕ ಸಂಸ್ಕೃತ ವಿದ್ಯಾಭ್ಯಾಸ ಕೇಂದ್ರಗಳಲ್ಲಿ ಈ ಪದ್ಧತಿಯನ್ನು ಪರಿಚಯಿಸಲಾಗುತ್ತಿತ್ತು. ಈಗ ಇದನ್ನು ಕಲಿಸಲಿಕ್ಕಾಗಿಯೇ ಆಯುರ್ವೇದ ಕಾಲೇಜುಗಳು ಆರಂಭಗೊಂಡಿವೆ. ಸಾಮಾನ್ಯವಾಗಿ ಆಯುರ್ವೇದ ವೈದ್ಯರುಗಳಿಗೆ ಮರ ಗಿಡಗಳು, ಆಹಾರ, ಔಷಧಕ್ಕಾಗಿ ಉಪಯೋಗಿಸುವ ಸಸ್ಯಗಳ ವೈದ್ಯಕೀಯ ಗುಣ ಲಕ್ಷಣಗಳ ಬಗ್ಗೆ ತಿಳುವಳಿಕೆ ಇರುತ್ತದೆ. ಹೀಗಾಗಿ ನುರಿತ ಆಯುರ್ವೇದ ವೈದ್ಯನು ಔಷಧೀಯ ಸಸ್ಯ ಮತ್ತು ಇನ್ನಿತರ ಧಾತು ಮೂಲದ ಔಷದಗಳಿಂದ ಅನೇಕ ದೀರ್ಘ ಕಾಲಿಕ ರೋಗಗಳನ್ನು ಶಮನ ಮಾಡಲು ಸಮರ್ಥನಾಗಿರುತ್ತಾನೆ. ಪ್ರಾಚೀನ ಕಾಲದ ಆಯುರ್ವೇದ ಔಷಧ ಪದ್ಧತಿಯು ಸ್ಥಳೀಯವಾಗಿ ದೊರೆಯುವ ಗಿಡ ಮೂಲಿಕೆ, ಸಸ್ಯ ಸಂಪತ್ತುಗಳನ್ನು ಬಳಸಿಕೊಂಡು ರೋಗರುಜಿನಗಳನ್ನು ಉಪಶಮನಗೊಳಿಸುವಲ್ಲಿ ಸಹಾಯಕವಾಗಿದೆ. ಈ ದೇಶೀಯ ವೈದ್ಯ ಪದ್ಧತಿಯು ನಂಬಲರ್ಹವೂ, ಜನಪ್ರಿಯವೂ ಆಗಿದೆ.

ಹಿಂದೆ, ಗಿಡಮೂಲಿಕೆಗಳ ಔಷಧ ಗುಣಗಳನ್ನರಿತ ವೃತ್ತಿನಿರತ ಆಯುರ್ವೇದ ಪಂಡಿತರು ಪ್ರತಿ ಗ್ರಾಮಗಳಲ್ಲಿಯೂ ಇರುತ್ತಿದ್ದರು. ಇಂಥಹ ಒಂದೆರಡು ಕುಟುಂಬಗಳು ಈಗಲೂ ಸಹ ಗ್ರಾಮಗಳಲ್ಲಿ ಕಂಡುಬರುತ್ತವೆ. ಕೆಲವು ಆಯುರ್ವೇದ ಪಂಡಿತರು ಗಿಡಮೂಲಿಕೆಗಳ

ಬಗ್ಗೆ ಅಸಾಮಾನ್ಯ ಜ್ಞಾನ ಹೊಂದಿದವರಾಗಿದ್ದು, ಎಲ್ಲ ರೀತಿಯ ಕಾಯಿಲೆಗಳಿಗೆ ಸತ್ವಯುತ ಔಷಧಿಗಳನ್ನು ನೀಡುತ್ತಿದ್ದರು. ಸಾಮಾನ್ಯ ಕಾಯಿಲೆಗಳಾದ, ನೆಗಡಿ, ಜ್ವರ, ನೋವುಗಳಿಗೆ ಗೃಹ ಔಷಧಿ ಅಥವಾ ನಾಟಿ ಔಷಧಿ ಬಳಕೆಯಲ್ಲಿತ್ತು. ಆಯುರ್ವೇದ ಪದ್ಧತಿಯಲ್ಲಿ ಸಾಂಸ್ಥಿಕ ಶಿಕ್ಷಣ ಪಡೆದ ಕೆಲವು ವೈದ್ಯರು ಈ ಪದ್ಧತಿಯ ಪರಂಪರೆಯನ್ನು ಈಗಲೂ ಮುಂದುವರಿಸಿಕೊಂಡು ಬಂದಿದ್ದಾರೆ.

ಹಿಂದೆ ಮನೆಗಳಲ್ಲಿ ವೃದ್ಧರು ಚೆಕ್ಕೆ, ಬೇರು, ತೊಗಟೆ ಹಾಗೂ ಅರಣ್ಯ ಸಸ್ಯಗಳಿಂದ ಎಣ್ಣೆ ತೆಗೆಯುತ್ತಿದ್ದರು, ಕಷಾಯ ಮಾಡುತ್ತಿದ್ದರು ಹಾಗೂ ಚೂರ್ಣಗಳನ್ನು ಮಾಡಿ ರೋಗಿಗಳಿಗೆ ಔಷಧಿಗಳಾಗಿ ಕೊಡುತ್ತಿದ್ದರು. ಸಾಂಬಾರು ಪದಾರ್ಥಗಳಾದ ಶುಂಠಿ, ಏಲಕ್ಕಿ, ಮೆಣಸು ಮೊದಲಾದವುಗಳನ್ನು ಔಷಧಿ ರೂಪದಲ್ಲಿ ಹೇರಳವಾಗಿ ಉಪಯೋಗಿಸುತ್ತಿದ್ದರು. ಇಂತಹ ಆಯುರ್ವೇದ ವೈದ್ಯಕೀಯ ಪದ್ಧತಿಯನ್ನು ಬೆಳೆಸಿ ಜನರಿಗೆ ಸೇವೆ ಸಲ್ಲಿಸುತ್ತಿದ್ದ ಅನೇಕ ಮನೆತನಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ಅವುಗಳಲ್ಲಿ ಪ್ರಮುಖವಾದವೆಂದರೆ ಮಂಗಳೂರಿನ ಆಯುರ್ವೇದ ಭೂಷಣ ಎಂ.ವಿ.ಶಾಸ್ತ್ರಿ ಹಾಗೂ ಪುತ್ತೂರಿನ ಪಾಣಾಜೆಯಲ್ಲಿರುವ ಶಂಕರನಾರಾಯಣ ಭಟ್ಟರ ಕುಟುಂಬಗಳು (ಪಾಣಾಜೆ ಪಂಡಿತರು ಎಂದು ಪ್ರಸಿದ್ಧಿ). ಎಂ.ವಿ.ಶಾಸ್ತ್ರಿಯವರ ಸ್ಮರಣಾರ್ಥ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಆಯುರ್ವೇದ ಪೀಠವನ್ನು ಸ್ಥಾಪಿಸಲಾಗಿದೆ. ಆಯುರ್ವೇದ ವೈದ್ಯಕೀಯದ ಬಗ್ಗೆ ಸಂಶೋಧನೆ, ವಿಚಾರ ಸಂಕಿರಣ, ಔಷಧಿ ಸಸ್ಯಗಳನ್ನು ಬೆಳೆಸಿ ಉಳಿಸುವುದು ಇತ್ಯಾದಿ ಉದ್ದೇಶಗಳನ್ನು ಈ ಪೀಠ ಹೊಂದಿರುತ್ತದೆ. ಈ ಪೀಠದವರು ಸುಮಾರು ಎರಡು ಎಕರೆ ಸ್ಥಳದಲ್ಲಿ ಔಷಧೀಯ ಸಸ್ಯಗಳ ವನವನ್ನು ನಿರ್ಮಿಸಿರುತ್ತಾರೆ. ಈ ವನದಲ್ಲಿ ೧೫೦ ವರ್ಗಗಳ ಸುಮಾರು ೪೦೦ ಸಸ್ಯಗಳನ್ನು ನೆಟ್ಟು ಬೆಳೆಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ನೆರೆಯ ಕೇರಳದಿಂದಲೂ ವಲಸೆ ಬಂದು ಆರ್ಯುವೇದ ವೈದ್ಯಕೀಯ ಪದ್ಧತಿಯಲ್ಲಿ ತೊಡಗಿಸಿ ಕೊಂಡವರು ಇದ್ದಾರೆ. ಆರ್ಯುವೇದ ಶಿಕ್ಷಣ ಸಂಸ್ಥೆಗಳು ಇವೆ. ಇತ್ತೀಚೆಗೆ ಆರ್ಯುವೇದ ಪದ್ಧತಿಯನ್ನು ಬಳಸುವವರು ಹಳ್ಳಿ ಮತ್ತು ಪಟ್ಟಣಗಳಲ್ಲಿ ಹೆಚ್ಚುತ್ತಿದ್ದಾರೆ.

ಈ ಜಿಲ್ಲೆಯಲ್ಲಿ ನಾಟಿವೈದ್ಯ ಪದ್ಧತಿಯ ಪರಂಪರೆಯೇ ಇದೆ. ನಾಟಿ ಪದ್ಧತಿ ಎಂದರೆ ಶಾಸ್ತ್ರೀಯವಾಗಿ ಆಯುರ್ವೇದ ಶಾಸ್ತ್ರವನ್ನು ಅಭ್ಯಾಸಿಸದೆ ಪರಂಪರೆಯಿಂದ ಬಂದ ಅನುಭವದಿಂದ ರೋಗ ಲಕ್ಷಣಗಳನ್ನು ತಿಳಿದು ಸ್ಥಳೀಯವಾಗಿ ಲಭ್ಯವಿರುವ ಔಷಧೀಯ ಸಸ್ಯದಿಂದ ನೇರವಾಗಿ ಕಷಾಯ, ಲೇಪ, ಗುಳಿಗೆ ಇತ್ಯಾದಿಗಳನ್ನು ತಯಾರಿಸಿ ರೋಗವನ್ನು ನಿಯಂತ್ರಿಸುವ ವಿಧಾನ. ಹಾಗೆಯೇ ಶಾಸ್ತ್ರೀಯವಾಗಿ ಆಯುರ್ವೇದವನ್ನು ಹಿಂದಿನಿಂದಲೂ ಅಭ್ಯಾಸ ಮಾಡುತ್ತಾ ಬಂದಿರುವ ಅನೇಕ ಮನೆತನಗಳಿವೆ. ವಿ ವಿ ಧ ರೀತಿಯ ಗಿಡ ಮೂಲಿಕೆಗಳು ಅನೇಕ ಪ್ರದೇಶಗಳಲ್ಲಿ ಲಭ್ಯವಿದ್ದು, ಅವುಗಳನ್ನು ಬೆಳಸಿಕೊಳ್ಳುವ ಅಭ್ಯಾಸವನ್ನು ಕೆಲವು ಕಡೆಗಳಲ್ಲಿ ಮಾಡಿಕೊಂಡಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಟಿವೈದ್ಯ ಪದ್ಧತಿಯನ್ನು ಅನುಸರಿಸುತ್ತಿರುವ ಬೇರೆ ಬೇರೆ ಜಾತಿ–ಪಂಗಡಗಳ ಅನೇಕ ಮನೆತನಗಳಿವೆ.

ನಾಟಿವೈದ್ಯದಲ್ಲಿ ಬಳಸುವ ಸುಮಾರು ೪೦೦ ವರ್ಗಗಳಿಗೆ ಸೇರಿದ ಔಷಧೀ ಸಸ್ಯಗಳು ಕರಾವಳಿ ಜಿಲ್ಲೆಗಳಲ್ಲಿವೆಯೆಂದು ತಿಳಿಯಲಾಗಿದೆ. ಸುಮಾರು ೪೫ರಷ್ಟು ರೋಗಗಳಿಗೆ ವಿವಿಧ ರೀತಿಯ ನಾಟಿ ಔಷಧಗಳನ್ನು, ಈ ಔಷಧೀಯ ಸಸ್ಯಗಳ ಬೇರು, ತೊಗಟೆ, ನಾರು, ಎಲೆ, ಕಾಂಡಗಳನ್ನು ಬಳಸಿ ತಯಾರಿಸುತ್ತಾರೆ ಎಂದು ತಿಳಿಯಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಕರ್ನಾಟಕ ಆಯುರ್ವೇದ ಕಾಲೇಜು, ಆಯುರ್ವೇದ ವೈದ್ಯಕೀಯ ಶಿಕ್ಷಣವನ್ನು ನೀಡುತ್ತಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ದೇವಾಲಯ ಟ್ರಸ್ಟ್ ವತಿಯಿಂದ ರಾಜ್ಯದ ಇತರ ಜಿಲ್ಲೆಗಳಲ್ಲಿ ಆಯುರ್ವೇದ ಕಾಲೇಜನ್ನು ನಡೆಸಲಾಗುತ್ತಿದೆ. ಮಾತ್ರವಲ್ಲದೆ ಧರ್ಮಸ್ಥಳದಲ್ಲಿ ಪ್ರಕೃತಿ ಚಿಕಿತ್ಸಾಲಯವು ನಾನಾ ರೀತಿಯ ಪ್ರಕೃತಿ ಚಿಕಿತ್ಸೆ ನೀಡುವುದರಲ್ಲಿ ಜನಪ್ರಿಯವಾಗಿದೆ.

ಶ್ರೀಕ್ಷೇತ್ರದಿಂದ ಸಂಚಾರಿ ಆರೋಗ್ಯ ಸೌಲಭ್ಯವನ್ನು ಗ್ರಾಮೀಣ ಜನರಿಗೆ ಒದಗಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಯುರ್ವೇದ ಔಷಧಗಳನ್ನು ತಯಾರಿಸುವ ಕೇಂದ್ರಗಳು ಇವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಮೂಡಬಿದರೆಯ ಆಳ್ವಾಸ್ ಆಯುರ್ವೇದ ಫಾರ್ಮಸಿ, ಪುತ್ತೂರಿನ ಶ್ರೀ ದುರ್ಗಾ ಪರಮೇಶ್ವರಿ ಆಯುರ್ವೇದ ಔಷಧಾಲಯ, ಮಂಗಳೂರಿನ ಶಾಸ್ತ್ರೀ ರೆಮೆಡೀಸ್, ಗಣಪಯ್ಯ ಫಾರ್ಮಸಿ ಹಾಗೂ ಆಳ್ವಾಸ್ ಫಾರ್ಮಸಿಯವರು ಔಷಧೀಯ ಗಿಡ ಮರಗಳನ್ನು ಉಳಿಸಿ ಬೆಳಸಿಕೊಳ್ಳುವ ದೃಷ್ಟಿಯಿಂದ ಆಯುರ್ವೇದ ಸಸ್ಯಗಳ ವನವನ್ನು ರೂಪಿಸಿದ್ದು. ಇದು ಮಿಜಾರು ಶೋಭವನ ಎಂದು ಜನಪ್ರಿಯವಾಗಿದೆ. ಈ ತರಹದ ಆಯುರ್ವೇದ ಗಿಡ, ಮರ,

ಬಳ್ಳಿಗಳ ವನವನ್ನು ಬೆಳೆಸಿ ಕಾಪಾಡುವ ಪ್ರಯತ್ನ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲೂ ಇದೆ. ಜಿಲ್ಲೆಯಲ್ಲಿ ಉತ್ಪಾದನೆ ಆಗುವ ಆಯುರ್ವೇದ ಔಷಧಗಳಿಗೆ ದೇಶಾದ್ಯಂತ ಬೇಡಿಕೆ ಇದೆ. ಕೇರಳದ ಕೋಟೆಕಲ್ ಆರ್ಯವೈದ್ಯ ಶಾಲಾ ಹಾಗೂ ಇತರ ಜನಪ್ರಿಯ ಆಯುರ್ವೇದ ಚಿಕಿತ್ಸಾಲಯಗಳ ಕೇಂದ್ರಗಳು ಜಿಲ್ಲೆಯಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿವೆ. ಮುಸ್ಲಿಮರು ಯುನಾನಿ ವೈದ್ಯಕೀಯ ಪದ್ಧತಿಯನ್ನು ತಂದು ಅನುಸರಿಸುತ್ತಿದ್ದಾರೆ. ಹೋಮಿಯೋಪತಿ ಪದ್ಧತಿಯು ಇತ್ತೀಚಿನ ದಿನಗಳಲ್ಲಿ ಜನಪ್ರಿಯವಾಗುತ್ತಿದೆ.

**ಹೋಮಿಯೊಪತಿ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಮಿಯೋಪತಿ ವೈದ್ಯಕೀಯ ಪದ್ಧತಿಯು ಬಹಳ ಹಿಂದಿನಿಂದಲೂ ಜನಪ್ರಿಯವಾಗಿದೆ. ಜಿಲ್ಲೆಯಲ್ಲಿ ಹೋಮಿಯೋಪತಿ ವೈದ್ಯಕೀಯ ಶಿಕ್ಷಣದ ಕಾಲೇಜು ಇದೆ. ಫಾದರ್ ಮುಲ್ಲರ್ ಮತ್ತು ಸೈಂಟ್ ಸ್ಲೇವಿಯರ್ ಹೋಮಿಯೋಪತಿ ಸಂಸ್ಥೆಗಳು ಹೋಮಿಯೋಪತಿ ಔಷಧಗಳನ್ನು ತಯಾರಿಸಿ ದೇಶದ ವಿವಿಧೆಡೆ ಸರಬರಾಜು ಮಾಡುತ್ತಿವೆ. ಹೋಮಿಯೋಪತಿ ವೈದ್ಯಕೀಯ ಸೇವೆಯನ್ನು ಸಲ್ಲಿಸುತ್ತಿರುವ ಅನೇಕ ವೈದ್ಯರು ಜಿಲ್ಲೆಯಲ್ಲಿ ಇದ್ದಾರೆ.

ಕಳೆದ ೧೧೦ ವರ್ಷಕ್ಕಿಂತಲೂ ಹಿಂದೆ ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನಿನ ಸಮಗ್ರ ರೋಗಿಗಳ ಮತ್ತು ಬಡ ಜನರ ಕಷ್ಟಗಳನ್ನು ದೂರಗೊಳಿಸುತ್ತಿದ್ದ ಮಂಗಳೂರಿನ ಕಂಕನಾಡಿಯಲ್ಲಿ Homeopathic poor Dispersary ಯು ಸೇರಿದಂತೆ ಇತರ ಧರ್ಮಸಂಸ್ಥೆಗಳ ಸಂಸ್ಥಾಪಕರಾದ ರೆವರೆಂಡ್ ಫಾದರ್ ಆಗಸ್ಟಸ್ ಮುಲ್ಲರ್, ಎಸ್.ಜೆ., ಅವರು ಜರ್ಮನಿಯ ವೆಸ್ಟ್ ಫೇಲಿಯಾದಲ್ಲಿ ೧೮೪೧ನೇ ಮಾರ್ಚ್ ೧೮ ರಂದು ಜನ್ಮವೆತ್ತಿದರು. ೧೮೮೦ ರಲ್ಲಿ ಫಾದರ್ ಮುಲ್ಲರರು ಜನತೆಗೆ ಶುದ್ಧವಾದ (ಅಪದ್ರವ್ಯ ವಿಶ್ರಾವಿಲ್ಲದ) ಔಷಧವನ್ನು ಮಿತವಾದ ಬೆಲೆಯಲ್ಲಿ ಒದಗಿಸುವ ಉದ್ದೇಶದಿಂದ ಹೋಮಿಯೋಪತಿಕ್ ಪೂರ್ ಡಿಸ್ಪೆನ್ಸರಿಯನ್ನು ಸ್ಥಾಪಿಸಿದರು.

ವಿಶ್ವಾಸ ಹಾಗೂ ಜನಾದರಣೆಯ ಪ್ರಸಿದ್ಧಿ, ಜೇಸಸ್ ಸೊಸಾಯಿಟಿಯ ಗೌರವಾನ್ವಿತ ಸದಸ್ಯರಾಗಿದ್ದುದರ ಪ್ರಭಾವ ಮತ್ತು ಅವರ ಔಷಧಗಳ ಉತ್ಕೃಷ್ಟತೆ ಹಾಗೂ ಶ್ರೇಷ್ಠತೆ – ಮೊದಲಾದ ಕಾರಣಗಳಿಂದ ಹೋಮಿಯೋಪತಿಕ್–ಪೂರ್ ಡಿಸ್ಪೆನ್ಸರಿಗೆ ಜನಸಾಮಾನ್ಯರಿಂದ ಎಷ್ಟು ಮಟ್ಟಿನ ವಿಶೇಷ ಪ್ರೋತ್ಸಾಹವು ದೊರೆಯಿತೆಂದರೆ, ಆ ದಿನಗಳಲ್ಲಿ ಹಿಂದುಸ್ಥಾನದ ಈ ತರದ ಸಂಸ್ಥೆಗಳಲ್ಲಿ ನಿಸ್ಸಂದೇಹವಾಗಿಯೂ ಇದೇ ಮೊದಲಾಗಿದೆ. ಮಂಗಳೂರಿನ ಹಾಗೂ ಜಿಲ್ಲೆಯ ಬಡ ಕುಷ್ಠರೋಗಿಗಳನ್ನು ಬೇರ್ಪಡಿಸಿ ಅವರ ಚಿಕಿತ್ಸೆಗೆ ಅನುಕೂಲವಾಗುವಂತೆ ೧೮೯೦ ರಲ್ಲಿ ಫಾದರ್ ಮುಲ್ಲರರು ಸೈಂಟ್ ಜೋಸೆಫ್ಸ್ ಲೆಪ್ರಸಿ ಆಸ್ಪತ್ರೆಯನ್ನು ತೆರೆದರು. ಅತ್ಯಂತ ನಂಬುಗೆಗೆ ಪಾತ್ರವಾದ ತನ್ನ ಔಷಧಗಳಿಂದ ಈ ಭಯಾನಕ ರೋಗವನ್ನು ಗುಣಪಡಿಸುವುದೇ ಅವರ ಅಕಾಂಕ್ಷೆಯಾಗಿತ್ತು. ೧೮೯೫ ಮತ್ತು ೧೯೦೧ ರಲ್ಲಿ ಫಾದರ್ ಮುಲ್ಲರರು ಗಂಡಸರಿಗೆ ಹಾಗೂ ಹೆಂಗಸರಿಗೆ ಎರಡು ಪ್ರತ್ಯೇಕ ದೊಡ್ಡ ಆಸ್ಪತ್ರೆಗಳನ್ನು ಕಟ್ಟಿಸಿದರು.

ಮಿಲಾನಿನ 'ಸಿಸ್ಟರ್ಸ್ ಆಫ್ ಚಾರಿಟೀ' ಇವುಗಳ ಪಾರುಪತ್ಯವನ್ನು ನಿರ್ವಹಿಸುತ್ತಿದ್ದಾರೆ. ೧೯೦೨ ರಲ್ಲಿ ಮಂಗಳೂರಿನಲ್ಲಿ ಬ್ಯುಬೋನಿಕ್ ಪ್ಲೇಗ್ ತಲೆದೋರಿದಾಗ ಫಾ.ಮುಲ್ಲರರು ಸರಕಾರೀ ದ್ರವ್ಯ ಸಹಾಯ ಮತ್ತು ಮಂಗಳೂರಿನ ಕ್ರೈಸ್ತ ಬಂಧುಗಳ ಸಹಾಯದಿಂದ ಪ್ಲೇಗಿನಿಂದ ಪೀಡಿತರಾದ ರೋಗಿಗಳ ಚಿಕಿತ್ಸೆಗಾಗಿ ಒಂದು ಆಸ್ಪತ್ರೆಯನ್ನು ನಿರ್ಮಿಸಿದರು. ಫಾದರ್ ಮುಲ್ಲರರ ಮರಣಾನಂತರ ಈ ಸಂಸ್ಥೆಗಳಲ್ಲಿನ ಕೆಲಸದ ಸ್ಥಿರತೆಯ ಕುರಿತು ರೋಗಿಗಳಿಗೂ ಸಾರ್ವಜನಿಕರಿಗೂ ಮಿತ್ರರಿಗೂ ಸಂದೇಹವುಂಟಾಗಲಾರಂಭಿಸಿತು. ಈ ಸಂದಿಗ್ಧ ಸಮಯದಲ್ಲಿ ಫಾದರ್ ಮುಲ್ಲರರಿಂದ ಪ್ರಕಟಿಸಲ್ಪಟ್ಟು ಹಲವು ಆವೃತ್ತಿಗಳಲ್ಲಿ ಹೊರಬಿದ್ದ "ಆರೋಗ್ಯ ಮಾರ್ಗದರ್ಶಕ" ವನ್ನು ಫಾದರ್ ಮುಲ್ಲರರ ಹಿರಿಯ ಶಿಷ್ಯರಾದ ಡಾ.ಎಲ್.ಪಿ.ಫೆರ್ನಾಂಡಿಸರು ೧೯೧೧ ರಲ್ಲಿ ಪರಿಶೋಧನೆ ಸಂಸ್ಕರಿಸಿ ಪ್ರಕಟಿಸಿದರು. ಹಿಂದಿನ ಸಂಸ್ಕರಣ ಗ್ರಂಥಕ್ಕಿಂತ ಈ ಸಂಸ್ಕರಣ ಗ್ರಂಥವು ಅದರ ಎರಡು ಪಟ್ಟು ದೊಡ್ಡದಾಗಿದ್ದು, ಜನತೆಗೆ ಬಹಳ ತೃಪ್ತಿಯನ್ನಿತ್ತು, ಅವರ ಸಂಸ್ಥೆಗಳ ಗೌರವವು ಉಳಿಯುವಂತೆಯೂ, ರೋಗಿಗಳ ಹಾಗೂ ಗಿರಾಕಿಗಳ ವಿಶ್ವಾಸವು ಅಚಲವಾಗಿ ಉಳಿಯುವಂತೆಯೂ ಮಾಡಿತು. ಡಾ.ಎಲ್.ಪಿ.ಫೆರ್ನಾಂಡಿಸರು ೧೯೪೨ ನೆಯ ಡಿಸೆಂಬರ್ ೨೭ ರಂದು ಈ ಸಂಸ್ಥೆಗಳಲ್ಲಿ ತಮ್ಮ ಸೇವಾವಧಿಯ ಸ್ವರ್ಣ ಜಯಂತಿಯನ್ನು ಆಚರಿಸಿದರು; ಅಲ್ಲದೆ ಅವರೇ "ಆರೋಗ್ಯ ಮಾರ್ಗದರ್ಶಕ" ಗ್ರಂಥದ ೧೧ನೇಯ ಆವೃತ್ತಿಯನ್ನೂ ರಚಿಸಿದರು. ಕ್ರಮೇಣ ಹಿಂದುಸ್ಥಾನ, ಬರ್ಮಾ, ಸಿಲೋನ್ ಹಾಗೂ ಇತರ ದೇಶಗಳಲ್ಲಿ ಔಷಧದ ವಿತರಣೆ ಹೆಚ್ಚಾಗುತ್ತಾ ಬಂತು. ವ್ಯಾಪಾರದಲ್ಲಿ ತೀವ್ರವಾದ ಸ್ಪರ್ಧೆಯಿದ್ದರೂ, ಸಾಮಾನ್ಯ ಆರ್ಥಿಕ ಸಂಕಟವಿದ್ದರೂ, ಮೊದಲ (೧೯೧೪–೧೮) ಹಾಗೂ ಎರಡನೆಯ ಜಾಗತಿಕ ಯುದ್ಧಗಳ ಸಮಯದಲ್ಲೂ ಸಂಸ್ಥೆಗಳು

ಜನತೆಯ ಸೇವೆ ಮಾಡುತ್ತಾ ಮುಂದುವರಿದು ಅವರ ಬೇಡಿಕೆಗಳನ್ನು ಈಡೇರಿಸುತ್ತಿವೆ. ಫಾದರ್ ಮುಲ್ಲರರ ನಿಧನದ ಕಾಲದಲ್ಲಿದ್ದ ಸಂಸ್ಥೆಗಳಲ್ಲಿ ಅನೇಕ ಸುಧಾರಣೆಗಳೂ ಹಲವು ಹೊಸ ವಿಭಾಗಗಳೂ ಮಾಡಲ್ಪಟ್ಟಿದ್ದು ಅವು ಈ ಕೆಳಗಿನಂತಿವೆ.

ಒಂದು ಪರಿಪೂರ್ಣವಾದ ಶಸ್ತ್ರ ಚಿಕಿತ್ಸಾಲಯ; ಮಿತ ದರದಲ್ಲಿ ಚಿಕಿತ್ಸೆ ಮಾಡುವ, ಧರ್ಮಗುರುಗಳಿಗೂ ಸಾಮಾನ್ಯ ಜನರಿಗೂ ಇರುವ ಫಾದರ್ ಫ್ರೆಚೆಟಿಯವರ ಸ್ಮಾರಕ ವಿಭಾಗ. ಈ ವಿಭಾಗವು ಎಂಟು ರೋಗಿಗಳಿಗೆ ಯೋಗ್ಯವಾಗಿದ್ದು ಪ್ರತ್ಯೇಕವಾದ ಸೌಲಭ್ಯವಿಲ್ಲದ ಧರ್ಮಗುರುಗಳಿಗೆ ತುಂಬಾ ಸಹಾಯವನ್ನಿತ್ತಿದೆ. ಮೇಲೆ ಹೇಳಿದಂತೆಯೇ ನಾಲ್ಕು ರೋಗಿಗಳಿಗೆ ಯೋಗ್ಯವಾದ ಮತ್ತು ಹೆಂಗಸರಿಗಾಗಿರುವ ಲಿಟ್ಲ್ ಫ್ಲವರ್ ವಿಭಾಗ; ಕುಷ್ಠದ ಆಸ್ಪತ್ರೆ ಮತ್ತು ಆಶ್ರಮದ ಮೊದಲ ಕಟ್ಟಡಗಳು ಹೊಸ ಮಾದರಿಯ ವಿಭಾಗಗಳಿಂದ ವಿಸ್ತರಿಸಲ್ಪಟ್ಟಿವೆ; ಸಂಸ್ಥಾಪಕರಿಂದ ತೋಡಿಸಲ್ಪಟ್ಟ ಬಾವಿಗಳಲ್ಲದೇ ಈ ವಿಶಾಲವಾದ ಸಂಸ್ಥೆಗಳಿಗೆ ಧಾರಾಳ ನೀರಿನ ಸರಬರಾಯಿ ಮಾಡುವುದಕ್ಕಾಗಿ ಎರಡು ದೊಡ್ಡ ಬಾವಿಗಳು ತೋಡಲ್ಪಟ್ಟಿವೆ. ವಿದ್ಯುತ್ತಿನಿಂದ ನಡೆವ ಪಂಪುಗಳು ಉಪಯೋಗಿಸಲ್ಪಡುತ್ತಿವೆ.

ಬೇಸಿಗೆ ಕಾಲದ ನೀರಿನ ಸಂಕಷ್ಟವು ಈ ರೀತಿ ಬಗೆಹರಿಸಲ್ಪಟ್ಟಿದೆ; ಈ ಕಟ್ಟಡವು ವಿಶಾಲವೂ ಆರೋಗ್ಯದಾಯಕವೂ ಆಗಿದ್ದು, ಕ್ಲುಪ್ತ ಸಮಯಕ್ಕೆ ವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವಂತೆ ಆಸ್ಪತ್ರೆಗಳ ಸಮೀಪದಲ್ಲೇ ಇದೆ; ೧೯೮೮ರಲ್ಲಿ ಹೊಸ ಕ್ಷ–ಕಿರಣ ಘಟಕ (Radiology)ದ ವಿಭಾಗವೊಂದನ್ನು ತೆರೆಯಲಾಯಿತು. ಈ ವಿಭಾಗವು ಈ ಸಂಸ್ಥೆಯ ಒಳರೋಗಿಗಳಷ್ಟೇ ಅಲ್ಲದೆ ಜಿಲ್ಲೆಯ ಹಾಗೂ ಸಮೀಪದ ಜಿಲ್ಲೆಗಳ ರೋಗಿಗಳ ಹಲಕಾಲದ ಕೋರಿಕೆಯನ್ನು ಪೂರೈಸಿದೆ. ಹಾಗೂ ಇದು Surface Therapyಯ ಸೌಕರ್ಯಗಳುಳ್ಳ ಹೊಸರೋಗ ತಪಾಸಣಾ ಘಟಕ (Diagnostic unit),Ultra Violet Ray Unit, ಹಾಗೂ Indecto Thermia Therapy ವಿಭಾಗವನ್ನೊಳಗೊಂಡಿದೆ. ಸೂತಿಕಾ ಹಾಗೂ ಸ್ತ್ರೀ ಸಂಬಂಧವಾದ ಆಸ್ಪತೆಯನ್ನು ಇತ್ತೀಚೆಗೆ ತೆರೆದ ಮೇಲೆ, ಜನರ ಅತ್ಯಾವಶ್ಯಕವಾದ ಕೋರಿಕೆಯು ಪೂರ್ತಿಯಾಯಿತು. ೧೫ ಬಡರೋಗಿಗಳಿಗೆ ಸ್ಥಳವೂ, ಧನವೀಯುವವರಿಗೆ ಪ್ರತ್ಯೇಕ ಕೋಣೆಗಳೂ ಇದರಲ್ಲಿವೆ.

**ಜನಸಂಖ್ಯೆ ಹಾಗೂ ಜನನ–ಮರಣ ಪ್ರಮಾಣ**

ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆ ೧೯೦೧ ರಲ್ಲಿ ೮,೯೮,೩೮೦ ಆಗಿತ್ತು; ೨೦೦೧ ರಲ್ಲಿ ಅದು ೧೮,೯೭,೭೩೦ ಕ್ಕೆ ಹೆಚ್ಚಿದೆ. ತೊಂಬತ್ತರ ದಶಕದಲ್ಲಿ ಎಂಟು ತಾಲೂಕುಗಳನ್ನು ಒಳಗೊಂಡಿದ್ದ ಈ ಜಿಲ್ಲೆ ವಿಭಾಗಗೊಂಡು, ಉಡುಪಿ, ಕುಂದಾಪುರ, ಮತ್ತು ಕಾರ್ಕಳ ತಾಲೂಕುಗಳು ಬೇರ್ಪಟ್ಟು ಉಡುಪಿ ಜಿಲ್ಲೆಯಾಗಿರುವುದನ್ನು ಇಲ್ಲಿ ಗಮನಿಸಬೇಕು.

೧೯೬೦, ೧೯೭೦ ಹಾಗೂ ಎಂಬತ್ತು ದಶಕದಲ್ಲಿ ಜನಸಂಖ್ಯೆ ಹೆಚ್ಚಳ ಪ್ರಮಾಣವು ಕ್ರಮವಾಗಿ ಶೇಖಡಾ ೧೭.೫೦, ೨೪.೦೧ ಹಾಗೂ ೨೩ ರಷ್ಟು ಆಗಿತ್ತು. ೧೯೪೧–೫೦ ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಾಸರಿ ಜನನ ದರವು ಮಿಲಿಯಕ್ಕೆ ೩೫.೫ ಆಗಿತ್ತು. ಆಗಿನ ಮದ್ರಾಸ್ ರಾಜ್ಯದ ಸರಾಸರಿಗೆ (೩೧.೭) ಹೋಲಿಸಿದರೆ ಇದು ಹೆಚ್ಚಾಗಿತ್ತು. ಇದೇ ಅವಧಿಯಲ್ಲಿ ಸರಾಸರಿ ಮರಣ ದರವು ಜಿಲ್ಲೆಯಲ್ಲಿ ಒಂದು ಮಿಲಿಯಕ್ಕೆ ೧೯.೫ ಆಗಿತ್ತು. ಇದು ಮದ್ರಾಸು ರಾಜ್ಯದ ಸರಾಸರಿಗೆ ಹೋಲಿಸಿದರೆ (೨೧.೫) ಕಡಿಮೆ ಆಗಿತ್ತು.

ಜನನ ದರವು ೧೯೪೧ ರಿಂದ ೧೯೪೫ ಕ್ಕೆ ಕಡಿಮೆಯಾಗಿತ್ತು ಬಳಿಕ ಹೆಚ್ಚಾಲಾರಂಭಿಸಿತು. ಮರಣ ಪ್ರಮಾಣವು ಈ ದಶಕದಲ್ಲಿ ೧೯೪೪ ರ ಹೊರತಾಗಿ ಕೆಳಮುಖವಾಗಿತ್ತು. ಜಿಲ್ಲೆಯಲ್ಲಿ ಕಾಣಿಸಿಕೊಂಡ ಜ್ವರದ ಕಾರಣ ೧೯೫೫ ರಲ್ಲಿ ಮರಣ ಪ್ರಮಾಣವು (Mortality) ಗಮನಾರ್ಹವಾಗಿ ಹೆಚ್ಚಾಗಿತ್ತು. ೧೯೪೧–೫೦ ರ ದಶಕದಲ್ಲಿ ಜ್ವರದಿಂದ ಮರಣಹೊಂದಿರುವವರ ಸಂಖ್ಯೆ ಒಟ್ಟು ಮರಣದ ಸರಾಸರಿ ಶೇ.೩೨ ಆಗಿತ್ತು. ಈ ಸಂಖ್ಯೆಯು ೧೯೪೧–೪೫ ರಲ್ಲಿ ಸುಮಾರು ಒಂದು ಮಿಲಿಯಕ್ಕೆ ೭.೪ ಆಗಿತ್ತು. ೧೯೪೬–೫೦ ರ ಅವಧಿಗೆ ಸುಮಾರು ೫.೧ ಮಿಲಿಯಕ್ಕೆ ಇಳಿಯಿತು. ಈ ದಶಕ ಕೊನೆಯ ವರ್ಷಗಳಲ್ಲಿ (Maternal deaths) ಸ್ತ್ರೀ ಮರಣ (ಹೆರಿಗೆ ಸಮಯ ಅಥವಾ ಬಾಣಂತಿ ಸಮಯ ಆಗುವ ಮರಣ) ಕಡಿಮೆ ಆಯಿತು. ಇದು ೧೯೪೭ ರಲ್ಲಿ ೧೦೦೦ಕ್ಕೆ ೮.೨೬ ಇದ್ದದು ೧೯೫೦ರಲ್ಲಿ ೧೦೦೦ಕ್ಕೇ ೪.೨೩ಗೆ ಇಳಿಯಿತು. ಕೋಷ್ಠಕ ೧೫.೧ ಜಿಲ್ಲೆಯ ಜನಸಂಖ್ಯೆಯ ಹೆಚ್ಚಳವನ್ನು ತಿಳಿಸುತ್ತದೆ.

**ಕೋಷ್ಟಕ ೧೫.೧ : ದಕ್ಷಿಣ ಕನ್ನಡ ಜಿಲ್ಲೆಯ ಹಲವು ದಶಕಗಳ ಜನಸಂಖ್ಯಾ ಬೆಳವಣಿಗೆ**

| ವರ್ಷ | ಒಟ್ಟು ಜನಸಂಖ್ಯೆ | ವ್ಯತ್ಯಾಸ | ದಶಕದ ಶೇಕಡಾ ವ್ಯತ್ಯಾಸ |
|---|---|---|---|
| ೧೯೦೧ | ೮,೯೮,೩೮೦ | – | – |
| ೧೯೧೧ | ೯,೪೧,೦೫೮ | + ೪೩,೨೭೮ | +೪.೮೨ |
| ೧೯೨೧ | ೯,೮೪,೦೫೪ | +೪೨,೩೯೬ | +೪.೫೦ |
| ೧೯೩೧ | ೧೦,೬೩,೧೫೬ | +೯,೧೦೨ | +೮.೦೪ |
| ೧೯೪೧ | ೧೧,೭೩,೫೩೮ | +೧,೧೦,೩೮೨ | +೧೦.೩೮ |
| ೧೯೫೧ | ೧೩,೩೦,೯೧೭ | +೧,೫೭,೩೭೯ | +೧೩.೪೧ |
| ೧೯೬೧ | ೧೫,೬೩,೮೩೭ | +೨,೩೨,೯೨೭ | +೧೭.೫೦ |
| ೧೯೭೧ | ೧೯.೩೯,೩೧೫ | +೩,೭೫,೪೭೮ | +೨೪.೦೧ |
| ೧೯೮೧ | ೨೩,೭೭,೦೦೦ | +೪,೩೭,೬೮೫ | +೨೩.೦೦ |
| ೧೯೯೧ | ೨೬,೯೨,೦೦೦ | +೩,೧೫,೦೦೦ | +೧೩.೦೦ |
| ೨೦೦೧ | ೧೮,೯೭,೭೩೦ | –೧೮,೯೫,೦೩೮ | – |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

ಜನನ ದರವು ೧೯೮೪ ರಲ್ಲಿ ಸ್ವಲ್ಪ ಕಡಿಮೆಯಾಗಿ ೧೯೮೮ ರಲ್ಲಿ ಗಮನಾರ್ಹವಾಗಿ ಕಡಿಮೆಯಾಯಿತು. ಈ ವರ್ಷಗಳಲ್ಲಿ ಪ್ರತಿ ತಿಂಗಳಲ್ಲಿ ಆಗಿರುವ ಜನನವನ್ನು ಗಮನಿಸಿದರೆ ಮಾರ್ಚ್–ಜುಲೈ ತಿಂಗಳಲ್ಲಿ ಹೆಚ್ಚು, ಸೆಪ್ಟಂಬರ್– ಅಕ್ಟೋಬರ್‌ಗಳಲ್ಲಿ ಕಡಿಮೆ ಎಂಬುದನ್ನು ಗಮನಿಸಬಹುದು. ಈ ಅವಧಿಯಲ್ಲಿ ಮರಣಕ್ಕೆ ಮುಖ್ಯ ಕಾರಣವಾದ ರೋಗಗಳನ್ನು ಗುರುತಿಸಿದರೆ, ಜ್ವರ (ಶೇಖಡಾ ೩೫.೬೩), ಬೇಧಿ (ಶೇಖಡಾ ೯.೨೪), ಸಿಡುಬು (ಶೇಖಡಾ ೨.೪೪) ಕಾಲರಾ (ಶೇಖಡಾ ೧.೫೪) ಹಾಗೂ ಇತರ ರೋಗಗಳಿಂದ (ಶೇಖಡಾ ೪೯) ಎಂದು ಗುರುತಿಸಲಾಗಿದೆ. ೧೯೮೨–೧೯೯೨ ರ ಅವಧಿಯಲ್ಲಿ, ಜಿಲ್ಲೆಯ ಜನನ ಮರಣಗಳ ಅಂಕಿಅಂಶವನ್ನು ಕೋಷ್ಟಕ ೧೫.೨ ರಲ್ಲಿ ಗಮನಿಸಬಹುದು.

**ಕೋಷ್ಟಕ ೧೫.೨ : ದಕ್ಷಿಣ ಕನ್ನಡ ಜಿಲ್ಲೆಯ ಜನನ–ಮರಣ ಅಂಕಿ ಅಂಶಗಳು**

| ವರ್ಷ | ಜನಸಂಖ್ಯೆ | ಒಟ್ಟು ಜನನ | | | ಒಟ್ಟು ಮರಣ | | |
|---|---|---|---|---|---|---|---|
| | ವಾರ್ಷಿಕ ಸರಾಸರಿ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ |
| ೧೯೮೨ | ೯೬೮,೪೦೦ | ೨೫,೫೩೦ | ೧೩,೦೪೭ | ೧೨,೪೮೩ | ೧೫,೮೪೦ | ೮,೪೨೫ | ೭,೪೧೫ |
| ೧೯೮೩ | ೯೭೭,೮೦೦ | ೨೭,೬೨೪ | ೧೪,೦೯೧ | ೧೩,೫೩೩ | ೨೦,೨೨೦ | ೧೦.೬೪೭ | ೯,೫೮೨ |
| ೧೯೮೪ | ೯೮೭,೨೦೦ | ೨೭,೨೧೩ | ೧೩,೮೨೩ | ೧೩,೩೯೦ | ೨೩,೯೫೨ | ೧೨,೧೩೧ | ೧೧,೮೨೧ |
| ೧೯೮೫ | ೯೯೬,೭೦೦ | ೨೭,೭೬೧ | ೧೪,೨೩೩ | ೧೩,೫೨೮ | ೨೪,೭೧೦ | ೧೨,೮೧೪ | ೧೧,೮೯೬ |
| ೧೯೮೬ | ೧,೦೦೬,೩೦೦ | ೩೧,೨೫೩ | ೧೬,೦೪೭ | ೧೫,೨೦೬ | ೨೧,೭೭೮ | ೧೧,೧೬೧ | ೧೦.೬೧೭ |
| ೧೯೮೭ | ೧,೦೧೬,೦೦೦ | ೩೩,೧೧೭ | ೧೬,೯೭೭ | ೧೬,೧೪೦ | ೧೯,೯೯೮ | ೧೦,೪೨೧ | ೯,೫೭೭ |
| ೧೯೮೮ | ೧,೦೨೫,೦೦೦ | ೩೦,೮೩೧ | ೧೫,೮೭೮ | ೧೪,೯೫೩ | ೨೪,,೧೮೯ | ೧೨,೭೧೭ | ೧೧,೪೭೨ |
| ೧೯೮೯ | ೧,೦೩೫,೭೦೦ | ೩೦,೫೪೪ | ೧೫,೪೮೦ | ೧೫,೦೦೪ | ೨೦,೦೧೭ | ೧೦,೪೦೦ | ೯,೫೨೭ |
| ೧೯೯೦ | ೧,೦೪೫,೮೦೦ | ೩೦.೮೫೪ | ೧೫,೬೩೮ | ೧೫,೨೧೬ | ೨೫,೩೪೧ | ೧೩,೨೫೪ | ೧೨,೦೮೭ |
| ೧೯೯೧ | ೧,೦೫೫,೮೦೦ | ೩೦,೮೦೮ | ೧೫,೭೬೯ | ೧೫,೦೩೯ | ೧೯,೭೨೨ | ೧೦,೩೫೯ | ೯,೩೬೩ |
| ೧೯೯೨ | ೧,೦೬೬,೦೦೦ | ೩೩,೫೮೦ | ೧೬,೯೬೭ | ೧೬,೬೧೩ | ೨೩,೪೫೩ | ೧೨,೦೮೪ | ೧೧,೩೬೯ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ

೧೯೦೦ ರ ಬಳಿಕ ಗಮನಿಸಿದರೆ, ಅರವತ್ತರ ದಶಕದ ಪ್ರಾರಂಭದಲ್ಲಿ ಜನನ ದರವು ಅತ್ಯಂತ ಹೆಚ್ಚಾಗಿತ್ತು. ೧೯೬೮ ರಲ್ಲಿ ಜನನ ಸಂಖ್ಯೆಯು ಕಡಿಮೆಯಾಯಿತು. ೧೯೬೪ ಹಾಗೂ ೧೯೬೮ ರಲ್ಲಿ ಮರಣ ಸಂಖ್ಯೆಯು ಕಡಿಮೆಯಾಗಿತ್ತು. ಕೋಷ್ಠಕ ೧೫.೩ರಲ್ಲಿ ಈ ಅಂಶವನ್ನು ಗಮನಿಸಬಹುದು.

**ಕೋಷ್ಠಕ ೧೫.೩ : ದಕ್ಷಿಣ ಕನ್ನಡ ಜಿಲ್ಲೆಯ ಜನನ–ಮರಣ ಅಂಕಿ ಅಂಶಗಳು**

| ವರ್ಷ | ಜನನ ಸಂಖ್ಯೆ | ಮರಣ ಸಂಖ್ಯೆ |
|---|---|---|
| ೧೯೬೧ | ೫೬,೪೦೭ | ೧೭,೫೯೮ |
| ೧೯೬೨ | ೫೩,೭೦೫ | ೧೬,೭೮೯ |
| ೧೯೬೩ | ೪೮,೭೪೮ | ೧೪,೪೦೨ |
| ೧೯೬೪ | ೩೪.೪೭೩ | ೯,೪೧೮ |
| ೧೯೬೫ | ೪೧,೪೧೩ | ೧೨,೦೭೭ |
| ೧೯೬೬ | ೩೮,೩೦೧ | ೧೦,೯೭೧ |
| ೧೯೬೭ | ೩೬,೨೩೩ | ೧೨,೫೦೦ |
| ೧೯೬೮ | ೩೪,೨೬೫ | ೯,೯೧೪ |
| ೧೯೬೯ | ೩೭,೮೫೭ | ೧೦,೫೪೧ |
| ೧೯೭೦ | ೩೯,೩೪೬ | ೯,೮೯೩ |

**ಕೋಷ್ಟಕ ೧೫.೪ ಹಿಂದಿನ ಕೆಲವು ವರ್ಷಗಳಲ್ಲಿ ವಿವಿಧ ರೋಗಗಳಿಂದ ಸಂಭವಿಸಿದ ಸಾವುಗಳ ವಿವರ.**

| ರೋಗಗಳು | ಮರಣದ ಸಂಖ್ಯೆ | | | | |
|---|---|---|---|---|---|
| | ೧೯೫೬ | ೧೯೫೭ | ೧೯೫೮ | ೧೯೫೯ | ೧೯ |
| ಕಾಲರಾ | – | – | ೫ | – | ೧ |
| ಜ್ವರ | ೨,೨೮೭ | ೪,೪೩೭ | ೩,೬೬೦ | ೩,೨೨೮ | ೨,೯೨೨ |
| ಸಿಡುಬು | ೩ | ೧೨ | ೮೯ | ೪೯ | ೪೧ |
| ಪ್ಲೇಗ್ | – | – | ೫ | ೭ | – |
| ಭೇದಿ | ೫೦೬ | ೮೧೬ | ೭೬೪ | ೮೧೨ | ೫೯೮ |
| ಶ್ವಾಸಸಂಬಂಧಿ ರೋಗಗಳು | ೪೫೫ | ೧,೪೮೪ | ೧,೫೫೪ | ೧,೦೬೭ | ೧,೩೩೩ |
| ಮಲೇರಿಯಾ | ೧೧೬ | ೯೨ | ೧೩೭ | ೯೫ | ೬೬ |
| ಒಟ್ಟು | ೩,೩೬೭ | ೬,೮೪೧ | ೬,೨೧೪ | ೫,೨೫೮ | ೪,೯೬೧ |

**ಆಧಾರ :** ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

೧೯೮೨ –೯೨ ರ ಅವಧಿಯಲ್ಲಿ ಮಂಗಳೂರು ನಗರದಲ್ಲಿ ನೊಂದಾಯಿಸಿರುವ ಜನನ–ಮರಣದ ಅಂಕಿಅಂಶವನ್ನು ಕೋಷ್ಟಕ ೧೫.೫ ರಿಂದ ತಿಳಿಯಬಹುದು. ಆ ಅವಧಿಯಲ್ಲಿ ಸ್ತ್ರೀಯರ ಜನನಕ್ಕೆ ಹೋಲಿಸಿದರೆ ಪುರುಷರ ಜನನ ಹೆಚ್ಚಾಗಿತ್ತು. ಸಂಭವಿಸಿದ ಮರಣದಲ್ಲೂ ಈ ಅಂಶವನ್ನು ಗಮನಿಸಬಹುದು. ವಿವಿಧ ವರ್ಗಗಳ ಜನನ ಮರಣ ಪ್ರಮಾಣವನ್ನೂ ಈ ಕೋಷ್ಠಕದಿಂದ ಗಮನಿಸಬಹುದು.

**ಕೋಷ್ಟಕ ೧೫.೫ : ಮಂಗಳೂರು ನಗರದಲ್ಲಿ ನೋಂದಾಯಿಸಿದ ಜನನ–ಮರಣ ಸಂಖ್ಯೆ (೧೯೮೨–೧೯೯೨)**

| ವರ್ಷ | | ೧೯೮೨ | ೧೯೮೩ | ೧೯೮೪ | ೧೯೮೫ | ೧೯೮೬ | ೧೯೮೭ | ೧೯೮೮ | ೧೯೮೯ | ೧೯೯೦ | ೧೯೯೧ | ೧೯೯೨ |
|---|---|---|---|---|---|---|---|---|---|---|---|---|
| **ಜನನ** | | | | | | | | | | | | |
| | ಒಟ್ಟು | ೧,೦೨೭ | ೧,೦೧೨ | ೯೩೦ | ೯೨೭ | ೧,೦೨೨ | ೧೪೫೭ | ೧,೧೯೫ | ೧,೨೭೩ | ೧,೦೧೨ | ೧,೨೫೭ | ೧,೩೨೨ |
| | ಪುರುಷ | ೫೩೩ | ೫೫೪ | ೪೯೮ | ೪೮೭ | ೫೫೬ | ೭೩೨ | ೬೧೯ | ೬೮೪ | ೫೩೩ | ೬೬೪ | ೬೪೪ |
| | ಮಹಿಳೆ | ೪೯೪ | ೪೫೮ | ೪೩೨ | ೪೪೦ | ೪೬೬ | ೭೨೫ | ೫೭೬ | ೫೮೯ | ೪೭೯ | ೫೯೩ | ೬೭೮ |
| **ಧರ್ಮವಾರು ಜನನ** | | | | | | | | | | | | |
| | ಹಿಂದು | ೫೯೭ | ೫೯೮ | ೫೧೭ | ೫೧೮ | ೫೩೪ | ೭೯೩ | ೬೮೨ | ೭೨೧ | ೫೫೫ | ೭೧೪ | ೭೦೮ |
| | ಮುಸ್ಲಿಮ್ | ೧೪೮ | ೧೩೧ | ೧೪೫ | ೧೩೫ | ೨೧೩ | ೨೬೭ | ೧೯೭ | ೨೩೫ | ೧೬೭ | ೨೧೬ | ೨೩೬ |
| | ಕ್ರಿಶ್ಚಿಯನ್ | ೨೮೨ | ೨೮೩ | ೨೬೮ | ೨೭೪ | ೨೭೫ | ೩೯೭ | ೩೧೬ | ೩೧೭ | ೨೯೦ | ೩೨೭ | ೩೭೮ |
| **ಮರಣ** | | | | | | | | | | | | |
| | ಒಟ್ಟು | ೮೦೫ | ೮೧೩ | ೬೪೩ | ೮೮೯ | ೮೩೭ | ೧,೧೨೨ | ೧,೩೧೧ | ೯೫೮ | ೭೬೪ | ೮೩೪ | ೧,೨೫೫ |
| | ಪುರುಷ | ೪೧೨ | ೪೪೦ | ೩೫೫ | ೪೩೪ | ೪೨೪ | ೫೪೧ | ೬೬೪ | ೪೬೬ | ೩೯೧ | ೪೧೦ | ೬೩೨ |
| | ಮಹಿಳೆ | ೩೯೩ | ೩೭೩ | ೨೮೮ | ೪೫೫ | ೪೧೩ | ೫೮೧ | ೬೪೭ | ೪೯೨ | ೩೭೩ | ೪೨೪ | ೬೨೩ |
| **ಧರ್ಮವಾರು ಮರಣ** | | | | | | | | | | | | |
| | ಹಿಂದು | ೪೪೮ | ೪೮೩ | ೩೬೮ | ೪೯೩ | ೪೫೯ | ೬೦೨ | ೭೯೯ | ೫೭೨ | ೪೩೯ | ೪೬೭ | ೬೮೭ |
| | ಮುಸ್ಲಿಮ್ | ೧೭೦ | ೧೮೦ | ೧೪೧ | ೧೯೧ | ೧೭೬ | ೨೮೭ | ೨೪೪ | ೧೯೯ | ೧೬೧ | ೧೬೩ | ೨೨೫ |
| | ಕ್ರಿಶ್ಚಿಯನ್ | ೧೮೭ | ೧೫೦ | ೧೩೪ | ೨೦೪ | ೨೦೨ | ೨೩೩ | ೨೬೮ | ೧೮೭ | ೧೬೪ | ೨೦೪ | ೩೪೪೩ |
| | ಇತರರು | – | – | – | ೧ | – | – | – | – | – | – | – |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

ವರ್ಷದ ವಿವಿಧ ತಿಂಗಳುಗಳಲ್ಲಿ ಸಂಭವಿಸಿದ ಜನನ ಪ್ರಮಾಣವನ್ನು (ಕೋಷ್ಟಕ ೧೫.೭) ಗಮನಿಸಿದರೆ ಪ್ರತಿ ತಿಂಗಳ ಸರಾಸರಿ ಜನನ ಪ್ರಮಾಣ ಜೂನ್, ಜುಲೈಗಳಲ್ಲಿ ಹೆಚ್ಚಾಗಿತ್ತು. ಮಳೆಗಾಲದ ಜುಲೈ–ಆಗಸ್ಟ್‌ಗಳಲ್ಲಿ ಸರಾಸರಿ ಮರಣ ಪ್ರಮಾಣವು ಹೆಚ್ಚಾಗಿರುವುದನ್ನು ಗಮನಿಸಬಹುದು. ಕೋಷ್ಟಕ ೧೫.೬ ರಲ್ಲಿ ೧೮೮೨–೯೨ರಲ್ಲಿ ದಶಕದ ವಿವಿಧ ತಿಂಗಳುಗಳಲ್ಲಿ ಸಂಭವಿಸಿದ ಮರಣವನ್ನು ತಿಳಿಯಬಹುದು.

**ಕೋಷ್ಟಕ ೧೫.೬ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲ ವರ್ಷಗಳ ವಿವಿಧ ತಿಂಗಳುಗಳಲ್ಲಿ ನೋಂದಾಯಿಸಿದ ಜನನ ಪ್ರಮಾಣ (೧೮೮೨–೧೯೯೨)**

| ವರ್ಷ | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸಂಬರ್ | ಒಟ್ಟು |
|---|---|---|---|---|---|---|---|---|---|---|---|---|---|
| ೧೮೮೮ | ೨,೮೪೨ | ೨,೬೭೯ | ೨,೭೯೨ | ೨.,೭೬೮ | ೨,೬೩೮ | ೨,೯೬೬ | ೨,೯೯೬ | ೨,೪೨೪ | ೨,೧೧೦ | ೧,೯೪೬ | ೨,೧೬೦ | ೨,೪೯೭ | ೩೦,೮೧೮ |
| ೧೮೮೯ | ೨,೪೬೫ | ೨,೩೪೭ | ೨.೬೯೬ | ೨,೫೮೯ | ೨,೬೨೫ | ೩.೦೭೫ | ೨,೯೯೧ | ೨,೫೧೪ | ೧,೯೬೨ | ೨,೧೫೯ | ೨,೨೯೬ | ೨,೮೧೩ | ೩೦,೫೩೨ |
| ೧೯೯೦ | ೩,೨೨೮ | ೨,೮೯೩ | ೨,೮೮೮ | ೨,೭೪೭ | ೨,೮೧೩ | ೨.೭೨೭ | ೨,೭೬೬ | ೨,೪೨೯ | ೧,೯೯೬ | ೧,೯೩೯ | ೨,೧೦೩ | ೨,೩೧೨ | ೩೦,೮೪೧ |
| ೧೯೯೧ | ೨,೪೧೨ | ೨,೨೭೦ | ೨,೨೯೩ | ೨,೫೨೬ | ೨,೫೯೧ | ೩.೦೮೫ | ೩,೩೧೪ | ೨,೬೯೦ | ೨,೨೩೭ | ೨,೨೨೫ | ೨,೩೩೬ | ೨,೮೧೬ | ೩೦,೭೯೫ |
| ೧೯೯೨ | ೩,೧೩೦ | ೨.೯೫೨ | ೩,೦೭೩ | ೨,೯೮೧ | ೨,೯೮೦ | ೩.೩೨೩ | ೩,೨೬೭ | ೨,೭೪೫ | ೨,೨೪೧ | ೨,೧೯೧ | ೨,೧೫೬ | ೨,೫೬೧ | ೩೩,೫೭೦ |
| ಒಟ್ಟು | ೧೪,೦೭೭ | ೧೩,೧೪೧ | ೧೩,೭೪೨ | ೧೩,೬೧೧ | ೧೩,೬೪೭ | ೧೫.೧೭೬ | ೧೫,೩೩೪ | ೧೨,೮೦೨ | ೧೦,೫೪೬ | ೧೦,೪೬೦ | ೧೧,೦೫೧ | ೧೨.೯೬೯ | ೧೫೬,೫೫೬ |
| ಸರಾಸರಿ | ೨,೩೧೬ | ೨,೬೨೮ | ೨,೭೪೮ | ೨,೭೨೨ | ೨,೭೨೯ | ೩.೦೩೫ | ೨,೫೬೧ | ೨,೫೬೧ | ೨,೧೦೯ | ೨,೦೯೨ | ೨,೨೧೦ | ೨,೫೯೪ | ೩೧,೩೧೧ |
| ಪ್ರತಿ ತಿಂಗಳ ಜನನ ಪ್ರಮಾಣ % | ೮.೯೯ | ೮.೩೯ | ೮,೭೮ | ೮.೬೯ | ೮.೭೨ | ೯.೬೯ | ೯.೮೦ | ೮.೧೮ | ೬.೭೪ | ೬.೬೮ | ೭.೦೮ | ೮.೨೮ | ೧೦೦.೦೦ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

**ಕೋಷ್ಟಕ ೧೫.೭ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ವರ್ಷದ ಪ್ರತಿ ತಿಂಗಳಲ್ಲಿ ನೋಂದಾಯಿಸಿದ ಮರಣ ಪ್ರಮಾಣ**

| ವರ್ಷ | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟಂಬರ್ | ಅಕ್ಟೋಬರ್ | ನವೆಂಬರ್ | ಡಿಸಂಬರ್ | ಒಟ್ಟು |
|---|---|---|---|---|---|---|---|---|---|---|---|---|---|
| ೧೮೮೨ | ೧,೫೨೭ | ೧,೬೧೩ | ೧,೨೮೧ | ೧,೦೦೭ | ೧,೦೯೮ | ೧,೨೬೪ | ೧,೫೪೪ | ೧,೪೫೪ | ೧,೨೮೭ | ೧,೨೬೦ | ೧.೧೨೫ | ೧,೩೮೨ | ೧೫,೮೩೭ |
| ೧೮೮೩ | ೧,೭೪೩ | ೧,೪೭೭ | ೧,೩೩೮ | ೧,೧೭೯ | ೧,೩೫೯ | ೧,೯೩೨ | ೨,೬೧೪ | ೧,೯೩೯ | ೧,೭೨೫ | ೧,೪೬೩ | ೧,೪೩೬ | ೨,೦೧೫ | ೨೦,೨೨೦ |
| ೧೮೮೪ | ೨,೦೫೩ | ೧,೮೫೬ | ೧,೬೩೬ | ೧,೪೩೧ | ೧,೬೮೬ | ೨,೦೭೧ | ೨,೯೯೫ | ೨,೭೭೩ | ೨,೦೮೫ | ೧,೮೩೫ | ೧,೬೯೭ | ೧,೮೩೩ | ೨೩,೯೫೧ |
| ೧೮೮೫ | ೨,೨೦೧ | ೧,೮೪೫ | ೧,೬೮೪ | ೧,೫೧೮ | ೧,೬೧೨ | ೨,೦೫೦ | ೩,೦೦೪ | ೨,೬೦೧ | ೨,೨೪೬ | ೧,೯೮೮ | ೧,೭೯೧ | ೨,೧೬೫ | ೨೪,೭೦೫ |
| ೧೮೮೬ | ೨,೫೨೮ | ೨,೧೧೫ | ೧,೮೧೭ | ೧,೩೪೦ | ೧,೩೨೯ | ೧,೮೫೦ | ೨,೩೪೦ | ೧,೯೬೩ | ೧,೬೮೧ | ೧,೫೯೮ | ೧,೫೦೧ | ೧,೭೧೧ | ೨೧,೭೭೩ |
| ೧೮೮೭ | ೧,೮೬೦ | ೧,೬೪೫ | ೧,೪೧೫ | ೧,೨೨೯ | ೧,೨೪೫ | ೧,೮೧೮ | ೨,೨೪೪ | ೧,೭೪೬ | ೧,೬೭೦ | ೧,೬೩೮ | ೧,೫೨೮ | ೧,೯೫೫ | ೧೯,೯೯೩ |
| ೧೮೮೮ | ೨,೧೪೪ | ೨,೮೩ | ೧,೭೯೨ | ೧,೪೮೭ | ೧,೫೨೫ | ೨,೦೨೫ | ೨,೨೬೪ | ೨,೧೦೧ | ೨,೦೧೨ | ೨,೧೪೦ | ೧,೯೫೮ | ೨,೬೫೩ | ೨೪,೧೮೪ |
| ೧೮೮೯ | ೨,೬೩೬ | ೧,೮೨೯ | ೧,೫೩೩ | ೧,೨೩೮ | ೧,೧೮೯ | ೧,೬೩೮ | ೧,೮೬೮ | ೧,೭೨೯ | ೧,೪೮೪ | ೧,೫೮೫ | ೧,೩೯೭ | ೧,೮೮೭ | ೨೦,೦೧೩ |
| ೧೮೯೦ | ೨,೧೩೩ | ೧,೮೮೩ | ೧,೬೦೩ | ೧,೪೦೦ | ೨,೨೯೩ | ೨,೬೫೪ | ೨,೮೭೫ | ೨,೪೯೮ | ೨,೦೮೯ | ೧,೯೬೨ | ೧,೮೮೦ | ೨,೦೬೫ | ೨೫,೩೩೩ |
| ೧೮೯೧ | ೨,೫೮೧ | ೨,೦೩೨ | ೧,೪೭೭ | ೧,೩೫೬ | ೧,೩೮೫ | ೧,೪೫೧ | ೧,೭೩೧ | ೧,೫೭೬ | ೧,೪೬೫ | ೧,೫೪೩ | ೧,೪೮೨ | ೧,೬೪೨ | ೧೯.೭೨೧ |
| ೧೮೯೨ | ,೯೦೪ | ೧,೬೯೭ | ೧,೫೩೨ | ೧,೨೭೪ | ೧,೪೮೭ | ೨,೩೧೨ | ೨,೫೪೯ | ೨,೮೩೬ | ೨,೨೧೨ | ೧,೮೫೯ | ೧,೬೪೫ | ೨,೧೪೯ | ೨೩,೪೪೭ |
| ಒಟ್ಟು | ೨೩,೩೧೦ | ೨೦೦೭೫ | ೧೭,೧೦೮ | ೧೪,೪೫೯ | ೧೬.೨೦೩ | ೨೧,೦೬೫ | ೨೬,೦೨೮ | ೨೩,೨೧೪ | ೧೯,೯೫೬ | ೧೮,೮೭೧ | ೧೭.೪೪೦ | ೨೧,೪೪೮ | ೨೩೯,೧೭೭ |
| ಸರಾಸರಿ | ೨,೧೧೯ | ೧,೮೨೫ | ೧,೫೫೫ | ೧,೩೧೪ | ೧,೪೭೩ | ೧,೯೧೫ | ೨,೩೬೬ | ೨,೧೧೦ | ೧,೮೧೪ | ೧,೭೧೬ | ೧,೫೮೬ | ೧,೯೫೦ | ೨೧,೭೪೩ |
| ಮರಣ ಪ್ರಮಾಣ | ೯.೭೫ | ೮.೩೯ | ೭.೧೫ | ೬.೦೪ | ೬.೭೮ | ೮.೮೧ | ೧೦.೮೮ | ೯.೭೧ | ೮.೩೪ | ೭.೮೯ | ೭.೨೯ | ೮.೯೭ | ೧೦೦.೦೦ |

**ಆಧಾರ :** ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

**ಕೋಷ್ಟಕ ೧೫.೮ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ರೋಗಗಳಿಂದಾಗಿ ಮರಣದ ಸಂಖ್ಯೆ (೧೮೮೨–೧೮೯೨)**

| ವರ್ಷ | ಕಾಲರಾ | | ಸಿಡುಬು | | ಜ್ವರ | | ಬೇಧಿ | | ಗಾಯಗಳು ಆತ್ಮಹತ್ಯೆ | | ಅಪಘಾತ | ಹಾವು ಕಚ್ಚಿದ್ದು | ಇತರ ಕಾರಣಗಳು | ಒಟ್ಟು ಮರಣ | | |
|---|---|---|---|---|---|---|---|---|---|---|---|---|---|---|---|---|
| | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | | | | ಒಟ್ಟು | ಪುರುಷ | ಮಹಿಳೆ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ |
| ೧೮೮೨ | ೧೦೧ | ೮೦ | ೨೪೬ | ೧೭೦ | ೨,೩೯೨ | ೨,೦೭೦ | ೧,೦೬೦ | ೮೨೪ | ೩೩ | ೨೨ | ೩೭೮ | ೬೮ | ೮.೩೯೬ | ೧೫.೮೪೦ | ೮,೪೨೫ | ೭,೪೧೫ |
| ೧೮೮೩ | – | – | ೪೦೪ | ೨೯೧ | ೩.೮೭೯ | ೩,೫೩೫ | ೧,೨೮೮ | ೧,೦೮೦ | ೩೯ | ೩೧ | ೩೫೩ | ೮೩ | ೯,೨೪೬ | ೨೦,೨೨೯ | ೧೦,೬೪೭ | ೯,೫೮೨ |
| ೧೮೮೪ | – | – | ೩೭೭ | ೩೦೦ | ೫,೧೬೧ | ೫,೨೨೪ | ೧,೧೬೬ | ೯೯೫ | ೩೯ | ೨೬ | ೩೭೨ | ೭೫ | ೧೦.೨೧೭ | ೨೩,೯೫೨ | ೧೨,೧೩೧ | ೧೧,೮೨೧ |
| ೧೮೮೫ | ೫ | ೯ | ೪೧೪ | ೩೩೨ | ೪,೬೪೬ | ೪,೩೪೭ | ೧,೨೬೦ | ೧,೧೦೫ | ೫೨ | ೨೦ | ೩೨೨ | ೭೯ | ೧೨,೧೧೯ | ೨೪,೭೧೦ | ೧೨,೮೧೪ | ೧೧,೮೯೬ |
| ೧೮೮೬ | – | – | ೧೨೦ | ೧೦೪ | ೩,೯೮೦ | ೩,೭೪೭ | ೧,೨೫೯ | ೧,೦೫೦ | ೩೭ | ೨೯ | ೩೭೨ | ೮೯ | ೧೦,೯೯೧ | ೨೧,೭೭೮ | ೧೧,೧೬೧ | ೧೦,೬೧೭ |
| ೧೮೮೭ | ೩೮ | ೪೦ | ೩೨೭ | ೨೮೨ | ೩,೫೯೭ | ೩,೨೭೦ | ೯೫೫ | ೭೨೬ | ೩೭ | ೪೦ | ೩೭೭ | ೮೦ | ೧೦,೨೨೯ | ೧೯,೯೯೮ | ೧೦,೪೨೧ | ೯,.೫೭೭ |
| ೧೮೮೮ | ೬೯೪ | ೭೩೩ | ೭೭೨ | ೬೫೭ | ೩,೫೭೪ | ೩,೧೦೬ | ೧,೨೩೯ | ೯೬೩ | ೪೬ | ೪೩ | ೩೧೭ | ೭೦ | ೧೧,೯೭೫ | ೨೪,೧೮೯ | ೧೨,೭೧೭ | ೧೧,೪೭೨ |
| ೧೮೮೯ | ೧೮೭ | ೧೬೬ | ೧೯೫ | ೧೫೯ | ೩,೨೦೧ | ೨,೮೦೫ | ೯೯೪ | ೭೮೭ | ೪೬ | ೩೨ | ೩೨೬ | ೭೬ | ೧೧,೦೪೩ | ೨೦,೦೧೭ | ೧೦,೪೯೦ | ೯,೫೨೭ |
| ೧೮೯೦ | – | – | ೨೫ | ೩೮ | ೫,೫೧೦ | ೪,೭೯೪ | ೧,೩೮೮ | ೧,೦೫೩ | ೩೮ | ೩೦ | ೨೯೯ | ೬೨ | ೧೨,೧೦೪ | ೨೫,೩೪೧ | ೧೩,೨೫೪ | ೧೨.೦೮೭ |
| ೧೮೯೧ | ೧೭೪ | ೧೮೩ | ೭೭ | ೭೦ | ೪,೦೬೨ | ೩,೫೫೭ | ೭೬೩ | ೫೯೬ | ೪೨ | ೩೩ | ೩೨೩ | ೬೯ | ೯.೭೭೮ | ೧೯,೭೨೨ | ೧೦,೩೫೯ | ೯,೩೬೩ |
| ೧೮೯೨ | ೬೦೯ | ೬೫೭ | ೨೬೯ | ೨೧೬ | ೪,೫೯೬ | ೪,೧೭೨ | ೮೮೪ | ೬೮೦ | ೬೫ | ೩೨ | ೩೬೪ | ೬೨ | ೧೦,೮೪೭ | ೨೩,೪೫೩ | ೧೨,೦೮೪ | ೧೧,೩೬೯ |
| ಒಟ್ಟು | ೧,೮೦೮ | ೧,೩೬೮ | ೩,೨೨೬ | ೨,೬೧೯ | ೪೪,೫೯೮ | ೪೦,೬೨೭ | ೧೨,೨೫೮ | ೯,೮೫೯ | ೪೭೪ | ೩೩೮ | ೩,೮೦೩ | ೮೧೩ | ೧೧೬,೯೪೦ | ೨೩೯,೨೨೯ | ೧೨೪,೫೦೩ | ೧೧೪,೭೨೬ |
| ಸರಾಸರಿ | ೧೬೪ | ೧೭೦ | ೨೯೩ | ೨೩೮ | ೪,೦೫೪ | ೩,೬೯೪ | ೧,೧೧೪ | ೮೯೬ | ೪೩ | ೩೧ | ೩೪೬ | ೭೪ | ೧೦,೬೩೧ | ೨೧,೭೪೮ | ೧೧,೩೧೮ | ೧೦,೪೩೦ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ

ಆ ಕಾಲಕ್ಕೆ ಅನೇಕ ಸಾಂಕ್ರಾಮಿಕ ರೋಗಗಳು ಮರಣ ಸಂಭವಿಸಲು ಪ್ರಮುಖ ಕಾರಣವಾಗಿತ್ತು. ಕಾಲರಾ, ಸಿಡುಬು, ಜ್ವರ, ಬೇಧಿ, ಗಾಯಗಳು ಹಾಗೂ ಆತ್ಮಹತ್ಯೆ ಅಪಘಾತ ಮತ್ತು ಹಾವು ಕಚ್ಚುವುದರಿಂದ ಸಾವು ಸಂಭವಿಸುತ್ತಿತ್ತು. ಈ ವಿವಿಧ ಕಾರಣಗಳಿಂದ ಸಂಭವಿಸಿದ ಮರಣದ ಅಂಕಿ ಅಂಶವನ್ನು ಕೋಷ್ಟಕ ೧೫.೮ ರಲ್ಲಿ ಗಮನಿಸಬಹುದು. ಜ್ವರ, ಬೇಧಿ ಹಾಗೂ ಸಿಡುಬು ರೋಗಗಳಿಂದ ಸಂಭವಿಸಿದ ಮರಣದ ಸಂಖ್ಯೆ ಹೆಚ್ಚಾಗಿತ್ತು. ೧೮೮೩ ರಿಂದ ೧೮೯೨ರ ಅವಧಿಯಲ್ಲಿ ಜಿಲ್ಲೆಯಲ್ಲಿ ವಿವಿಧ ಪ್ರಾಯದಲ್ಲಿ ಮರಣ ಹೊಂದಿದವರ ಸಂಖ್ಯೆಯನ್ನು ಗಮನಿಸಿದರೆ ಐದು ವರ್ಷಕ್ಕಿಂತ ಕೆಳಗಿನ ಪ್ರಾಯದಲ್ಲಿ ಮರಣ ಹೊಂದಿದವರ ಸಂಖ್ಯೆ ಅಧಿಕವಾಗಿತ್ತು ಎಂಬುದನ್ನು ಕೋಷ್ಟಕ ೧೫.೯ ರಿಂದ ತಿಳಿಯಬಹುದಾಗಿದೆ.

**ಕೋಷ್ಟಕ ೧೫.೯ : ದಕ್ಷಿಣ ಕನ್ನಡ ಜಿಲೆಯಲ್ಲಿ ವಿವಿಧ ಪ್ರಾಯಗಳಲ್ಲಿ ಮರಣ ಹೊಂದಿರುವವರ ಸಂಖ್ಯೆ: (೧೮೮೧–೧೮೯೨)**

| | ೧ ವರ್ಷಕ್ಕಿಂತ ಕೆಳಗೆ | | ೧–೫ ವರ್ಷ | | ೫–೧೦ ವರ್ಷ | | ೧೦–೧೫ ವರ್ಷ | | ೧೫–೨೦ ವರ್ಷ | | ೨೦–೩೦ ವರ್ಷ | | ೩೦–೪೦ ವರ್ಷ | | ೪೦–೫೦ ವರ್ಷ | | ೫೦–೬೦ ವರ್ಷ | | ೬೦ ವರ್ಷಕ್ಕಿಂತ ಮೇಲೆ | |
|---|---|---|---|---|---|---|---|---|---|---|---|---|---|---|---|---|---|---|---|---|
| | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ | ೧೫ | ೧೬ | ೧೭ | ೧೮ | ೧೯ | ೨೦ | ೨೧ |
| ೧೮೮೩ | ೨,೨೬೯ | ೧.೯೯೧ | ೧,೧೬೩ | ೧,೧೪೭ | ೩೯೬ | ೪೧೨ | ೨೭೧ | ೨೫೫ | ೩೭೪ | ೪೯೮ | ೧,೦೪೯ | ೧,೧೭೯ | ೧,೨೮೨ | ೧.೦೧೦ | ೧,೨೨೯ | ೭೨೦ | ೧,೦೮೪ | ೮೨೦ | ೧,೫೨೬ | ೧,೫೪೫ |
| ೧೮೮೪ | ೨,೩೬೯ | ೨,೦೯೯ | ೧,೩೪೫ | ೧,೪೨೧ | ೫೩೪ | ೫೩೭ | ೩೨೨ | ೩೨೦ | ೪೪೭ | ೫೨೫ | ೧,೧೭೨ | ೧,೪೪೦ | ೧,೪೮೨ | ೧.೨೧೬ | ೧,೪೨೩ | ೯೯೦ | ೧,೨೬೮ | ೧,೧೩೫ | ೧,೭೬೮ | ೨,೧೩೮ |
| ೧೮೮೫ | ೨,೭೪೭ | ೨,೩೫೩ | ೧,೮೭೯ | ೧,೯೫೩ | ೭೦೫ | ೬೫೪ | ೩೫೦ | ೩೧೮ | ೩೫೭ | ೪೭೭ | ೧,೧೭೨ | ೧,೩೨೫ | ೧,೩೯೫ | ೧,೧೩೦ | ೧,೩೨೯ | ೮೨೮ | ೧,೧೪೯ | ೯೬೮ | ೧,೭೨೮ | ೧,೮೮೮ |
| ೧೮೮೬ | ೨,೪೪೬ | ೨,೨೦೪ | ೧,೪೭೨ | ೧,೪೮೨ | ೬೦೩ | ೬೧೩ | ೩೨೭ | ೨೮೩ | ೩೪೧ | ೪೪೭ | ೧,೦೩೬ | ೧,೨೪೦ | ೧,೨೩೪ | ೧,೦೨೮ | ೧,೧೯೫ | ೭೪೪ | ೧.೦೪೦ | ೮೭೩ | ೧,೪೬೩ | ೧,೭೦೨ |
| ೧೮೮೭ | ೨,೫೩೨ | ೨,೧೯೦ | ೧,೦೬೧ | ೧,೦೦೪ | ೪೩೧ | ೩೮೯ | ೨೬೪ | ೨೪೮ | ೩೦೩ | ೩೯೪ | ೯೪೮ | ೧,೧೪೦ | ೧,೨೧೦ | ೯೮೫ | ೧,೧೯೫ | ೭೮೨ | ೯೮೯ | ೮೨೦ | ೧,೪೮೬ | ೧,೬೨೨ |
| ೧೮೮೮ | ೨,೮೫೬ | ೨,೪೪೮ | ೧,೪೩೯ | ೧,೪೮೨ | ೫೩೭ | ೫೪೯ | ೩೫೦ | ೩೦೧ | ೪೩೦ | ೫೩೩ | ೧,೩೪೯ | ೧,೪೪೫ | ೧,೫೩೭ | ೧,೧೫೪ | ೧,೪೧೨ | ೮೮೨ | ೧,೧೭೧ | ೯೦೫ | ೧,೬೩೧ | ೧,೭೭೩ |
| ೧೮೮೯ | ೨,೪೭೪ | ೨,೧೪೮ | ೧,೦೯೫ | ೧,೦೭೨ | ೪೩೦ | ೩೯೫ | ೨೮೦ | ೨೨೦ | ೩೧೩ | ೪೨೭ | ೯೪೦ | ೧,೧೦೨ | ೧,೨೩೭ | ೯೧೪ | ೧,೪೧೬ | ೬೯೫ | ೧,೧೧೫ | ೮೫೧ | ೧,೪೫೭ | ೧,೭೦೨ |
| ೧೮೯೦ | ೨,೮೩೨ | ೨,೫೪೩ | ೧,೫೬೫ | ೧,೫೩೯ | ೬೩೭ | ೫೯೫ | ೩೭೨ | ೩೨೨ | ೪೧೮ | ೫೧೪ | ೧,೨೦೩ | ೧,೩೮೬ | ೧,೫೦೦ | ೧,೧೫೪ | ೧,೫೦೩ | ೮೮೭ | ೧,೩೪೩ | ೯೨೧ | ೧,೮೭೫ | ೨,೨೨೪ |
| ೧೮೯೧ | ೨,೪೪೫ | ೨,೧೦೨ | ೧,೨೦೧ | ೧,೨೦೯ | ೪೬೬ | ೪೫೯ | ೨೫೫ | ೨೨೧ | ೩೫೫ | ೩೯೯ | ೮೭೩ | ೧,೦೩೧ | ೧,೨೦೨ | ೮೭೨ | ೧,೦೯೯ | ೬೫೯ | ೯೩೦ | ೭೧೩ | ೧,೫೩೩ | ೧,೬೯೭ |
| ೧೮೯೨ | ೨,೭೮೨ | ೨,೪೬೧ | ೧,೨೧೭ | ೧,೨೬೯ | ೫೨೨ | ೫೩೫ | ೩೩೯ | ೨೭೭ | ೪೯೬ | ೫೨೮ | ೧,೧೦೩ | ೧,೩೭೮ | ೧,೩೪೮ | ೧,೦೮೭ | ೧,೩೪೬ | ೮೨೯ | ೧,೧೨೧ | ೮೭೦ | ೧,೮೧೫ | ೨,೧೩೩ |
| ಒಟ್ಟು | ೨೫.೭೫೨ | ೨೨,೫೩೯ | ೧೩,೪೩೭ | ೧೩,೫೭೮ | ೫,೨೬೧ | ೫,೧೩೮ | ೩,೧೨೧ | ೨,೭೬೫ | ೩,೮೩೪ | ೪,೭೪೨ | ೧೦,೮೪೫ | ೧೨,೬೬೬ | ೧೩,೪೨೭ | ೧೦,೫೫೦ | ೧೨,೮೭೭ | ೮,೦೧೮ | ೧೧ಡಿ೨೧೦ | ೮,೮೭೮ | ೧೬,೨೮೨ | ೧೮,೪೨೪ |
| ಸರಾಸರಿ | ೨,೫೭೫ | ೨,೨೫೪ | ೧,೩೪೪ | ೧,೩೫೮ | ೫೨೬ | ೫೧೪ | ೩೧೨ | ೨೭೬ | ೮೮೩ | ೪೭೪ | ೧,೦೮೪ | ೧,೨೬೭ | ೧,೩೪೩ | ೧,೦೫೫ | ೧,೨೮೮ | ೮೦೨ | ೧,೧೨೧ | ೮೮೭ | ೧,೬೨೮ | ೧,೮೪೨ |
| ಶೇಖಡಾ | ೨೨.೧೯ | ೨೧.೦೧ | ೧೧.೫೮ | ೧೨.೬೫ | ೪.೫೩ | ೪.೭೯ | ೨.೬೯ | ೨.೫೮ | ೩.೩೦ | ೪.೪೨ | ೯.೩೫ | ೧೧,೮೧ | ೧೧.೫೭ | ೯.೮೩ | ೧೧.೧೦ | ೭.೪೭ | ೯.೬೬ | ೮.೨೭ | ೧೪.೦೩ | ೧೭.೧೭ |

**ಆಧಾರ:** ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ

**ಕೋಷ್ಟಕ ೧೫.೧೦ : ಜನನ ಮರಣ ನೋಂದಾವಣೆ**

| | ೧೯೯೧–೯೨ | ೧೯೯೨–೯೩ | ೧೯೯೩–೯೪ | ೧೯೯೭ | ೧೯೯೯ | ೨೦೦೦ |
|---|---|---|---|---|---|---|
| ೧. ಜನನ ಮರಣ ನೋಂದಾವಣೆ ಘಟಕಗಳು | ೬೫೪ | ೬೫೪ | ೬೫೪ | ೨೭೩ | ೩೮೧ | ೩೮೧ |
| ೨. ಜನನ ಮರಣ ನೋಂದಾವಣೆ ಕೇಂದ್ರಗಳು | – | – | – | – | – | – |
| ೩. ದಾಖಲಾದ ಒಟ್ಟು ಜನನ | ೫೭೫೬೪ | ೫೬೦೨೨ | ೫೬೦೬೫ | ೩೯೪೨೦ | ೩೯೩೩೩ | ೩೮೬೪೧ |
| ೪. ದಾಖಲಾದ ಒಟ್ಟು ನಿರ್ಜೀವ ಜನನಗಳು | ೫೧೪ | ೪೩೨ | ೫೩೦ | ೩೮೭ | ೫೫೫ | ೪೩೦ |
| ೫. ದಾಖಲಾದ ಮರಣಗಳು | ೧೭೬೮೦ | ೧೮೩೩೨ | ೧೯೦೩೦ | ೧೩೧೬೫ | ೧೩೨೯೧ | ೧೩೩೬೪ |
| ೬. ದಾಖಲಾದ ಶಿಶು ಮರಣಗಳು | ೫೩೦ | ೫೬೫ | ೬೫೮ | ೪೬೫ | ೪೫೪ | ೪೭೧ |

**ಕೋಷ್ಟಕ ೧೫.೧೧ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೋಂದಾಯಿಸಿದ ಬಾಲ್ಯ ಮರಣ ಸಂಖ್ಯೆ**

| ವರ್ಷ | ಜನನ | ಬಾಲ್ಯ ಮರಣ | ಮರ್ತತೆ ದರ ಶೇ (%) |
|---|---|---|---|
| ೧೯೯೫–೯೬ | ೪೧೪೬೯ | ೫೭೪ | ೧೩.೮ |
| ೧೯೯೬–೯೭ | ೪೦೪೭೪ | ೫೩೯ | ೧೩.೩ |
| ೧೯೯೭–೯೮ | ೩೯೭೩೧ | ೫೫೮ | ೧೪.೦ |
| ೧೯೯೮–೯೯ | ೨೦೬೬೦ | ೩೩೯ | ೧೬.೪ |
| ೧೯೯೯–೨೦೦೦ | ೨೨೦೦೩ | ೪೦೯ | ೧೮.೫ |
| ೨೦೦೦–೦೧ | ೨೧೪೨೩ | ೩೨೬ | ೧೫.೨ |
| ೨೦೦೧–೦೨ | ೨೧೩೯೪ | ೩೪೬ | ೧೬.೧ |
| ೨೦೦೨–೦೩ | ೨೨೫೪೩ | ೩೫೭ | ೧೫.೮ |
| ೨೦೦೩–೦೪ | ೨೨೮೨ | ೩೬೦ | ೧೫,೭ |
| ೨೦೦೪–೦೫ | ೨೩೧೦೮ | ೨೦೯ | ೯.೦ |

**ಕೋಷ್ಟಕ ೧೫.೧೨ : ಜನನ–ಮರಣಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಅಂಕಿ ಅಂಶಗಳು**

| ವರ್ಷ | ಒಟ್ಟು ಜನನ | ಜನನ ದರ | ಬಾಲ್ಯ ಮರಣ | ಐ.ಎಂ.ಆರ್ | ಮಾತೃ ಮರಣ | ಎಂ.ಎಂ.ಆರ್ | ಸಿ.ಪಿ.ಆರ್ | ಸಾಂಸ್ಥಿಕ ಹೆರಿಗೆಗಳು ಶೇ(%) |
|---|---|---|---|---|---|---|---|---|
| ೯೮–೯೯ | ೨೦೩೯೩ | ೧೧.೮ | ೩೯೫ | ೧೯.೫ | ೧೮ | ೪ | ೫೧.೭ | ೮೩ |
| ೯೯–೨೦೦೦ | ೨೧೭೮೮ | ೧೨.೬ | ೪೦೭ | ೧೮.೭ | ೨೮ | ೩ | ೫೨.೩ | ೮೬ |
| ೨೦೦೦–೦೧ | ೨೧೫೪೨ | ೧೨.೬ | ೩೨೬ | ೧೫.೧ | ೨೪ | ೧ | ೫೩.೪ | ೮೯.೭ |
| ೨೦೦೧–೦೨ | ೨೧೩೯೪ | ೧೧.೩ | ೩೪೬ | ೧೬.೨% | ೨೧ | ೦ | ೫೩.೪ | ೯೦.೮ |
| ೨೦೦೨–೦೩ | ೨೨೫೪೩ | ೧೧.೮ | ೩೨೭ | ೧೫.೫ | ೧೪ | ೦.೬ | ೫೪.೬ | ೯೨.೬ |
| ೨೦೦೩–೦೪ | ೨೨೯೨೧ | ೧೧.೯ | ೩೩೪ | ೧೪.೬ | ೨೦ | ೦.೮೭ | ೬೨.೪ | ೯೪.೫ |
| ೨೦೦೪–೦೫ | ೨೩೧೦೭ | ೧೧.೮ | ೨೦೯ | ೯.೦ | ೨೪ | ೧.೦೩ | ೬೨.೬ | ೯೫.೮ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

## ಸಾಂಕ್ರಾಮಿಕ ರೋಗಗಳು

ಆರೋಗ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ, ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸುವುದು ಬಹಳ ಮುಖ್ಯವಾಗಿತ್ತು. ಯಾವುದೇ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಾಗ ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಅವುಗಳ ಮೂಲ ಕಾರಣಗಳನ್ನು ಕಂಡು ಹಿಡಿದು ಹತೋಟಿಗೆ ತರಲು ಬೇಕಾದ ಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಆ ರೋಗಗಳು ಹರಡದಂತೆ ಮುಂಜಾಗ್ರತೆ ವಹಿಸುತ್ತಿದ್ದರು. ಸೂಕ್ತ ರೋಗತಡೆ ಚುಚ್ಚು ಮದ್ದುಗಳನ್ನು ಒದಗಿಸುತ್ತಿದ್ದರು. ಮುಖ್ಯವಾಗಿ ಕುಡಿಯುವ ನೀರಿನ ಗುಣಮಟ್ಟವನ್ನು ಸುಧಾರಿಸುವುದು, ಕೊಳಚೆ ಪ್ರದೇಶಗಳನ್ನು ನಿರ್ಮಲವಾಗಿಟ್ಟುಕೊಳ್ಳುವುದು ಹಾಗೂ ಉಪಯೋಗಿಸಿ ಬಿಟ್ಟ ವಸ್ತುಗಳನ್ನು ಸೂಕ್ತ ವಿಲೇವಾರಿ ಮಾಡುವುದು, ಈ ರೋಗಗಳ ಹರಡುವಿಕೆಯನ್ನು ತಡೆಯಲು ಕೈಗೊಳ್ಳುವ ಕ್ರಮಗಳಾಗಿದ್ದವು. ಕಾಲರಾ, ವಿವಿಧ ರೀತಿಯ ಜ್ವರ, ಸಿಡುಬು, ಪ್ಲೇಗ್, ವಾಂತಿ ಬೇಧಿ, ಮಲೇರಿಯಾ, ಶ್ವಾಸಸಂಬಂಧಿ ರೋಗಗಳು (Respiratory Diseases), ಟೈಫ್ಯಾಡ್ ಹಾಗೂ ಕ್ಷಯ ಈ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಾಂಕ್ರಾಮಿಕ ರೋಗಗಳಾಗಿದ್ದವು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ೪೦ರ ದಶಕದಲ್ಲಿ ಚುಚ್ಚು ಮದ್ದು ಕೊಡುವ ಕಾರ್ಯಕ್ರಮವನ್ನು ಹೆಚ್ಚಿನ ಪ್ರಮಾಣದಲ್ಲಿ ಹಮ್ಮಿಕೊಳ್ಳಲಾಯಿತು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಇತ್ತೀಚಿನ ದಿನಗಳಲ್ಲೂ ಆರೋಗ್ಯ ಇಲಾಖೆಯವರು ಚುಚ್ಚು ಮದ್ದುಗಳನ್ನು ಕೊಡುವ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ. ಈ ಕುರಿತು ಅಂಕಿಅಂಶಗಳನ್ನು ಕೋಷ್ಟಕ ೧೫.೧೩ರಲ್ಲಿ ತಿಳಿಯಬಹುದು.

**ಕೋಷ್ಟಕ ೧೫.೧೩ : ರೋಗನಿವಾರಣೆ ಚುಚ್ಚು ಮದ್ದುಗಳನ್ನು ನಿರ್ವಹಣೆ ಮಾಡಿರುವ ಅಂಕಿ ಅಂಶಗಳು**

| ವರ್ಷ | ಪ್ರಾಥಮಿಕ ಚುಚ್ಚು ಮದ್ದು | ಪುನ: ಚುಚ್ಚು ಮದ್ದು |
|---|---|---|
| ೧೯೪೮ | ೪೫,೪೫೫ | ೧,೦೦,೪೧೭ |
| ೧೯೪೯ | ೩೯.೬೩೪ | ೧,೪೯,೬೪೪ |
| ೧೯೫೦ | ೫೮,೮೫೫ | ೨,೭೪,೫೦೮ |
| ೧೯೫೧ | ೫೩,೩೬೫ | ೨,೧೨,೬೯೫ |
| ೧೯೫೨ | ೫,೯೧೫ | ೧,೩೫,೦೧೫ |
| ೧೯೫೩ | ೫೯,೦೧೫ | ೧,೭೧,೫೬೧ |
| ೧೯೫೪ | ೬೧,೧೪೭ | ೧,೬೬,೬೩೩ |
| ೧೯೫೫ | ೪೮,೬೫೧ | ೧,೪೩,೮೨೫ |
| ೧೯೫೬ | ೫೦,೫೩೨ | ೧,೨೧,೮೫೯ |
| ೧೯೫೭ | ೪೩,೩೬೧ | ೧,೧೨,೩೪೮ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

## ಸಿಡುಬು ರೋಗ

ನಲ್ವತ್ತರ ದಶಕದಲ್ಲಿ ಸಿಡುಬು ರೋಗ ಹೆಚ್ಚು ಕಾಣಿಸಿಕೊಂಡು, ಇದರಿಂದ ಮರಣ ಹೊಂದಿದವರ ಸಂಖ್ಯೆ ಹೆಚ್ಚಿತ್ತು. ನಂತರದ ವರ್ಷಗಳಲ್ಲಿ ಸಿಡುಬು ರೋಗದಿಂದ ಮರಣ ಹೊಂದಿದವರ ಸಂಖ್ಯೆ ಕಡಿಮೆಯಾಯಿತು. ಈ ಅಂಶವನ್ನು ಕೋಷ್ಠಕ ೧೫.೧೪ ರಿಂದ ತಿಳಿಯಬಹುದು.

**ಕೋಷ್ಟಕ ೧೫.೧೪ : ಸಿಡುಬಿನಿಂದ ಮರಣ ಹೊಂದಿರುವವರ ಸಂಖ್ಯೆ**

| ವರ್ಷ | ಸಂಭವಿಸಿದ ಸಂಖ್ಯೆ | ಮರಣ |
|---|---|---|
| ೧೯೪೫ | ೧,೩೪೨ | ೨೫೪ |
| ೧೯೪೬ | ೨೭೦ | ೪೮ |
| ೧೯೪೭ | ೭೨ | ೧೧ |
| ೧೯೪೮ | ೮೦ | ೨೧ |
| ೧೯೪೯ | ೨೩೬ | ೪೩ |
| ೧೯೫೦ | ೬೬೧ | ೧೫೪ |
| ೧೯೫೧ | ೩೧೨ | ೭೦ |
| ೧೯೫೨ | ೯೦ | ೨೧ |
| ೧೯೫೩ | ೪೮ | ೧೭ |
| ೧೯೫೪ | ೨೩ | ೯ |
| ೧೯೫೫ | ೨೯ | ೫ |
| ೧೯೫೬ | ೧೯ | ೮ |
| ೧೯೫೭ | ೭೦ | ೧೨ |

ಸಿಡುಬು ರೋಗವನ್ನು ತಡೆಗಟ್ಟಲು ಚುಚ್ಚು ಮದ್ದುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಲಾಯಿತು. ಇದರ ಪ್ರಮಾಣವನ್ನು ಕೋಷ್ಟಕ ೧೫.೧೫ ರಲ್ಲಿ ಗಮನಿಸಬಹುದು. ಇದರಿಂದ ಎಪ್ಪತ್ತರ ದಶಕದಲ್ಲಿ ಈ ರೋಗದಿಂದ ಮರಣ ಹೊಂದಿರುವವರ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಯಿತು.

**ಕೋಷ್ಟಕ ೧೫.೧೫ : ಸಿಡುಬನ್ನು ತಡೆಗಟ್ಟಲು ಚುಚ್ಚು ಮದ್ದು ಮತ್ತು ಅದರಿಂದ ಮರಣ ಹೊಂದಿರುವವರ ಸಂಖ್ಯೆ**

| ವರ್ಷ | ಪ್ರಾಥಮಿಕ ಚುಚ್ಚು ಮದ್ದು ಸಂಖ್ಯೆ | ಪುನ: ಚುಚ್ಚು ಮದ್ದು ಸಂಖ್ಯೆ | ಸಿಡುಬು | | |
|---|---|---|---|---|---|
| | | | ಒಟ್ಟು | ಸಂಭವಿಸಿದ ಸಂಖ್ಯೆ | ಮರಣ ಹೊಂದಿರುವವರ ಸಂಖ್ಯೆ |
| ೧೯೬೬ | ೪೪,೨೯೨ | ೨,೮೭,೪೭೪ | ೩,೩೧,೭೬೬ | ೭೭ | ೨೪ |
| ೧೯೬೭ | ೫೭,೯೬೪ | ೨,೬೩,೨೨೭ | ೩,೧೧,೧೯೧ | ೬೦ | ೧೩ |
| ೧೯೬೮ | ೬೯,೬೭೧ | ೨,೭೭,೨೬೫ | ೨,೯೬,೯೩೬ | ೧೭ | ೫ |
| ೧೯೬೯ | ೮೪,೬೫೫ | ೨,೯೩,೫೯೧ | ೩,೬೮,೨೪೬ | ೨ | ೨ |
| ೧೯೭೦ | ೭೬,೭೮೩ | ೨,೩೬,೮೨೬ | ೪,೧೩,೬೦೯ | ೧ | – |
| ೧೯೭೧ | ೭೩,೧೨೮ | ೯೬,೧೬೮ | ೨,೬೯,೨೯೬ | – | – |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

**ಕೋಷ್ಟಕ ೧೫.೧೬ : ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಹಾಗೂ ಸಾಧಿಸಿದ ಪ್ರಗತಿ**

| ಕಾರ್ಯಕ್ರಮ ವಿವರ | ೨೦೦೧–೦೨ | | | ೨೦೦೨–೦೩ | | | ೨೦೦೩–೦೪ | | | ೨೦೦೪–೦೫ | | |
|---|---|---|---|---|---|---|---|---|---|---|---|---|
| | ಗುರಿ | ಸಾಧನೆ | % | ಗುರಿ | ಸಾಧನೆ | % | ಗುರಿ | ಸಾಧನೆ | % | ಗುರಿ | ಸಾಧನೆ | % |
| ಬಿ.ಸಿ.ಜಿ | ೨೩೮೭೦ | ೨೧೯೫೬ | ೯೨.೦ | ೨೪೦೪೫ | ೨೨೯೯೫ | ೯೫.೬ | ೨೩೬೦೨ | ೨೩೪೨೨ | ೯೯.೨ | ೨೪೨೪೨ | ೯೮೪೯ | ೪೦.೬ |
| ಡಿ.ಪಿ.ಟಿ/ಪ್ರೋಲಿಯೋ | ೨೩೮೭೦ | ೨೨೩೯೪ | ೯೪.೦ | ೨೪೦೪೫ | ೨೩೪೯೪ | ೯೭.೭ | ೨೩೬೦೨ | ೨೩೪೯೫ | ೯೯.೫ | ೨೪೨೪೨ | ೯೬೬೮ | ೪೦.೦ |
| ಮೀಸಲ್ಸ್ | ೨೩೮೭೦ | ೨೧೯೯೫ | ೯೨.೧ | ೨೪೦೪೫ | ೨೯೭೯ | ೯೫.೫ | ೨೩೬೦೨ | ೨೩೧೩೧ | ೯೮.೦೪ | ೨೪೨೪೨ | ೯೪೨೩ | ೩೯.೦ |
| ಗರ್ಭಿಣಿ ಚಿಕಿತ್ಸೆ | ೨೬೦೫೦ | ೨೩೭೮೪ | ೯೧.೩ | ೨೬೧೬೦ | ೪೯೯೧ | ೯೫.೫ | ೨೬೨೧೪ | ೨೫೧೮೮ | ೯೬.೧ | ೨೬೭೨೫ | ೧೦೩೮೫ | ೩೯.೦ |
| ವಂಕಿಧಾರಣೆ | ೮೦೬೦ | ೭೫೮೮ | ೯೪.೦ | ೮೦೮೦ | ೭೫೨೩ | ೯೩.೦ | ೮೧೬೫ | ೭೭೫೯ | ೯ ೫.೦ | ೮೨೦೨ | ೩೫೩೦ | ೪೩.೦ |
| ನುಂಗುವ ಮಾತ್ರೆ | ೯೩೩೨ | ೯೩೬೧ | ೧೦೦.೩ | ೯೪೧೬ | ೯೨೫೭ | ೯೮.೩ | ೯೪೯೯ | ೯೪೭೪ | ೯೯.೭ | ೯೫೦೪ | ೪೦೭೦ | ೪೩.೦ |
| ನಿರೋಧ್ | ೫೫೩೬ | ೫೦೩೫ | ೯೦.೬ | ೫೩೮೫ | ೫೨೮೮ | ೯೮.೦ | ೫೩೬೬ | ೫೪೪೧ | ೧೦೧.೪ | ೫೪೭೦ | ೫೩೭೫ | ೯೮.೩ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

**ಕೋಷ್ಟಕ ೧೫.೧೭ : ಜಿಲ್ಲೆಯ ವಿವಿದೆಡೆ ಕಾಣಿಸಿಕೊಂಡ ಗುಲ್ಮ ಹಾಗೂ ಪರೋಪಜೀವಿಗಳ ಶೇ. ಪ್ರಮಾಣ (೧೯೪೯)**

| ಪ್ರದೇಶ | ಗುಲ್ಮ ದರ | ಪರೋಪಜೀವಿ ದರ |
|---|---|---|
| ಬೆಳ್ತಂಗಡಿ | ೧೭ | ೫ |
| ಗುರುವಾಯನ ಕೆರೆ | ೧೯ | ೨ |
| ಲೈಲ | ೩೧ | ೧೨ |
| ಧರ್ಮಸ್ಥಳ | ೩೮ | ೧೧ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

೧೯೪೦ ರ ದಶಕದಲ್ಲಿ ಪ್ಲೇಗ್ ರೋಗವು ಜಿಲ್ಲೆಯಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿತ್ತು. ಡಿ.ಡಿ.ಟಿಯನ್ನು ಸಿಂಪಡಿಸುವ ಕ್ರಮ ಬಂದ ಮೇಲೆ (೧೯೫೨ ರ ಬಳಿಕ) ಈ ರೋಗ ಸಂಪೂರ್ಣ ಹತೋಟಿಗೆ ಬಂತು.

## ಮಲೇರಿಯ ರೋಗ

ಅನೋಫೆಲಿಸ್ ಎಂಬ ಜಾತಿಯ ಹೆಣ್ಣು ಸೊಳ್ಳೆಗಳು ರೋಗವಾಹಕಗಳಾಗಿದ್ದು ಪ್ಲಾಸ್ಮೋಡಿಯಂ ಎಂಬ ಪರೋಪಜೀವಿ ರೋಗಾಣುವಿನಿಂದ ಈ ರೋಗ ಉಂಟಾಗುತ್ತದೆ. ಜಾಗತಿಕವಾಗಿ ಕಂಡುಬರುವ ಈ ರೋಗವು ಸೊಳ್ಳೆಗಳ ಅಗರಗಳಾದ ನಿಂತ ನೀರು ಹಾಗೂ ಜೌಗುಪ್ರದೇಶಗಳಲ್ಲಿ ತೀವ್ರವಾಗಿ ಹರಡಿ ಜನರನ್ನು ರೋಗ ಪೀಡಿತರನ್ನಾಗಿ ಮಾಡುತ್ತದೆ ಕರಾವಳಿ ಮತ್ತು ಮಲೆನಾಡುಪ್ರದೇಶಗಳಲ್ಲಿ ಈ ರೋಗವು ಹೆಚ್ಚಾಗಿ ಕಂಡುಬರುತ್ತದೆ. ಕ್ರಿಮಿನಾಶಕಗಳ ಸಿಂಪಡಣೆಯಿಂದ ಈ ರೋಗವು ನಿಯಂತ್ರಣಕ್ಕೆ ಬಂದಿರುತ್ತದೆ. ರೋಗಪೀಡಿತರಿಗೆ ನಾಲ್ಕು ಎಕ್ಸ್ಯು ಮಾತ್ರೆ (ಕ್ವಿನೈನ್) ನೀಡುವುದರಿಂದ ರೋಗ ಉಪಶಮನವಾಗುತ್ತದೆ. ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವನ್ನು ಭಾರತ ಸರ್ಕಾರವು ೧೯೫೩ರಲ್ಲಿ ಜಾರಿಗೆ ತಂದ ಮೇಲೆ ಇದರ ನಿಯಂತ್ರಣ ಸಾಧ್ಯವಾಗಿದೆ.

ಮಲೇರಿಯಾ ಪರೋಪಜೀವಿ ಜಾತಿಯನ್ನು ಅವಲಂಬಿಸಿದೆ. ಮೈನಡುಕ, ಅತೀಯಾದ ಜ್ವರ ಇವು ರೋಗದ ಲಕ್ಷಣಗಳು. ರೋಗಪೀಡಿತ ವ್ಯಕ್ತಿಯ ದೇಹದಲ್ಲಿರುವ ಕೆಂಪುರಕ್ತಕಣಗಳ ಪ್ರಮಾಣ ತೀವ್ರ ಕುಸಿದು ರಕ್ತ ಹೀನತೆ ಉಂಟಾಗುತ್ತದೆ. ರೋಗಿಯ ಪ್ಲೀಹ (ಸ್ಪ್ಲೀನ್)ವು ದೊಡ್ಡದಾಗಿ ಸಾವು ಸಂಭವಿಸಬಹುದು. ಜ್ವರದ ಪ್ರಕರಣಗಳಲ್ಲಿ ರಕ್ತಲೇಪನಗಳನ್ನು ತೆಗೆದುಕೊಂಡು ರಕ್ತ ಪರೀಕ್ಷೆ ಮಾಡಲಾಗುವುದು ಮತ್ತು ಮಲೇರಿಯಾ ಪ್ರಕರಣ ಎಂದು ಖಚಿತಪಟ್ಟಲ್ಲಿ ಕ್ಲೋರೋಕ್ವಿನ್ ಮಾತ್ರೆಗಳನ್ನು ನೀಡಲಾಗುತ್ತದೆ. ರೋಗಪೀಡಿತ ಪ್ರದೇಶಗಳಲ್ಲಿ ಡಿಡಿಟಿಯಂತಹ ಕ್ರಿಮಿನಾಶಕಗಳನ್ನು ಸಿಂಪಡಿಸಲಾಗುವುದು. ರೋಗದ ವಿರುದ್ಧ ಜಾಗ್ರತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆರೋಗ್ಯ ಕಾರ್ಯಕರ್ತರಿಗೆ ವಹಿಸಲಾಗಿದ್ದು, ಅವರು ಎರಡು ವಾರಕ್ಕೊಮ್ಮೆ ಮನೆಮನೆಗೆ ಭೇಟಿ ನೀಡಿ ಜ್ವರ ಪ್ರಕರಣಗಳಿದ್ದಲ್ಲಿ ರಕ್ತಲೇಪನಗಳನ್ನು ಪಡೆದು ಸಂಭವಿಸಿರುವ ಚಿಕಿತ್ಸೆಗಾಗಿ ಕ್ಲೋರೋಕ್ವಿನ್ ಮಾತ್ರೆ ನೀಡುವರು ಹಾಗೂ ಸಂಗ್ರಹಿಸಿದ ರಕ್ತಲೇಪನಗಳನ್ನು ಆ ಪ್ರದೇಶಕ್ಕೆ ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೀಡಿ ರಕ್ತಲೇಪನ ಪರೀಕ್ಷೆ ನಡೆಸಲಾಗುತ್ತದೆ. ರೋಗ ಪ್ರಕರಣ ಖಚಿತಪಟ್ಟಲ್ಲಿ ಮಲೇರಿಯಾ ರೋಗದ ಸಕಾಲಿಕ ಸೂಕ್ತ ಚಿಕಿತ್ಸಾ ಸೌಲಭ್ಯ ಒದಗಿಸುವುದಲ್ಲದೆ ರೋಗ ಹರಡುವುದನ್ನು ತಡೆಗಟ್ಟಲು ಸಮುದಾಯ ಸಂಪರ್ಕ ರಕ್ತ ಸಮೀಕ್ಷೆ ಮತ್ತು ಕ್ರಿಮಿನಾಶಕ ಸಿಂಪಡಣೆ ಕಾರ್ಯವನ್ನು ಆರೋಗ್ಯ ಇಲಾಖೆ ಕೈಗೊಳ್ಳುವುದು. ೧೯೭೭ರಲ್ಲಿ ಭಾರತ ಸರ್ಕಾರವು ನೀಡಿದ ಹೊಸ ಮಾರ್ಗದರ್ಶಿ ಸೂತ್ರಗಳ ಸುಧಾರಿತ ಕ್ರಮದಿಂದ ಮಲೇರಿಯಾ ಶೇಕಡಾ ೩೦ರಷ್ಟು ಕಡಿಮೆಯಾಗಿರುವುದು ಕಂಡುಬಂದಿದೆ. ಮಲೇರಿಯಾ ನಿಯಂತ್ರಣ ಪರೀಕ್ಷೆ ಹಾಗೂ ಚಿಕಿತ್ಸೆಯನ್ನು ಜಿಲ್ಲೆಯ ಎಲ್ಲಾ ಆಸ್ಪತ್ರೆ ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು ನಿರ್ವಹಿಸುತ್ತವೆ.

ಮೊದಲಿಗೆ ಮಲೇರಿಯ ರೋಗದ ಹತೋಟಿಯ ಕ್ರಮಗಳು ಗೊತ್ತಿರಲಿಲ್ಲ. ಕ್ವಿನೈನ್ ಮಾತ್ರೆಗಳನ್ನು ಕಂದಾಯ ಅಧಿಕಾರಿಗಳು ಮತ್ತು ಅಂಚೆ ಕಛೇರಿ ಅಧಿಕಾರಿಗಳು ಹಳ್ಳಿಗಳಲ್ಲಿ ಹಂಚುತ್ತಿದ್ದರು. ಮಲೆನಾಡು ಪ್ರದೇಶ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೋಗ ಹೆಚ್ಚು ಕಾಡುತ್ತಿತ್ತು. ಈಗಲೂ ಈ ಜಿಲ್ಲೆಯಲ್ಲಿ ಈ ರೋಗ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ೧೯೪೮ ರಲ್ಲಿ ಜಿಲ್ಲಾ ಮಲೇರಿಯಾ ನಿಯಂತ್ರಣ ಕಾರ್ಯಕ್ರಮ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಈ ಕಾರ್ಯಕ್ರಮ ಜಿಲ್ಲೆಯ ನಾಲ್ಕು ಫಿರ್ಕಾಗಳಿಗೆ ಮಾತ್ರ ಸೀಮಿತವಾಗಿತ್ತು. ಈ ನಾಲ್ಕು ಫಿರ್ಕಾಗಳಲ್ಲಿ ೧೯೪೯ರಲ್ಲಿ ಕಂಡುಬಂದ ಗುಲ್ಮ ಮತ್ತು ಪರೋಪಜೀವಿಗಳ ದರವನ್ನು ಕೋಷ್ಟಕ ೧೫.೧೭ ರಲ್ಲಿ ಗಮನಿಸಬಹುದು. ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ಕಛೇರಿ ಪುತ್ತೂರು ತಾಲೂಕಿನಲ್ಲಿತ್ತು. ೧೯೫೦ ರವರೆಗೆ ಬೆಳ್ಳಾರೆ, ಸುಳ್ಯ, ಉಪ್ಪಿನಂಗಡಿ ಮತ್ತು ಬೆಳ್ತಂಗಡಿಗಳಲ್ಲಿ ಇದರ ಉಪ ಕಛೇರಿಗಳಿದ್ದವು. ಬಳಿಕ ಈ ಕಾರ್ಯಕ್ರಮವನ್ನು ಕಾರ್ಕಳ ತಾಲೂಕಿಗೂ ವಿಸ್ತರಿಸಲಾಯಿತು. ೧೯೫೨ ಕುಂದಾಪುರ ತಾಲೂಕಿನ ಹಳ್ಳಿಗಳಿಗೂ ವಿಸ್ತರಿಸಲಾಯಿತು. ಈ ರೋಗ ಹೆಚ್ಚು ಹರಡುವ ಋತುಗಳಲ್ಲಿ (ಡಿಸೆಂಬರ್ – ಜೂನ್) ಡಿ.ಡಿ.ಟಿ. ಸಿಂಪಡಿಸಲಾಗುತ್ತಿತ್ತು. ಈ ಕಾರ್ಯಕ್ರಮದಿಂದ ಗಮನಾರ್ಹವಾದ ಫಲಿತಾಂಶವು ದೊರಕಿತು. ೧೯೪೭ರ ಅವಧಿಯಲ್ಲಿ ಚಿಕಿತ್ಸಾಲಯಗಳಲ್ಲಿ ನೀಡಿರುವ ಶುಶ್ರೂಷೆಯ ವಿವರವನ್ನು ಕೋಷ್ಟಕ ೧೫.೧೮ ರಲ್ಲಿ ಗಮನಿಸಬಹುದು. ಮಲೇರಿಯಾ ನಿಯಂತ್ರಣಕ್ಕೆ ಕ್ರಿಮಿನಾಶಕಗಳನ್ನು ಸಿಂಪಡಿಸುವ ಕಾರ್ಯಕ್ರಮವನ್ನು ೧೯೫೭ ರಲ್ಲಿ ನಿಲ್ಲಿಸಲಾಯಿತು. ಬಳಿಕ ಮಲೇರಿಯಾ ನಿಯಂತ್ರಣ ಕಾರ್ಯಕ್ರಮವನ್ನು ಮರುಸಂಘಟಿಸಲಾಯಿತು. ೧೯೫೭–೫೮ ರಲ್ಲಿ ಮಲೇರಿಯಾ ರೋಗದಿಂದ ೬೨ ಜನ ಮರಣ ಹೊಂದಿದರು ಎಂದು ದಾಖಲೆಗಳು ತಿಳಿಸುತ್ತವೆ.

**ಕೋಷ್ಟಕ ೧೫.೧೮ : ಮಲೇರಿಯ ರೋಗಕ್ಕೆ ಜಿಲ್ಲೆಯ ವಿವಿಧೆಡೆ ನೀಡಿದ ಶುಶ್ರೂಷೆ ಪ್ರಮಾಣ** (೧೯೪೭–೫೧)

| ಆಸ್ಪತ್ರೆಗಳು | ಮಲೇರಿಯಕ್ಕೆ ಶುಶ್ರೂಷೆ ನೀಡಿದ ಪ್ರಮಾಣ ಶೇ.(%) | | | | |
|---|---|---|---|---|---|
| | ೧೯೪೭ | ೧೯೪೮ | ೧೯೪೯ | ೧೯೫೦ | ೧೯೫೧ |
| L.F.ಆಸ್ಪತ್ರೆ, ಕಡಬ | ೫೯.೬ | ೫೯.೪ | ೪೬.೦ | ೨೬.೫ | ೨೪.೩ |
| ಗ್ರಾಮೀಣ ಆಸ್ಪತ್ರೆ, ಉಪ್ಪಿನಂಗಡಿ | ೪೫.೪ | ೩೭.೧ | ೩೧.೯ | ೨೬.೦ | ೧೯.೧ |
| L.F.ಆಸ್ಪತ್ರೆ, ಬೆಳ್ತಂಗಡಿ | ೪೪.೧ | ೫೫.೧ | ೩೬.೩ | ೨೭.೫ | ೨೪.೧ |
| L.F.ಆಸ್ಪತ್ರೆ, ಸುಳ್ಯ | ೩೫.೮ | ೩೨.೭ | ೨೮.೯ | ೧೭.೭ | ೧೩.೮ |
| ಗುಲ್ಮ ದರ | – | ೪೫.೯ | ೩೮.೮ | ೨೩.೫ | ೯.೪೫ |
| ಪರೋಪಜೀವಿ ದರ | – | ೮.೩ | ೩.೫ | ೧.೦ | ೦.೫೫ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

೧೯೬೦ರಲ್ಲಿ ಪರಿಣಾಮಕಾರಿಯಾಗಿ ಮಲೇರಿಯಾದಿಂದ ರಕ್ಷಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಇಡೀ ಜಿಲ್ಲೆಯನ್ನು ೧೩೫ ಘಟಕಗಳನ್ನಾಗಿ ವಿಗಂಡಿಸಿ, ಪ್ರತಿಯೊಂದು ಘಟಕದ ಜವಾಬ್ದಾರಿಯನ್ನು ಮಲೇರಿಯಾದಿಂದ ರಕ್ಷಿಸುವ ಕಾರ್ಯಕರ್ತರಿಗೆ ವಹಿಸಲಾಯಿತು. ಈ ಕಾರ್ಯಕರ್ತರ ಮುಖ್ಯ ಕೆಲಸ, ಅವರವರ ಕ್ಷೇತ್ರದಲ್ಲಿ ಮನೆ ಮನೆಗೆ ಭೇಟಿ ಕೊಟ್ಟು ಮಲೇರಿಯಾ ಜ್ವರವನ್ನು ಗುರುತಿಸುವುದು, ಜ್ವರ ಕಂಡಲ್ಲಿ ರೋಗಿಗಳ ರಕ್ತವನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸುವುದು ಆಗಿತ್ತು. ಮಲೇರಿಯಾವನ್ನು ಗುರುತಿಸಿದ್ದಲ್ಲಿ ಅಂತವರಿಗೆ ಮಲೇರಿಯಾ ವಿರುದ್ಧ ಶುಶ್ರೂಷೆಯನ್ನು ಕೊಡುವುದು ಆಗಿತ್ತು. ಈ ಕಾರ್ಯಕ್ರಮದ ಬಳಿಕ ಅಕ್ಟೋಬರ್೧೯೬೧ರಲ್ಲಿ ಈ ಕಾರ್ಯಕರ್ತರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೇಮಿಸಲಾಯಿತು. ೧೯೬೫ ರಿಂದ ೧೯೭೧ರವರೆಗೆ ಮಲೇರಿಯಾ ನಿಯಂತ್ರಣಕ್ಕಾಗಿ ರಕ್ತ ಪರೀಕ್ಷೆ ಮಾಡಿರುವ ಕುರಿತು ಮಾಹಿತಿಯನ್ನು ಕೋಷ್ಟಕ ೧೫.೧೯ರಲ್ಲಿ ಗಮನಿಸಬಹುದು.

**ಕೋಷ್ಟಕ ೧೫.೧೯ : ಮಲೇರಿಯಾ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರಕ್ತ ಪರೀಕ್ಷೆಯ ಫಲಿತಾಂಶಗಳು (೧೯೬೫–೧೯೭೧)**

| ವರ್ಷ | ಸ್ಥಿತ ರಕ್ತ ಲೇಪನ | ಖಚಿತ ಪ್ರಕರಣ | ಸಕ್ರಿಯ ರಕ್ತ ಕ್ರಿಯ | ಖಚಿತ ಪ್ರಕರಣ | ಸಾಮೂಹಿಕ ರಕ್ತ ಲೇಪನ | ಖಚಿತ ಪ್ರಕರಣ |
|---|---|---|---|---|---|---|
| ೧೯೬೫ | ೧೧,೮೧೨ | ೧ | ೩೧,೧೫೯ | – | ೬೬೭ | – |
| ೧೯೬೬ | ೧೩,೭೧೦ | – | ೨೯,೫೩೬ | – | ೭೯೩ | – |
| ೧೯೬೭ | ೧೬,೮೭೦ | – | ೪೦,೦೧೧ | ೧ | ೨೫೦ | – |
| ೧೯೬೮ | ೧೬,೯೯೯ | ೧ | ೩೬,೫೬೧ | ೧ | ೧,೪೭೬ | – |
| ೧೯೬೯ | ೧೭,೭೮೫ | ೬ | ೨೦,೨೬೭ | ೬ | ೭೩,೭೦೮ | ೬೩ |
| ೧೯೭೦ | ೧೫,೦೩೯ | ೨ | ೪೪,೫೯೭ | ೪ | ೨,೧೩೯ | ೧ |
| ೧೯೭೧ | ೧೫,೧೯೨ | ೩೬ | ೪೧.೨೧೦ | ೩೩ | ೧೨,೭೧೮ | ೪೬ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

**ಕೋಷ್ಟಕ ೧೫.೧೯(ಎ) : ೧೯೯೮ ರಿಂದ ೨೦೦೫ರ ವರೆಗೆ ಜಿಲ್ಲೆಯಲ್ಲಿ ಮಲೇರಿಯಾ ರೋಗ ನಿರ್ಮೂಲನ ಕಾರ್ಯಕ್ರಮದ ವಿವರ**

| ವರ್ಷ | ಪರೀಕ್ಷಿಸಿದ ರಕ್ತ ಲೇಪನಗಳ ಸಂಖ್ಯೆ | ಮಲೇರಿಯಾ ರೋಗ ಪೀಡಿತರ ಸಂಖ್ಯೆ | ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ |
|---|---|---|---|
| ೧೯೯೮ | ೨೫೫೫೦೬ | ೭೯೯೪ | ೭೯೮೨ |
| ೧೯೯೯ | ೨೧೪೪೮೭ | ೪೪೩೮ | ೪೪೩೩ |
| ೨೦೦೦ | ೨೨೧೪೭೯ | ೨೬೫೩ | ೨೬೫೩ |
| ೨೦೦೧ | ೨೬೬೬೬೧ | ೪೪೪೧ | ೪೪೩೭ |
| ೨೦೦೨ | ೨೮೨೯೦೫ | ೫೦೬೯ | ೫೦೬೫ |
| ೨೦೦೩ | ೩೨೫೬೯೦ | ೬೩೪೪ | ೬೩೪೧ |
| ೨೦೦೪ | ೪೮೬೮೫೧ | ೧೪೧೬ | ೧೪೧೫ |
| ೨೦೦೫ | ೩೨೮೮೬೨ | ೧೬೧೫೪ | ೧೬೧೪೦ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

## ಕುಷ್ಠ ರೋಗ

ಕುಷ್ಠರೋಗವು ಶತಮಾನಗಳಿಮದ ಭಾರತೀಯರನ್ನು ಕಾಡುತ್ತಿದ್ದ ರೋಗ. ಸಾಮಾಜಿಕವಾಗಿ ಕುಷ್ಠರೋಗಿಗಳನ್ನು ಹೀನಾಯವಾಗಿ ಕಾಣಲಾಗುತ್ತಿತ್ತು. ಅರವತ್ತರ ದಶಕದಲ್ಲಿ ಕುಷ್ಠರೋಗ ನಿವಾರಣಾ ಕಾರ್ಯದಲ್ಲಿ ತೊಡಗಿದ್ದ ಕಾರ್ಯಕರ್ತರ ಅಂದಾಜಿನಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೨–೧೫ ಸಾವಿರದಷ್ಟು ಕುಷ್ಠರೋಗಿಗಳಿದ್ದರು. ಸರಕಾರದ ನಗರ ಸಭೆಗಳಲ್ಲದ್ದೆ, ಕುಷ್ಠ ರೋಗ ನಿವಾರಣಾ ಸಂಘ, ಧರ್ಮ ಪ್ರಚಾರಕ ಸಂಘ ಹಾಗೂ ಪಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆ ಈ ರೋಗ ನಿವಾರಣೆಗೆ ಪ್ರಯತ್ನಿಸಿದ್ದವು.

**ಕೋಷ್ಟಕ ೧೫.೨೦ : ಜಿಲ್ಲೆಯಲ್ಲಿ ಕುಷ್ಠ ರೋಗಕ್ಕೆ ಶುಶ್ರೂಷೆ ನೀಡಿದ ಪ್ರಮಾಣ (೧೯೬೨–೭೧)**

| ವರ್ಷ | ಹೊಸ ರೋಗಿಗಳು | ಗುಣಮುಖರಾದವರು | ಹಳೆಯ ರೋಗಿಗಳು | ಒಟ್ಟು |
|---|---|---|---|---|
| ೧೯೬೨ | ೧೨೯ | ೩೯೮ | ೪ | ೫೩೧ |
| ೧೯೬೩ | ೧೬೦ | ೪೨೧ | ೫ | ೫೮೬ |
| ೧೯೬೪ | ೧೯೪ | ೪೨೮ | ೭ | ೬೨೪ |
| ೧೯೬೫ | ೨೬೮ | ೪೦೮ | ೨ | ೬೭೮ |
| ೧೯೬೬ | ೪೦೪ | ೮೭೪ | ೯ | ೧,೨೮೭ |
| ೧೯೬೭ | ೪೯೫ | ೧,೨೪೪ | ೧೫ | ೧,೭೫೪ |
| ೧೯೬೮ | ೫೮೭ | ೧,೬೨೪ | ೧೫ | ೨,೨೨೬ |
| ೧೯೬೯ | ೬೬೫ | ೨,೦೫೦ | ೧೪ | ೨,೭೨೯ |
| ೧೯೭೦ | ೭೦೩ | ೨,೩೪೩ | ೨೦ | ೩,೦೬೬ |
| ೧೯೭೧ | ೭೪೩ | ೨,೬೧೨ | ೨೫ | ೩,೩೮೦ |
| ಮೊತ್ತ | ೪,೩೪೮ | ೧೨,೩೯೭ | ೧೧೬ | ೧೬,೮೬೧ |

**ಆಧಾರ**: ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

ಕುಷ್ಠರೋಗ ನಿಯಂತ್ರಣ ಕೇಂದ್ರವು ೧೯೫೫ರಲ್ಲಿ ಅಸ್ತಿತ್ವಕ್ಕೆ ಬಂತು. ಹಿಂದೂ ಕುಷ್ಠ ನಿವಾರಣಾ ಸಂಘದ ದಕ್ಷಿಣ ಕನ್ನಡ ಜಿಲ್ಲಾ ವಿಭಾಗದ ಸಹಯೋಗದಲ್ಲಿ ಈ ಕೇಂದ್ರವು ಕುಷ್ಠರೋಗದ ವಿರುದ್ಧ ಕೆಲಸ ಮಾಡುತ್ತಿತ್ತು. ಕುಷ್ಠ ರೋಗಿಗಳ ಗಣತಿ, ಮುಂಜಾಗ್ರತಾ ಶಿಕ್ಷಣ, ವಿವಿಧ ಚಿಕಿತ್ಸಾಲಯಗಳಿಗೆ ಸೂಕ್ತ ಔಷಧಿಗಳನ್ನು ಒದಗಿಸುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಷ್ಠ ರೋಗ ಚಿಕಿತ್ಸಾಲಯಗಳನ್ನು ತೆರೆಯುವುದು ಈ ಕೇಂದ್ರದ ಮುಖ್ಯ ಕಾರ್ಯವಾಗಿತ್ತು. ೧೯೭೦ರ ವೇಳೆಗೆ ಜಿಲ್ಲೆಯಲ್ಲಿ ಸುಮಾರು ಹತ್ತು ಕುಷ್ಠರೋಗ ಚಿಕಿತ್ಸಾಲಯಗಳಿದ್ದವು. ಇದರಲ್ಲಿ ಐದು ಸ್ವತಂತ್ರವಾಗಿ ಕೆಲಸ ನಿರ್ವಹಿಸುತ್ತಿದ್ದರೆ ಇತರ ಐದು L.F.(Local Fund) ಆಸ್ಪತ್ರೆಗಳಿಗೆ ಸಂಯೋಜಿತವಾಗಿದ್ದವು. ಐದು ಕೇಂದ್ರಗಳು ಇಂದು ಕುಷ್ಠ ನಿರ್ಮೂಲನಾ ಸಂಘದವರ ಸಹಯೋಗದಲ್ಲಿ, ಇನ್ನುಳಿದ ನಾಲ್ಕು ಆಸ್ಪತ್ರೆಗಳು ಶಿರ್ವ, ಮುಲ್ಕಿ, ವಿಟ್ಲ ಹಾಗೂ ಬಂಟ್ವಾಳಗಳಲ್ಲಿ ಇರುವ ಸರಕಾರಿ ಆಸ್ಪತ್ರೆಗಳಾಗಿವೆ. ಆ ಅವಧಿಯಲ್ಲಿ ಕುಷ್ಠ ರೋಗಿಗಳನ್ನು ಶುಶ್ರೂಷೆ ಮಾಡಿರುವ ಕುರಿತು ಮಾಹಿತಿಯನ್ನು ಕೋಷ್ಟಕ ೧೫.೨೦ರಲ್ಲಿ ಗಮನಿಸಬಹುದು. ೧೯೪೯ರಲ್ಲಿ, ರಾಷ್ಟ್ರೀಯ ಕುಷ್ಠ ರೋಗ ನಿಯಂತ್ರಣ ಕೇಂದ್ರವನ್ನು ೧೯೪೯ ಆಗಸ್ಟ್ ೩ ರಂದು ಪ್ರಾರಂಭಿಸಲಾಯಿತು ಸುಮಾರು ೨,೫೮,೪೯ ಜನ ಸಂಖ್ಯೆಯಿರುವ ೧೦೧ ಹಳ್ಳಿಗಳಿಗೆ ಅದರ ಕಾರ್ಯಕ್ರಮವನ್ನು ವಿಸ್ತರಿಸಲಾಯಿತು. ಈ ಕೇಂದ್ರವು ಕೋಟೇಶ್ವರ, ವಂಡ್ಸೆ ಬೈಂದೂರು ಹಾಗೂ ಶಂಕರನಾರಾಯಣಗಳ ಉಪಕೇಂದ್ರಗಳನ್ನು ಹೊಂದಿತ್ತು. ಈಗ ಈ ಪ್ರದೇಶಗಳು ಉಡುಪಿ ಜಿಲ್ಲೆಯಲ್ಲಿ ಸೇರಿಕೊಂಡಿವೆ ಈ ಹತ್ತು ಕೇಂದ್ರಗಳು ೧೯೬೯ ರಿಂದ ೭೨ರ ಮೂರು ವರ್ಷಗಳಲ್ಲಿ ಕುಷ್ಠ ರೋಗದ ಶುಶ್ರೂಷೆಗೆ ಮಾಡಿರುವ ವೆಚ್ಚ ಹಾಗೂ ರೋಗಿಗಳ ಅಂಕಿಅಂಶವನ್ನು ಕೊಷ್ಟಕ ೧೫.೨೧ರಲ್ಲಿ ಗಮನಿಸಬಹುದು.

**ಕೋಷ್ಟಕ ೧೫.೨೧ : ರಾಷ್ಟ್ರೀಯ ಕುಷ್ಠ ರೋಗ ನಿವಾರಣಾ ಕೇಂದ್ರ ನೀಡಿರುವ ಚಿಕಿತ್ಸಾ ಪ್ರಮಾಣ ಮತ್ತು ವೆಚ್ಚ(೧೯೬೯–೭೨)**

| ವರ್ಷ | ಕುಷ್ಠ ರೋಗವನ್ನು ಆದರಿಸಿದ ಸಂಖ್ಯೆ | ಹೊಸ ಅವಸ್ಥೆಯನ್ನು ಆದರಿಸಿದ ಸಂಖ್ಯೆ | ವೆಚ್ಚ ರೂ.ಗಳಲ್ಲಿ |
|---|---|---|---|
| ೧೯೬೯–೭೦ | ೨೯೨ | ೪೦ | ೩೭,೦೬೯ |
| ೧೯೭೦–೭೧ | ೩೩೯ | ೫೦ | ೩೭,೪೫೨ |
| ೧೯೭೧–೭೨ | ೨೫೪ | ೩೮ | ೩೯,೩೧೨ |
| ಒಟ್ಟು | ೮೫ | ೧೨೮ | ೧,೧೩,೮೩೩ |

**ಆಧಾರ**: ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

**ಕೋಷ್ಟಕ ೧೫.೨೧(ಎ) : ಇತ್ತೀಚೆಗೆ ಜಿಲ್ಲೆಯಲ್ಲಿ ಕುಷ್ಠ ರೋಗಪೀಡಿತರಿಗೆ ನೀಡಿದ ಚಿಕಿತ್ಸೆಯ ವಿವರ.**

| ವರ್ಷ | ಗುರ್ತಿಸಲಾದ ಹೊಸ ರೋಗಿಗಳ ಸಂಖ್ಯೆ | ಗುಣ ಹೊಂದಿದವರ ಸಂಖ್ಯೆ |
|---|---|---|
| ೧೯೯೫ | ೪೬೯ | ೫೪೨ |
| ೧೯೯೬ | ೪೬೨ | ೫೩೪ |
| ೧೯೯೭ | ೫೩೧ | ೬೬ |
| ೧೯೯೮ | ೩೮೪ | ೫೧೮ |
| ೧೯೯೯ | ೪೦೯ | ೩೬೯ |
| ೨೦೦೦ | ೨೧೭ | ೨೬೭ |
| ೨೦೦೧ | ೩೦೦ | ೩೮೭ |
| ೨೦೦೨ | ೨೫ | ೨೫೪ |
| ೨೦೦೩ | ೧೬೨ | ೨೨೧ |
| ೨೦೦೪ | ೧೫೩ | ೧೫೪ |
| ೨೦೦೫ | ೮೨ | ೧೨೬ |
| ೨೦೦೬ | ೪೪ | ೫೬ |

**ಆಧಾರ** : ಆರೋಗ್ಯ ಇಲಾಖೆ, ಬೆಂಗಳೂರು.

೧೯೫೪ರಲ್ಲಿ ನಡೆಸಿದ ಸಮೀಕ್ಷೆಯಂತೆ ಮಂಗಳೂರು ನಗರದಲ್ಲಿ ಶೇ.೧೫ರಷ್ಟು ಜನ ಸೂಕ್ಷ್ಮಾಣುಗಳ ಸೋಂಕಿಗೆ ಒಳಗಾಗಿದ್ದರು. ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಈ ಪ್ರಮಾಣದಲ್ಲಿ ತುಂಬಾ ವ್ಯತ್ಯಾಸವಿದ್ದು ಇದನ್ನು ಕೋಷ್ಟಕ ೧೫.೨೨ರಲ್ಲಿ ಗಮನಿಸಬಹುದು.

**ಕೋಷ್ಟಕ ೧೫.೨೨ : ಜಿಲ್ಲೆಯ ವಿವಿಧೆಡೆ ಸೂಕ್ಷ್ಮಾಣು ಸೋಂಕಿನ ಪ್ರಮಾಣ (ವರ್ಷ೧೯೫೪)**

| ಸ್ಥಳ | ಸೂಕ್ಷ್ಮಾಣು ಸೋಂಕಿನ ಪ್ರಮಾಣ ಶೇ. (%) | ರೋಗದ ವೆಚ್ಚ ಶೇ.(%) |
|---|---|---|
| ಉಡುಪಿ | ೯.೬% | ೧.೮% |
| ಪುತ್ತುರು | ೪.೦% | ೦.೭% |
| ಕಾರ್ಕಳ | ೮.೧% | ೦.೭% |
| ಉಳ್ಳಾಲ | ೪.೬% | ೦.೬% |
| ಸುರತ್ಕಲ್ | ೨.೬% | ೦.೧% |
| ಮಣಿಪಾಲ | ೪.೨% | ೦.೨% |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

## ಆನೇಕಾಲು ರೋಗ (ಫೈಲೇರಿಯಾ)

ಇದು ಮೈಕ್ರೋ ಫೈಲೇರಿಯಾ ನಾಕ್ಟುರ್ನಾ (Microfilaria) ಎಂಬ ತಂತುವಿನಾಕಾರದ ಕ್ರಿಮಿಗಳಿಂದ ಉಂಟಾಗುವ ಒಂದು ಸಾಂಕ್ರಾಮಿಕ ರೋಗ. ಮಾರಕವಲ್ಲದಿದ್ದರೂ ಸಹ ಈ ರೋಗ ಒಂದು ಸಾಮಾಜಿಕ ಕಳಂಕವೆನ್ನುವಂತೆ, ರೋಗಿಯ ಕಾಲುಗಳು ಆನೆಯ ಕಾಲಿನಂತೆ ಊದಿಕೊಂಡು ಪೂರ್ವಸ್ಥಿತಿಗೆ ಬದಲಾಗದಂತಹ ಸ್ಥಿತಿ ಉಂಟುಮಾಡುತ್ತದೆ.ಇದರ ಸೋಂಕಿರುವ ವ್ಯಕ್ತಿಯ ದುಗ್ದರಸ ಗ್ರಂಥಿಗಳಲ್ಲಿ ತಂತುವಿನಾಕಾರದ ಕ್ರಿಮಿಗಳು ನೆಲೆಗೊಂಡಿದ್ದು, ಈ ವ್ಯಕ್ತಿಯನ್ನು ಕಚ್ಚಿದ ಸೊಳ್ಳೆ ಅವನ ರಕ್ತದ ಜೊತೆ ಮೈಕ್ರೊಫೈಲೇರಿಯಾ ರೋಗಾಣುಗಳನ್ನು ಹೊತ್ತುಕೊಂಡು ಆರೋಗ್ಯವಂತ ಮನುಷ್ಯನನ್ನು ಕಚ್ಚಿ ಅವನಿಗೆ ಸೋಂಕನ್ನು ಹರಡುತ್ತದೆ. ಹೀಗೆ ಈ ರೋಗ ಸೊಳ್ಳೆಗಳಿಂದ ಜನಸಮುದಾಯದಲ್ಲಿ ಹರಡುತ್ತದೆ. ವಿಶೇಷವಾಗಿ ಈ ರೋಗ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ರೋಗಾಣುಗಳ ಸಾಂದ್ರತೆಯನ್ನು ಕಡಿಮೆ ಮಾಡಲು (ನಿಯಂತ್ರಿಸಲು) ವಾರಕ್ಕೊಮ್ಮೆ ತೀವ್ರ ಕ್ರಿಮಿನಾಶಕ ಸಿಂಪಡಣಾ ಕ್ರಮಗಳನ್ನು ಕೈಗೊಂಡು, ಫೈಲೇರಿಯಾ ಚಿಕಿತ್ಸಾಲಯಗಳು ಸೂಕ್ಷ್ಮ ಫೈಲೇರಿಯಾ ಪ್ರಕರಣಗಳನ್ನು ಪತ್ತೆಹಚ್ಚಲು ಪರೋಪ ಜೈವಿಕ ಸಮೀಕ್ಷೆ ನಡೆಸಿ ೧೨ ದಿನಗಳ ಕಾಲ ರೋಗಿಗೆ ಡಿ.ಇ.ಸಿ. ಮಾತ್ರೆಗಳನ್ನು ನೀಡುವುದು ಕ್ರಮಗಳಾಗಿವೆ. ೧೯೫೫ ರಿಂದ ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮ ಜಾರಿಯಲ್ಲಿದೆ. ರೋಗದ ನಿಯಂತ್ರಣಕ್ಕೆ ಜಿಲ್ಲೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಅಂಕಿ–ಅಂಶಗಳನ್ನು ಕೋಷ್ಟಕ ೧೫.೨೨(ಎ) ರಿಂದ ತಿಳಿಯಬಹುದು.

**ಕೋಷ್ಟಕ ೧೫.೨೨(ಎ) ಜಿಲ್ಲೆಯಲ್ಲಿ ಆನೇಕಾಲು ರೋಗ (ಫೈಲೇರಿಯಾ) ನಿರ್ಮೂಲನ ಕಾರ್ಯಕ್ರಮದ ವಿವರ**

| ವರ್ಷ | ಪರೀಕ್ಷೆಗೊಳಪಟ್ಟವರ ಸಂಖ್ಯೆ | ಚಿಕಿತ್ಸೆ ಪಡೆದವರ ಸಂಖ್ಯೆ | ಗುಣ ಹೊಂದಿದ ರೋಗಿಗಳ ಸಂಖ್ಯೆ |
|---|---|---|---|
| ೧೯೯೫ | ೪೪೩೧ | ೭೧ | ೯೧ |
| ೧೯೯೬ | ೮೧೯೫ | ೧೦೩ | ೧೫೫ |
| ೧೯೯೭ | ೧೦೬೧೪ | ೧೦೭ | ೨೯೮ |
| ೧೯೯೮ | ೯೧೬೭ | ೧೨೧ | ೨೯೦ |
| ೧೯೯೯ | ೫೯೦೩ | ೬೪ | ೧೬೩ |
| ೨೦೦೦ | ೫೨೮೭ | ೭೬ | ೧೧೭ |
| ೨೦೦೧ | ೬೧೨೪ | ೧೦೪ | ೧೩೬ |
| ೨೦೦೨ | ೪೧೦೬ | ೧೪೦ | ೧೬೩ |
| ೨೦೦೩ | ೩೦೬೫ | ೧೦೭ | ೧೧೨ |
| ೨೦೦೪ | ೬೮೩೨ | ೮೪ | ೧೧೭ |
| ೨೦೦೫ | ೧೧೯೭೦ | ೮೨೦ | ೮೪೧ |

**ಆಧಾರ:** ಆರೋಗ್ಯ ಇಲಾಖೆ, ಬೆಂಗಳೂರು.

## ಕ್ಷಯರೋಗ

ಕ್ಷಯ ರೋಗವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡುವ ಇನ್ನೊಂದು ಸಾಂಕ್ರಾಮಿಕ ರೋಗ ಮೈಕ್ರೊಬ್ಯಾಕ್ಟೀರಿಯಂ ಟ್ಯುಬರ್‌ಕ್ಯುಲೋಸಿಸ್ ಎಂಬ ರೋಗಾಣುವಿನಿಂದ ಗಾಳಿಯ ಮೂಲಕ ಹರಡುವ ಈ ರೋಗವನ್ನು ಹತೋಟಿಯಲ್ಲಿಡಲು ಅನೇಕ ತೊಡಕುಗಳಿವೆ. ಬಡತನ, ಎಲ್ಲೆಂದರಲ್ಲಿ ಕ್ಷಯ ರೋಗಿಗಳು ರೋಗಾಣುಯುಕ್ತ ಕಫವನ್ನು ಉಗುಳುವುದು, ಪೌಷ್ಟಿಕಾಂಶ ಆಹಾರಗಳ ಕೊರತೆ, ಮೊದಲಾದ ತೊಡಕುಗಳಿಂದ, ಸಾಕಷ್ಟು ಔಷಧಿಗಳು, ಬಿ.ಸಿ.ಜಿ. ಚುಚ್ಚು ಮದ್ದು ಇದ್ದರೂ ಈ ರೋಗವನ್ನು ಹತೋಟಿಯಲ್ಲಿಡುವುದು ಕಷ್ಟ ಸಾಧ್ಯವಾಗಿದೆ.

ರಾಷ್ಟ್ರೀಯ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮವನ್ನು ಸಂಯೋಜಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಸರಕಾರದ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮದಂತೆ ದಕ್ಷಿಣ ಕನ್ನಡ ಜಿಲ್ಲಾ ಕ್ಷಯ ರೋಗ ನಿಯಂತ್ರಣಾ ಸಂಘವು ೧೯೬೪ರಲ್ಲಿ ಅಸ್ತಿತ್ವಕ್ಕೆ ಬಂತು. ಇದು ಜಿಲ್ಲೆಯಾದ್ಯಂತ ೪೨ ಉಪ ಕೇಂದ್ರಗಳನ್ನು ಹೊಂದಿತ್ತು. ಈ ಕೇಂದ್ರಗಳಲ್ಲಿ ಶುಶ್ರೂಷೆ ನೀಡಿದ ರೋಗಿಗಳ ವಿವರ ಕೋಷ್ಟಕ ೧೫.೨೩ರಲ್ಲಿ ಗಮನಿಸಬಹುದು. ಬಿ.ಸಿ.ಜಿ. ಚುಚ್ಚು ಮದ್ದುಗಳನ್ನು, ಈ ರೋಗದ ಮುಂಜಾಗರೂಕತೆಯ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲಾ ಕ್ಷಯ ನಿಯಂತ್ರಣ ಸಂಘದವರು ೧೯೭೧ರ ಅವಧಿಯಲ್ಲಿ ಮಕ್ಕಳಿಗೆ ನೀಡಿದ್ದರು. ಅಮಿಯೋಬಿಸಿಸ್, ಟೈಫೈಡ್ ಹಾಗೂ ಹೊಟ್ಟೆಹುಳು (worms)ಗಳ ಬಾಧೆಯಿಂದ ಬರುವ ಅಂಟುರೋಗಗಳು ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಕಾಣಿಸುತ್ತಿದ್ದುದಕ್ಕೆ ವಿವಿಧ ಕಾರಣಗಳಿವೆ. ಇವುಗಳನ್ನು ಮುಖ್ಯವಾಗಿ ರಕ್ಷಣೆ ಇಲ್ಲದ ಕುಡಿಯುವ ನೀರಿನ ವ್ಯವಸ್ಥೆ, ತೃಪ್ತಿದಾಯಕವಲ್ಲದ ಸ್ವಾಸ್ಥ್ಯ ವ್ಯವಸ್ಥೆ, ಸ್ವಚ್ಛತೆ ಕಡಿಮೆ ಇರುವ ಹೋಟೆಲು ವ್ಯವಸ್ಥೆ, ಸಾರ್ವಜನಿಕ ಶೌಚಾಲಯದ ಕೊರತೆ, ಧೂಳುಗಳಿಗೆ ತೆರೆದಿಡುವ ಸಿಹಿತಿಂಡಿ, ಹಣ್ಣುಹಂಪಲುಗಳು, ಅನಾರೋಗ್ಯಕರ ವೈಯಕ್ತಿಕ ಅಭ್ಯಾಸಗಳು ಹಾಗೂ ಪೌರ ಪ್ರಜ್ಞೆ ಕಡಿಮೆ ಇರುವುದು ಎಂಬುದಾಗಿ ಗುರುತಿಸಬಹುದು. ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಕ್ಷಯರೋಗ ನಿಯಂತ್ರಣಾ ಕಾರ್ಯಕ್ರಮಗಳ ಉಸ್ತುವಾರಿ ಹೊಂದಿರುತ್ತಾರೆ. ಕಡಿಮೆ ಅವಧಿಯ ಚಿಕಿತ್ಸಾ ಕ್ರಮವನ್ನು ಈ ಜಿಲ್ಲೆಯಲ್ಲೂ ಅಳವಡಿಸಲಾಗಿದೆ. ಜಿಲ್ಲಾ ಕ್ಷಯರೋಗ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳು 'ಕ್ಷ'ಕಿರಣ ಮತ್ತು ಕಫ ಪರೀಕ್ಷಾ ಸೌಲಭ್ಯಗಳನ್ನು ಪಡೆದಿವೆ.

**ಕೋಷ್ಟಕ ೧೫.೨೩: ಜಿಲ್ಲಾ ಕ್ಷಯ ರೋಗ ನಿಯಂತ್ರಣ ಕೇಂದ್ರಗಳಲ್ಲಿ ಶುಶ್ರೂಷೆ ಪಡೆದ ರೋಗಿಗಳ ಸಂಖ್ಯೆ** (೧೯೯೮–೨೦೦೬)

| ವರ್ಷ | ಪರೀಕ್ಷೆಗೊಳಪಟ್ಟವರ ಸಂಖ್ಯೆ | ಚಿಕಿತ್ಸೆ ಪಡೆದವರ ಸಂಖ್ಯೆ | ಗುಣ ಹೊಂದಿದವರು ಶೇ. |
|---|---|---|---|
| ೨೦೦೩ | ೧೦೮೬೪ | ೧೪೦೭ | ೮೭ |
| ೨೦೦೪ | ೧೯೯೭ | ೧೮೨೮ | ೮೫ |
| ೨೦೦೫ | ೧೩೬೨೨ | ೨೧೩೬ | ೮೪ |
| ೨೦೦೬(ಸೆಪ್ಟೆಂಬರ್‌ವರೆಗೆ) | ೯೬೪೨ | ೧೯೬ | ೮೧ |

**ಆಧಾರ :** ಆರೋಗ್ಯ ಇಲಾಖೆ, ಬೆಂಗಳೂರು.

## ಡೆಂಗೀಜ್ವರ (ಡೆಂಗ್ಯೂ)

ಡೇಂಗಿ ಜ್ವರ ಮಾರಕವಾದ ಕಾಯಿಲೆ ಆಗಿದ್ದು ಮಕ್ಕಳಲ್ಲಿ ತೀವ್ರ ಸ್ವರೂಪದಲ್ಲಿ ಉಂಟಾಗುತ್ತದೆ. ಇದು ಡೆಂಗೀ ಎಂಬ ವೈರಸ್‌ದಿಂದ ಉಂಟಾಗುತ್ತದೆ. ಈಡಿಸ್–ಈಜಿಪ್ಟೈ ಎಂಬ ಸೊಳ್ಳೆ ಕಚ್ಚುವಿಕೆಯಿಂದ ಈ ರೋಗವು ಹರಡುತ್ತದೆ. ಡೆಂಗೀಯಲ್ಲಿ ಮೂರು ವಿಧಗಳು – ೧) ಸಾಮಾನ್ಯ ಡೆಂಗೀ ೨) ಡೆಂಗೀ ರಕ್ತಸ್ರಾವ (ಡಿ.ಎಚ್.ಎಫ್) ಹಾಗೂ ೩) ಡೆಂಗೀ ಶಾಕ್ ಸಿಂಡ್ರೋಮ್ (ಡಿ.ಎಸ್.ಎಸ್.) ತೀವ್ರಜ್ವರ, ವಿಪರೀತ ತಲೆನೋವು ಹಾಗೂ ಮಾಂಸಖಂಡ ಕೀಲುನೋವುಗಳು ರೋಗದ ಪ್ರಮುಖ ಲಕ್ಷಣಗಳಾಗಿವೆ. ಈ ರೋಗಕ್ಕೆ ನಿರ್ದಿಷ್ಟವಾದ ಔಷಧಿ ಇರುವುದಿಲ್ಲ. ರೋಗ ಬಂದಾಗ ದ್ರವ ಆಹಾರ ಕೊಡುವುದು, ಪ್ಯಾರಸಿಟಮಾಲ್‌ದಂತಹ ಪೂರ್ವಭಾವಿ ಚಿಕಿತ್ಸೆ ನೀಡಿ, ರೋಗಿಯನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಬೇಕು. ಡೆಂಗೀ(ರಕ್ತಸ್ರಾವ)ಜ್ವರ ಮಕ್ಕಳಲ್ಲಿ ತೀವ್ರವಾಗಿ ಕಂಡುಬರುವುದಲ್ಲದೆ ಇದು ಬಹಳ ಅಪಾಯಕಾರಿ. ವಿಪರೀತ ಜ್ವರದ ನಂತರ ರಕ್ತಸ್ರಾವ, ಮೈಊತದ ನಂತರ ರಕ್ತದ ಒತ್ತಡ ಕುಸಿದು ಮರಣ ಸಂಭವಿಸಬಹುದಾಗಿದೆ. ರೋಗದಿಂದ ಬಳಲುವ ವ್ಯಕ್ತಿಯನ್ನು ಈಡೀಸ್–ಈಜಿಪ್ಟೈ ಸೊಳ್ಳೆ ಕಚ್ಚಿದಾಗ ಅದು ಡೆಂಗೀ ವೈರಸ್‌ಅನ್ನು ಪಡೆದುಕೊಳ್ಳುತ್ತದೆ. ಈ ಸೊಳ್ಳೆ ಆರೋಗ್ಯವಂತ ವ್ಯಕ್ತಿಯನ್ನು ಕಚ್ಚಿದಾಗ ಅವನಿಗೆ ಡೆಂಗೀ ಜ್ವರ ಬರುತ್ತದೆ. ಸೊಳ್ಳೆಗಳು ಈ ರೋಗದ ರೋಗವಾಹಕಗಳು. ಆದ್ದರಿಂದ ಸೊಳ್ಳೆ ತಾಣಗಳನ್ನು ನಾಶಪಡಿಸಿ ಸೊಳ್ಳೆಗಳಿಂದ ರಕ್ಷಣೆ ಪಡೆಯುವ ಮುಂಜಾಗ್ರತಾ ಕ್ರಮ ಅನುಸರಿಸುವುದು ಸೂಕ್ತ. ಡೆಂಗೀ ಜ್ವರವು ಹಗಲಿನಲ್ಲಿ ಕಚ್ಚುವ ಸೊಳ್ಳೆಗಳಿಂದ ಬರುತ್ತದೆ. ಇದು ಮಕ್ಕಳಿಗೂ ಹಾಗೂ ವಯಸ್ಕರಿಗೂ ಬರಬಹುದು.

## ವೆನ್‌ಲಾಕ್ ಆಸ್ಪತ್ರೆ, ಮಂಗಳೂರು

ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರ ನ್ಯಾಯಾಲಯದ ಆದೇಶದಂತೆ, ಮಂಗಳೂರು ಆಸ್ಪತ್ರೆಯನ್ನು ೧೮೧೮ರಲ್ಲಿ ಸ್ಥಾಪಿಸಲಾಯಿತು. ಪ್ರಾರಂಭದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಆಸ್ಪತ್ರೆ ೧೯೫೧ರಲ್ಲಿ ತನ್ನದೇ ಆದ ಕಟ್ಟಡವನ್ನು ಹೊಂದಿತ್ತು. ಈ ಆಸ್ಪತ್ರೆಯ ನಿರ್ವಹಣೆಯನ್ನು ೧೮೭೧ರಲ್ಲಿ ನಗರ ಸಭೆಗೆ ಹಸ್ತಾಂತರಿಸಲಾಯಿತು. ಈ ಆಸ್ಪತ್ರೆಯ ಪ್ರಾರಂಭದ ವರ್ಷ ೧೮೪೮ರಲ್ಲಿ ಶುಶ್ರೂಷೆ ನೀಡಿದ ಒಳರೋಗಿಗಳ ಸಂಖ್ಯೆ ೪೫ ಹಾಗೂ ಹೊರ ರೋಗಿಗಳ ಸಂಖ್ಯೆ ೧೪೪೭ ಆಗಿತ್ತು. ೧೮೯೨ರ ಅವಧಿಗೆ ಈ ಸಂಖ್ಯೆ ಅನುಕ್ರಮವಾಗಿ ೩೨೮ ಹಾಗೂ ೧೫೧೩೩ಕ್ಕೆ ಗಮನಾರ್ಹವಾಗಿ ಹೆಚ್ಚಾಯಿತು, ಬಳಿಕ ೧೯೧೯ರಲ್ಲಿ ಮಂಗಳೂರು ಮುನ್ಸಿಪಾಲ್ ಆಸ್ಪತ್ರೆಯನ್ನು ಆಗಿನ ಮದ್ರಾಸ್ ಸರಕಾರ ವಶಕ್ಕೆ ತೆಗೆದುಕೊಂಡಿತು. ಆಸ್ಪತ್ರೆಯನ್ನು ಆಗಿನ ರಾಜ್ಯಪಾಲ ಲಾರ್ಡ್ ವೆನ್‌ಲಾಕ್ ಅವರ ಹೆಸರಿನಲ್ಲಿ ಪ್ರಾರಂಭಿಸಲಾಯ್ತು. ಪೊಲೀಸ್ ಆಸ್ಪತ್ರೆ ಎಂಬ ಬೇರೆಯೇ ಒಂದು ಸಂಸ್ಥೆಯಿತ್ತು. ಇದು ಈಗಲೂ ಇರುವ ಲೇಡಿಗೋಷನ್ ಆಸ್ಪತ್ರೆಯ ಕಟ್ಟಡದಲ್ಲಿತ್ತು. ೧೯೨೫ರಲ್ಲಿ ಪೋಲೀಸ್ ಆಸ್ಪತ್ರೆಯನ್ನು ವೆನ್‌ಲಾಕ್ ಆಸ್ಪತ್ರೆಯ ಜೊತೆಗೆ ಸೇರಿಸಲಾಯಿತು.

**ಕೋಷ್ಟಕ ೧೫.೨೪ : ವೆನ್‌ಲಾಕ್ ಆಸ್ಪತ್ರೆಯಲ್ಲಿ ಶುಶ್ರೂಷೆ ನೀಡಿರುವ ರೋಗಿಗಳ ಸಂಖ್ಯೆ ಹಾಗೂ ವೆಚ್ಚ**

| ವರ್ಷ | ಶುಶ್ರೂಷೆ ಪಡೆದ ಒಳರೋಗಿಗಳ ಸಂಖ್ಯೆ | ಶುಶ್ರೂಷೆ ಪಡೆದ ಹೊರರೋಗಿಗಳ ಸಂಖ್ಯೆ | ವೆಚ್ಚ ರೂಗಳಲ್ಲಿ |
|---|---|---|---|
| ೧೯೬೯–೭೦ | ೧೫,೯೬೧ | ೪,೭೦,೦೨೫ | ೨೩,೨೩,೫೨೫ |
| ೧೯೭೦–೭೧ | ೧೫,೯೭೨ | ೫,೦೬,೨೪೮ | ೨೪,೭೨,೬೯೭ |
| ೧೯೭೧–೭೨ | ೧೬೩೮೪ | ೫೯೧೫೫೭ | ೩೬೪೭೬೫೭ |

**ಕೋಷ್ಟಕ ೧೫.೨೫ : ಲೇಡಿಗೋಷನ್ ಆಸ್ಪತ್ರೆಯಲ್ಲಿ ಶುಶ್ರೂಷೆ ನೀಡಿರುವ ರೋಗಿಗಳ ಸಂಖ್ಯೆ ಹಾಗೂ ವೆಚ್ಚ**

| ವರ್ಷ | ಶುಶ್ರೂಷೆ ಪಡೆದ ಒಳರೋಗಿಗಳ ಸಂಖ್ಯೆ | ಶುಶ್ರೂಷೆ ಪಡೆದ ಹೊರರೋಗಿಗಳ ಸಂಖ್ಯೆ | ವೆಚ್ಚ ರೂಗಳಲ್ಲಿ |
|---|---|---|---|
| ೧೯೬೯ | ೫೭೧೯ | ೫೨೩೬೦ | ೭೧೭೦೦೦ |
| ೧೯೭೦ | ೫೩೭೪ | ೩೮೩೨೫ | ೭೦೨೭೦೦ |
| ೧೯೭೧ | ೫೮೮೪ | ೩೫೭೭೦ | ೮೧೪೦೦೦ |

**ಕೋಷ್ಟಕ ೧೫.೨೬: ಸರ್ಕಾರಿ ಕುಷ್ಠರೋಗ ನಿವಾರಣಾ ಆಸ್ಪತ್ರೆ, ಮೂಡುಶೆಡ್ಡೆಯಲ್ಲಿ ಚಿಕಿತ್ಸೆ ಪಡೆದ ರೋಗಿಗಳ ವಿವರ**

| ವರ್ಷ | ಶುಶ್ರೂಷೆ ಪಡೆದ ಒಳರೋಗಿಗಳ ಸಂಖ್ಯೆ | ಶುಶ್ರೂಷೆ ಪಡೆದ ಹೊರರೋಗಿಗಳ ಸಂಖ್ಯೆ | ವೆಚ್ಚ ರೂಗಳಲ್ಲಿ |
|---|---|---|---|
| ೧೯೬೯ | ೪೯೪ | ೧೩,೪೭೮ | ೨,೮೦,೦೮೨ |
| ೧೯೭೦ | ೪೧೦ | ೧೨,೦೪೭ | ೨,೯೭,೬೪೨ |
| ೧೯೭೧ | ೪೯೧ | ೧೪,೦೦೮ | ೩,೩೭,೮೫೯ |

**ಆಧಾರ**: ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ.

ಉಡುಪಿ ಸರಕಾರಿ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ೧೯೨೦ ರಲ್ಲಿ ಪ್ರಾರಂಭವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಸರಕಾರಿ ಆಸ್ಪತ್ರೆಯು ೧೮೭೨ ರಲ್ಲಿ ಪ್ರಾರಂಭವಾಯಿತು. ಪುತ್ತೂರು ತಾಲೂಕು ಮಂಡಳಿಯು ಇದರ ಆಡಳಿತ ನಿರ್ವಹಣೆಯನ್ನು ೧೯೨೮ ರವರೆಗೆ ನಡೆಸುತ್ತಿತ್ತು. ಬಳಿಕ ಮದ್ರಾಸ್ ಸರಕಾರ ಇದರ ಮೇಲ್ವಿಚಾರಣೆಯನ್ನು ಮಾಡುತ್ತಿತ್ತು. ಇಲ್ಲಿ ೧೯೨೦ ರಲ್ಲಿ ಹೊರ ರೋಗಿಗಳ ವಿಭಾಗವನ್ನು ಕಟ್ಟಲಾಯಿತು. ಬಳಿಕ ೧೯೩೬ ರಲ್ಲಿ ಒಂದು ಹೆಚ್ಚುವರಿ ಸಲಹಾ ಕೋಣೆಯನ್ನು ಮಹಿಳಾ ಉಪ ಶಸ್ತ್ರವೈದ್ಯೆಯರಿಗಾಗಿ

ತೆರೆಯಲಾಯಿತು. ೧೯೪೨ ರವರೆಗೆ ಈ ಆಸ್ಪತ್ರೆಯಲ್ಲಿ ೨೫ ಹಾಸಿಗೆಯ ಸಾಮರ್ಥ್ಯವನ್ನು ಹೊಂದಿತ್ತು. ೮ ಹಾಸಿಗೆಗಳ ಹೆರಿಗೆ ವಿಭಾಗವನ್ನು ೧೯೪೩ ರಲ್ಲಿ ನಿರ್ಮಿಸಲಾಯಿತು. ೧೯೪೭–೫೮ ರ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಯಿತು. ೧೯೬೨ ರಲ್ಲಿ ೨೦ ಹಾಸಿಗೆಗಳ ಇನ್ನೊಂದು ವಾರ್ಡನ್ನು ಹಾಗೂ ಒಂದು ಕಛೇರಿ ವಿಭಾಗವನ್ನು ನಿರ್ಮಿಸಲಾಯಿತು. ಬಳಿಕ ಸೂತಿಕಾಗೃಹ ಹಾಗೂ ದಾದಿಯರ ವಸತಿ ಗೃಹವನ್ನು ನಿರ್ಮಿಸಲಾಯಿತು ೧೯೬೯ರಲ್ಲಿ, ಸ್ವತಂತ್ರ ಹೊರ ರೋಗಿ ವಿಭಾಗವನ್ನು ತೆರೆಯಲಾಯಿತು. ಈಗ ಈ ಆಸ್ಪತ್ರೆಯು ಕ್ಷ–ಕಿರಣವೇ ಮೊದಲಾದ ಆಧುನಿಕ ವ್ಯವಸ್ಥೆಯನ್ನೊಳಗೊಂಡ ಆಸ್ಪತ್ರೆಯಾಗಿದೆ.

೧೯೫೭ ರಲ್ಲಿ ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಪ್ರತಿ ದಿನ ಸುಮಾರು ಸರಾಸರಿ ೩೦ ಪುರುಷರು, ೧೫ ಮಹಿಳೆಯರು ಹಾಗೂ ಆರು ಮಕ್ಕಳನ್ನು ಒಳ ರೋಗಿಗಳಾಗಿ ಮತ್ತು ೧೨೯ ಪುರುಷರು, ೬೭ ಮಹಿಳೆಯರು ಹಾಗೂ ೭೩ ಮಕ್ಕಳನ್ನು ಹೊರ ರೋಗಿಗಳಾಗಿ ಶುಶ್ರೂಷೆ ಮಾಡಲಾಗುತ್ತಿತ್ತು. ಈ ಶುಶ್ರೂಷೆಗೆ ತಗುಲಿದ ವೆಚ್ಚ ಸುಮಾರು ೫೫,೧೨೫ ರೂಪಾಯಿಗಳು ಆಗಿತ್ತು. ೧೯೬೯–೭೨ರ ಅವಧಿಯಲ್ಲಿ, ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಶುಶ್ರೂಷೆ ಮಾಡಿರುವ ರೋಗಿಗಳ ಸಂಖ್ಯೆ ಹಾಗೂ ತಗುಲಿದ ವೆಚ್ಚವನ್ನು ಕೋಷ್ಟಕ ೧೫.೨೭ ರಲ್ಲಿ ಗಮನಿಸಬಹುದು.

ಆಗಿನ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಸರಕಾರಿ ಆಸ್ಪತ್ರೆಯನ್ನು ೧೮೭೩ರಲ್ಲಿ ತೆರೆಯಲಾಯಿತು, ಬಳಿಕ ಅನೇಕ ಅಭಿವೃದ್ಧಿಗಳನ್ನು ಮಾಡಲಾಯಿತು. ೧೯೭೦ ರ ವೇಳೆಗೆ ಕ್ಷ–ಕಿರಣ, ದಂತ ಚಿಕಿತ್ಸಾಲಯವೇ ಮೊದಲಾದ ವ್ಯವಸ್ಥೆಯನ್ನು ಹೊಂದಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಯ ನಿಯಂತ್ರಣದಲ್ಲಿ ಸ್ಥಳೀಯ ಅನುದಾನಿತ ಆಸ್ಪತ್ರೆಯೊಂದಿತ್ತು. ೧೯೭೦ ರಲ್ಲಿ ಇದನ್ನು ಸರಕಾರ ತೆಗೆದುಕೊಂಡು ಅಭಿವೃದ್ಧಿ ಸಾಧಿಸಲಾಯಿತು. ೧೯೭೨ ರಲ್ಲಿ ಈ ಆಸ್ಪತ್ರೆ ೨೪ ಹಾಸಿಗೆಗಳನ್ನೊಳಗೊಂಡಿತ್ತು. ೧೯೬೯–೭೨ ರ ಅವಧಿಯಲ್ಲಿ ಈ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆದ ರೋಗಿಗಳ ವಿವರ ಕೋಷ್ಟಕ ೧೫.೨೮ರಲ್ಲಿ ಕೊಡಲಾಗಿದೆ. (ಶೇ. ೨೬.೨೭)

## ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆ, ಮಂಗಳೂರು

ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆಯನ್ನು ೧೮೮೦ ರಲ್ಲಿ ಹೋಮಿಯೋಪತಿ ಚಿಕಿತ್ಸಾಲಯದೊಂದಿಗೆ ಸ್ಥಾಪಿಸಲಾಯಿತು. ಜಿಲ್ಲೆಯಲ್ಲಿ ಪ್ಲೇಗ್ ರೋಗವು ಉಲ್ಬಣಗೊಂಡಾಗ, ಪ್ಲೇಗ್ ಆಸ್ಪತ್ರೆಯನ್ನು ಸ್ಥಾಪಿಸಲಾಯಿತು. ೧೯೪೦ ರಲ್ಲಿ ಸಭಿನಾ ಸ್ಮರಣಾರ್ಥ ಆಸ್ಪತ್ರೆಯನ್ನು ಸ್ಥಾಪಿಸಲಾಯಿತು. ೧೯೪೦ರಲ್ಲಿ ಹೊರ ರೋಗಿಗಳ ಶುಶ್ರೂಷೆಗೆ ದೊಡ್ಡ ಆಸ್ಪತ್ರೆಯೊಂದನ್ನು ನಿರ್ಮಿಸಲಾಯಿತು. ೧೯೫೭ ರಲ್ಲಿ ಕುಷ್ಠರೋಗ ಹಾಗೂ ಕ್ಷಯ ರೋಗಿಗಳ ಆಸ್ಪತ್ರೆಯನ್ನು ತೆರೆಯಲಾಯಿತು. ೧೯೫೯ರಲ್ಲಿ ದಾದಿಯರ ತರಬೇತಿ ಶಾಲೆಯನ್ನು ಪ್ರಾರಂಭಿಸಲಾಯಿತು, ಆರೋಗ್ಯ ಹಾಗೂ ವೈದ್ಯಕೀಯ ಸೌಲಭ್ಯಗಳ ಅನೇಕ ಸೇವೆಗಳನ್ನು ಸಲ್ಲಿಸುತ್ತಾ ಬಂದಿರುವ ಈ ಸಂಸ್ಥೆ, ೧೯೭೧ ರಲ್ಲಿ ಶುಶ್ರೂಷೆ ನೀಡಿರುವ ರೋಗಿಗಳ ಸಂಖ್ಯೆಯನ್ನು ಕೋಷ್ಟಕ (೧೫.೨೯) ರಲ್ಲಿ ಗಮನಿಸಬಹುದು. ಸೈಂಟ್ ಜೋಸೆಪ್ಸ್‌ರವರ ಕುಷ್ಠ ರೋಗ ಆಸ್ಪತ್ರೆಯನ್ನು ೬೦ ರಲ್ಲಿ ಫಾದರ್ ಮುಲ್ಲರರು ಸ್ಥಾಪಿಸಿದರು. ಫಾದರ್ ಮುಲ್ಲರರು ಹೋಮಿಯೋಪತಿ ಔಷಧಿಗಳಿಂದ ಕುಷ್ಠರೋಗಿಗಳಿಗೆ ಶುಶ್ರೂಷೆಯನ್ನು ನೀಡಿದರು. ಬಳಿಕ ಅನೇಕ ವೈದ್ಯರು ಕುಷ್ಠ ರೋಗಿಗಳಿಗೆ ಚಿಕಿತ್ಸೆ ನೀಡಿ ಸಹಕರಿಸಿದರು. ಈ ಆಸ್ಪತ್ರೆಯಲ್ಲಿ ಶುಶ್ರೂಷೆ ನೀಡಿರುವ ಮಾಹಿತಿಯನ್ನು ಕೋಷ್ಟಕ ೧೫.೩೦ರಲ್ಲಿ ಗಮನಿಸಬಹುದು.

**ಕೋಷ್ಟಕ ೧೫.೨೭ : ಪುತ್ತೂರು ಸರ್ಕಾರಿ ಆಸ್ಪತ್ರೆಯಲ್ಲಿ ಶುಶ್ರೂಷೆ ನೀಡಿರುವ ರೋಗಿಗಳ ಸಂಖ್ಯೆ ಮತ್ತು ತಗುಲಿದ ವೆಚ್ಚ**

| ಶುಶ್ರೂಷೆ ನೀಡಿರುವ ರೋಗಿಗಳ ಸಂಖ್ಯೆ | ೧೯೬೯–೭೦ | ೧೯೭೦–೭೧ | ೧೯೭೧–೭೨ |
|---|---|---|---|
| ಒಳರೋಗಿಗಳು | ೨,೨೯೧ | ೨,೪೪೧ | ೨,೧೨೭ |
| ಹೊರ ರೋಗಿಗಳು | ೩೫,೮೧೩ | ೪೦,೬೮೫ | ೩೯,೦೪೭ |
| ವೆಚ್ಚ ರೂ.ಗಳಲ್ಲಿ | ೧,೪೨,೭೯ | ೧,೫೮,೮೨೦ | ೧,೪೮,೯೧೪ |

**ಕೋಷ್ಟಕ ೧೫.೨೮ : ಬಂಟ್ವಾಳ ಸರ್ಕಾರಿ ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆದಿರುವ ರೋಗಿಗಳ ಸಂಖ್ಯೆ (೧೯೬೯–೭೨)**

| ವರ್ಷ | ಶುಶ್ರೂಷೆ ಪಡೆದ ಒಳರೋಗಿಗಳ ಸಂಖ್ಯೆ | ಶುಶ್ರೂಷೆ ಪಡೆದ ಹೊರರೋಗಿಗಳ ಸಂಖ್ಯೆ | ವೆಚ್ಚ ರೂಗಳಲ್ಲಿ |
|---|---|---|---|
| ೧೯೬೯–೭೦ | ೫೬೬ | ೪೬,೫೨೧ | ಲಭ್ಯವಿಲ್ಲ |
| ೧೯೭೦–೭೧ | ೬೬೦ | ೫೧,೨೩೭ | ೧೦,೬೬೩ |
| ೧೯೭೧–೭೨ | ೬೪೪ | ೬೮,೩೯೧ | ೧,೨೪,೧೮೧ |

**ಕೋಷ್ಟಕ ೧೫.೨೯ : ಫಾದರ್ ಮುಲ್ಲರ್ ಚಾರಿಟಬಲ್ ಸಂಸ್ಥೆಯು ಶುಶ್ರೂಷೆ ನೀಡಿರುವ ಪ್ರಮಾಣ (೧೯೬೯–೭೧)**

| ವರ್ಷ | ಒಳರೋಗಿಗಳ ಸಂಖ್ಯೆ | ಹೊರರೋಗಿಗಳ ಸಂಖ್ಯೆ | ವೆಚ್ಚ ರೂ.ಗಳಲ್ಲಿ |
|---|---|---|---|
| **೧೯೬೯** | **೧೨೪೧೪** | **೨೫೮೬೩** | **೨೧೬೦೭೫೩** |
| **೧೯೭೦** | **೧೧೬೬೩** | **೨೦೭೮೨** | **೨೩೭೮೭೭೪** |
| **೧೯೭೧** | **೧೧೧೫೩** | **೨೯೫೪೪** | **೨೯೧೫೦೬೪** |

**ಕೊಷ್ಟಕ ೧೫.೩೦ : ಸೈಂಟ್ ಜೋಸೆಫ್ ರವರ ಕುಷ್ಠ ರೋಗ ಆಸ್ಪತ್ರೆಯಲ್ಲಿ ನೀಡಿರುವ ಚಿಕಿತ್ಸೆಯ ವಿವರ (೧೯೬೯–೭೧)**

| ವರ್ಷ | ಶುಶ್ರೂಷೆ ಪಡೆದ ಒಳರೋಗಿಗಳ ಸಂಖ್ಯೆ | ಶುಶ್ರೂಷೆ ಪಡೆದ ಹೊರರೋಗಿಗಳ ಸಂಖ್ಯೆ | ವೆಚ್ಚ ರೂಗಳಲ್ಲಿ |
|---|---|---|---|
| ೧೯೬೯ | ೪೭೮ | ೭,೫೪೬ | ೧,೮೯,೦೯೭ |
| ೧೯೭೦ | ೪೯೭ | ೯,೭೯೧ | ೧,೮೩,೬೭೮ |
| ೧೯೭೧ | ೫೦೯ | ೧೨,೯೩೧ | ೨,೮೭,೩೩೯ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ.

## ಜಿಲ್ಲಾ ಆರೋಗ್ಯ ಇಲಾಖೆ

ಆರೋಗ್ಯ ಇಲಾಖೆಯು ಆಡಳಿತಾತ್ಮಕವಾಗಿ ಮಾರ್ಪಾಡು ಹೊಂದಿದೆ. ಎಂಬತ್ತರ ದಶಕದ ಕೊನೆಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿತು. ಇದು ಆರೋಗ್ಯ ಮತ್ತು ವೈದ್ಯಕೀಯ ಚಟುವಟಿಕೆಗಳ ಜವಾಬ್ದಾರಿಯನ್ನು ಹೊಂದಿದ್ದು ಇತ್ತೀಚಿಗಿನ ವರ್ಷಗಳಲ್ಲಿ ಜಿಲ್ಲಾ ಪಂಚಾಯತ್ ಈ ಇಲಾಖೆಗೆ ಮಂಜೂರು ಮಾಡಿರುವ ಅನುದಾನಗಳನ್ನು ವಿವಿಧ ಕೋಷ್ಟಕಗಳಲ್ಲಿ ಗಮನಿಸಬಹುದು. ಈ ಇಲಾಖೆಯು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವೂ ಸೇರಿದಂತೆ, ಆರೋಗ್ಯ ಶಿಕ್ಷಣವನ್ನು ನೀಡುತ್ತದೆ. ಕಾರ್ಕಳ, ಪುತ್ತೂರು ಮತ್ತು ಕುಂದಾಪುರಗಳಲ್ಲಿ ತಾಲೂಕು ಮಟ್ಟದ ಆಸ್ಪತ್ರೆಗಳಿದ್ದು ತಲಾ ೧೦೦,೮೫ ಮತ್ತು ೬೪ ಹಾಸಿಗೆಗಳನ್ನೊಳಗೊಂಡಿರುತ್ತವೆ. ಕಾರ್ಕಳ ಸಾರ್ವಜನಿಕ ಆಸ್ಪತ್ರೆಯಲ್ಲಿ ೧೦ ಹಾಸಿಗೆಗಳ ಕ್ಷಯರೋಗ ವಾರ್ಡನ್ನು ತೆರೆಯಲು ಆವರ್ತ ಹಾಗೂ ಅನಾವರ್ತ ವೆಚ್ಚದೊಂದಿಗೆ ಸಿಬ್ಬಂದಿ ಮಂಜೂರಾತಿ ದೊರೆತು, ಕಾರ್ಯನಿರ್ವಹಿಸುತ್ತಿದೆ. "ವಿಶ್ವ ಯೋಜನೆ" ಯಲ್ಲಿ ಕಾರ್ಕಳ ಮತ್ತು ಕುಂದಾಪುರ ಆಸ್ಪತ್ರೆಗಳ ವಿಸ್ತರಣೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕುಂದಾಪುರ ತಾಲೂಕು ಆಸ್ಪತ್ರೆಗೆ ಹೊರ ರೋಗಿ ವಿಭಾಗದ ಕಟ್ಟಡ, ಬೆಳ್ತಂಗಡಿ ಸಮುದಾಯ ಆರೋಗ್ಯ

ಕೇಂದ್ರದ ಕಟ್ಟಡ, ಸಮುದಾಯ ಆರೋಗ್ಯ ಕೇಂದ್ರ ಬಂಟ್ವಾಳದ ಹೊಸ ಕಟ್ಟಡದ ರಚನೆಯ ಕಾಮಗಾರಿ ಪೂರ್ಣಗೊಂಡಿದ್ದು ಆಸ್ಪತ್ರೆಗಳು ಹೊಸ ಕಟ್ಟಡಗಳಲ್ಲಿ ಕಾರ್ಯವೆಸಗುತ್ತಿವೆ. ಬಂಟ್ವಾಳ, ಸುಳ್ಯ ಹಾಗೂ ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರಗಳು ಈಗಾಗಲೇ ಕಾರ್ಯ ನಿರತವಾಗಿದ್ದು, ೯೩-೯೪ನೇ ಸಾಲಿನಲ್ಲಿ ಬ್ರಹ್ಮಾವರ, ಹೆಬ್ರಿ, ವಾಮಪದವು ಹಾಗೂ ಬೆಳ್ತಂಗಡಿಯ ಸಮುದಾಯ ಆರೋಗ್ಯ ಕೇಂದ್ರಗಳಿಗೆ ೩೦ ಹಾಸಿಗೆಗಳ ಮಂಜೂರಾತಿ, ಆವರ್ತ ಮತ್ತು ಅನಾವರ್ತ ವೆಚ್ಚ ಹಾಗೂ ಸಿಬ್ಬಂದಿಗಳಿಗೆ ಮಂಜೂರಾತಿ ದೊರೆತು ಕಾರ್ಯನಿರತವಾಗಿವೆ. ನಿಟ್ಟೆಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮಾರ್ಪಡಿಸಲು ಮಂಜೂರಾತಿ ದೊರಕಿದ್ದು ಹುದ್ದೆ ಮಂಜೂರಾತಿ ಮತ್ತು ಆವರ್ತ-ಅನಾವರ್ತ ವೆಚ್ಚಗಳಿಗೆ ಮಂಜೂರಾತಿ ಆದೇಶವನ್ನು ನಿರೀಕ್ಷಿಸಲಾಗಿದೆ. ಈವರೆಗೆ ೧೦೬ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿ ಕಾರ್ಯವೆಸಗುತ್ತಿವೆ. ೯೩-೯೪ನೇ ಸಾಲಿಗೆ ೬ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾತಿ ದೊರಕಿ ಹುದ್ದೆ ಹಾಗೂ ಅವರ್ತನ, ಅನಾವರ್ತನ ವೆಚ್ಚಗಳಿಗೆ ಮಂಜೂರಾತಿ ಹೊಂದಿ ಕೆಳಕಂಡ ಸ್ಥಳಗಳಲ್ಲಿ ಸದ್ರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯಾಚರಣೆಗೆ ಸಜ್ಜಾಗುತ್ತಿವೆ. ಮಂಗಳೂರು ತಾಲೂಕು : ೧) ಅಡ್ಯಾರು, ಕಾರ್ಕಳ ತಾಲೂಕು : ೧)ಪಳ್ಳಿಗ್ರಾಮ , ೨) ನೆಲ್ಲಿಕಾರು , ೩) ಹಿರ್ಗಾನ , ಉಡುಪಿ ತಾಲೂಕು : ೧) ಹಂಗಾರ ಕಟ್ಟೆ , ಕುಂದಾಪುರ ತಾಲೂಕು : ೧) ಆಲೂರು.

ಈಗಾಗಲೇ ಆರು ಆಯುರ್ವೇದ ಔಷಧಾಲಯಗಳು ಕಾರ್ಯವೆಸಗುತ್ತಿದ್ದು. ೧೯೯೩-೯೪ ನೇ ಸಾಲಿನಲ್ಲಿ ಮಂಗಳೂರು ತಾಲೂಕು ಮುಲ್ಕಿ ಸಮೀಪದ ಕಿಲ್ಪಾಡಿ ಎಂಬಲ್ಲಿ ಹೊಸ ಆಯುರ್ವೇದ ಔಷಧಾಲಯಕ್ಕೆ ಮಂಜೂರಾತಿ ದೊರಕಿದೆ. ಮಂಗಳೂರು ತಾಲೂಕಿನ ಜೋಕಟ್ಟೆಯ ಆಯುರ್ವೇದ ಔಷಧಾಲಯವನ್ನು ೧೦ ಹಾಸಿಗೆಗಳ ಆಯುರ್ವೇದ ಆಸ್ಪತ್ರೆಯನ್ನಾಗಿ ಬದಲಾಯಿಸಲಾಗಿದೆ. ನಾಡ ಮತ್ತು ಕುಂಭಾಶಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೧೬ ಹಾಸಿಗೆಗಳ ಪ್ರಸೂತಿ ಗೃಹಗಳಾಗಿ ಪೂರ್ಣ ಕಟ್ಟಡದೊಂದಿಗೆ ಕಾರ್ಯವೆಸಗುತ್ತಿವೆ. ಈವರೆಗೆ ಮೂರು ಆನೆಕಾಲು ನಿವಾರಣಾ ಚಿಕಿತ್ಸಾ ಕೇಂದ್ರಗಳಾದ ಮಂಗಳೂರು ತಾಲೂಕಿನ ಮಂಗಳೂರು, ಉಳ್ಳಾಲ, ಉಡುಪಿ ತಾಲೂಕಿನ ಮಲ್ಪೆ ಎಂಬಲ್ಲಿ ಚಿಕಿತ್ಸಾ ಘಟಕವು ಕಾರ್ಯವೆಸಗುತ್ತಿದ್ದು ೧೯೯೩-೯೪ ನೇ ಸಾಲಿನಲ್ಲಿ ಹೊಸತಾಗಿ ಕುಂದಾಪುರ ತಾಲೂಕಿಗೆ ಒಂದು ಹೊಸ ಘಟಕ ಮಂಜೂರಾತಿ ದೊರಕಿದ್ದು ಹುದ್ದೆ ಆವರ್ತನ, ಅನಾವರ್ತ ವೆಚ್ಚಕ್ಕೂ ಮಂಜೂರಾತಿ ದೊರೆತಿದೆ. ಅಂಧತ್ವ ನಿವಾರಣಾ ಕಾರ್ಯಕ್ರಮದಡಿ ಈಗಾಗಲೇ ೧೬ ಚಿಕಿತ್ಸಾ ಘಟಕಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೇ ಕಾರ್ಯವೆಸಗುತ್ತಿದ್ದು ೯೩-೯೪ ನೇ ಸಾಲಿನಲ್ಲಿ ಉಡುಪಿ ತಾಲೂಕಿನ ಬಾರ್ಕೂರು ಮತ್ತು ಮಂಗಳೂರು ತಾಲೂಕಿನ ಗಂಜಿಮಠ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಲಾ ಒಂದೊಂದು ಅಂಧತ್ವ ನಿವಾರಣಾ ಘಟಕಗಳು ಮಂಜೂರಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ೭೩೮ ಕಿರಿಯ ಆರೋಗ್ಯ ಸಹಾಯಕಿಯರ ಉಪಕೇಂದ್ರಗಳು ಕಾರ್ಯವೆಸಗುತ್ತಿದ್ದು ೯೩-೯೪ನೇ ಸಾಲಿನಲ್ಲಿ ಕನಿಷ್ಠ ಅವಶ್ಯಕತೆ ಕಾರ್ಯಕ್ರಮದಡಿ ೧೨ ಕಿರಿಯ ಆರೋಗ್ಯ ಸಹಾಯಕಿಯರ ಉಪಕೇಂದ್ರಗಳಿಗೆ ರೂ.೩.೦೦ ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಜಿಲ್ಲೆಯಲ್ಲಿ ಐದು ಆಂಬ್ಯುಲೆನ್ಸ್ ವಾಹನಗಳು ಕಾರ್ಯನಿರ್ವಹಿಸುತ್ತಿದ್ದು ೯೩-೯೪ ನೇ ಸಾಲಿಗೆ ಬೆಳ್ತಂಗಡಿ ಮತ್ತು ಸುಳ್ಯ ಸಮುದಾಯ ಆರೋಗ್ಯ ಕೇಂದ್ರಗಳಿಗೆ ತಲಾ ಒಂದೊಂದು ಆಂಬ್ಯುಲೆನ್ಸ್ ವಾಹನವನ್ನು ಒದಗಿಸಲು ಯೋಜಿಸಲಾಗಿದೆ. ತಲಾ ಒಂದೊಂದು ಜೀಪುಗಳನ್ನು ಸುಳ್ಯ, ಪೆರ್ಡೂರು ಹಾಗೂ ಬಂಟ್ವಾಳ ಗಿರಿಜನ ಸಂಚಾರಿ ಆರೋಗ್ಯ ಘಟಕಗಳಿಗೆ ಒದಗಿಸಲಾಗಿದೆ. ೧೯೯೩-೯೪ ನೇ ಸಾಲಿನಲ್ಲಿ ಒಟ್ಟು ೧೭೨೮೪ ಒಳರೋಗಿ ಹಾಗೂ ೧೬,೨೫,೮೫೮ ಹೊರರೋಗಿಗಳಿಗೆ ಸೇವೆ ನೀಡಲಾಗಿದೆ. ಇಲಾಖೆಯಲ್ಲಿ ನಾಲ್ವರು ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಮೂರು ಉಪವಿಭಾಗಗಳಲ್ಲಿ ತಲಾ ಒಬ್ಬ ಸಹಾಯಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿರುವರು. ಈ ಇಲಾಖೆಯ ಅಧೀನ ಸಂಸ್ಥೆಗಳಲ್ಲಿ ೨೨೦ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು ೭೦ ಹುದ್ದೆಗಳು ಖಾಲಿ ಇರುತ್ತವೆ. ೧೪೬೭ ಪಾರಾ ಮೆಡಿಕಲ್ ಹುದ್ದೆಗಳಲ್ಲಿ ೫೦೭ ಖಾಲಿ ಇರುತ್ತವೆ. ೨೦೬ ಲಿಪಿಕ ಸಿಬ್ಬಂದಿಗಳಲ್ಲಿ ೮೭ ಖಾಲಿ ಇರುತ್ತವೆ. ಹುದ್ದೆಗಳನ್ನು ತುಂಬುವ ಬಗ್ಗೆ ಸರಕಾರಕ್ಕೆ ಪತ್ರ ಬರೆಯಲಾಗಿದೆ. ಜಿಲ್ಲೆಯಲ್ಲಿ ೧೦೬ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ ೮೫ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡಗಳಿದ್ದು, ಸುಬ್ರಹ್ಮಣ್ಯ, ಕಟೀಲು ಹಾಗೂ ಧರ್ಮಸ್ಥಳಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದೇವಸ್ಥಾನದ ವತಿಯಿಂದ ನೀಡಲಾದ ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೊಳಲಗಿರಿ ಮತ್ತು ಸಜಿಪನಡು ಎಂಬಲ್ಲಿನ ಆಸ್ಪತ್ರೆಗಳು ಬಾಡಿಗೆ ಕಟ್ಟಡಗಳಲ್ಲಿವೆ. ಈ ಪೈಕಿ ಸುಬ್ರಹ್ಮಣ್ಯ, ಕಟೀಲು ಮತ್ತು ಕೊಳಲಗಿರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗಾಗಿ ೧೯೯೧-೯೨ನೇ ಸಾಲಿನಲ್ಲಿ ಜಮೀನನ್ನು ಪಡೆದು ಅಂದಾಜು ಪಟ್ಟಿಯ ೧/೩ ಅನುದಾನದಿಂದ ಕಟ್ಟಡ ಕಾಮಗಾರಿಗಳು ಕೊನೆಯ ಹಂತದಲ್ಲಿವೆ. ಸರ್ವೆ, ಕೆದೂರು , ನಾವೂರು ಹಾಗೂ ಪಾಲಡ್ಕಗಳಲ್ಲಿನ ಆಸ್ಪತ್ರೆ ಕಟ್ಟಡಕ್ಕೆ ಜಮೀನು ಒದಗಿದ್ದು, ಕಟ್ಟಡದ ಕಾಮಗಾರಿಗಳು ಪ್ರಗತಿಯಲ್ಲಿವೆ. ಧರ್ಮಸ್ಥಳದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಬಗ್ಗೆ ಜಮೀನು ಖರೀದಿಸಲು ರೂ.೧,೬೪,೦೦೦ ಅನ್ನು ಕಂದಾಯ ಇಲಾಖೆಗೆ

ಪಾವತಿ ಮಾಡಲಾಗಿದೆ. ೧೯೯೩–೯೪ನೇ ಸಾಲಿನಲ್ಲಿ ೭ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡದ ಕಾಮಗಾರಿಗಳು ಪೂರ್ಣಗೊಂಡು ೧೭ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳ ಕಾಮಗಾರಿಯು ಪ್ರಗತಿಯಲ್ಲಿದೆ. ಬಂಟ್ವಾಳ ಸಮುದಾಯ ಆರೋಗ್ಯ ಕೇಂದ್ರದ ಹೊಸ ಕಟ್ಟಡದ ಕಾಮಗಾರಿಯು ೧೯೯೩–೯೪ನೇ ಸಾಲಿನಲ್ಲಿ ಪೂರ್ಣಗೊಂಡು ಕಾರ್ಯನಿರ್ವಹಿಸುತ್ತಿವೆ. ಶ್ರೀ ಕ್ಷೇತ್ರ ಧರ್ಮಸ್ಥಳದವರು ಆರೋಗ್ಯ ಇಲಾಖೆಗೆ ೧೯೯೩–೯೪ ನೇ ಸಾಲಿನವರೆಗೆ ರೂ.೧೧.೦೦ ಲಕ್ಷ ಅನುದಾನವನ್ನು ಉಪ ಕೇಂದ್ರಗಳ ಕಟ್ಟಡಗಳ ರಚನೆಗಾಗಿ ನೀಡಿದ್ದು ಅಂತಹ ೧೨ ಉಪಕೇಂದ್ರಗಳ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ೯೪–೯೫ನೇ ಸಾಲಿನಲ್ಲಿ ಆರೋಗ್ಯ ಸಂಸ್ಥೆಗಳ ಕಟ್ಟಡಗಳ ಹೊಸ ದುರಸ್ತಿ ಕಾಮಗಾರಿಗಳಿಗಾಗಿ ಮತ್ತು ಹೊಸ ಕಟ್ಟಡಗಳ ಕಾಮಗಾರಿ ಬಗ್ಗೆ ಒಟ್ಟು ರೂ.೬೫.೦೦ ಲಕ್ಷವನ್ನು ಒದಗಿಸಲಾಗಿದೆ. ೧೯೯೩–೯೪ನೇ ಸಾಲಿನಲ್ಲಿ ಆರೋಗ್ಯ ಇಲಾಖಾ ಸಿಬ್ಬಂದಿ ವೇತನ ವೆಚ್ಚಕ್ಕಾಗಿ ರೂ.೫,೫೭,೦೪,೭೮೩–೦೦ನ್ನು, ರೂ.೨೬,೨೫,೦೦೦–೦೦ ಕಚೇರಿ ಸಾದಿಲ್ವಾರು ವೆಚ್ಚಗಳಿಗೆ, ಸಂಸ್ಥೆಗಳಿಗೆ ಪೀಠೋಪಕರಣಗಳನ್ನು ಒದಗಿಸಲು ರೂ. ೯,೯೫,೦೦೦–೦೦ನ್ನು, ಔಷಧ ಸರಬರಾಜಿಗೆ ರೂ. ೨೫,೦೩,೧೪೭–೦೦ನ್ನು, ಪರಿಹಾರ ಸಂಸ್ಥೆಗಳಲ್ಲಿ ಪರಿಹಾರಕ್ಕಾಗಿ ರೂ.೧೬,೫೫,೦೦೦–೦೦ವನ್ನು, ಹಾಗೂ ಲಿನನ್ ಮತ್ತು ಬೆಡ್ಡಿಂಗ್‌ಗಾಗಿ ರೂ. ೩,೧೯,೦೦೦–೦೦ ವನ್ನೂ ವೆಚ್ಚ ಮಾಡಲಾಗಿದೆ.

**ಕೋಷ್ಟಕ ೧೫.೩೧ : ಆರೋಗ್ಯ ಚಟುವಟಿಕೆಗಳಿಗೆ ಜಿಲ್ಲಾ ಪಂಚಾಯತ್ ನೀಡಿದ್ದ ಅನುದಾನಗಳ ವಿವರ**

| ಕ್ರಮ ಸಂಖ್ಯೆ | | ವರ್ಷಗಳು | | | | | |
|---|---|---|---|---|---|---|---|
| | | ೧೯೯೩–೯೪ | ೧೯೯೪–೯೫ | ೧೯೯೫–೯೬ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ |
| ೧. | ವೈದ್ಯಕೀಯ ಮತ್ತು ಜನಾರೋಗ್ಯ | ೨೧೧.೭೫ | ೨೮೮.೧೦ | ೨೦೩.೦ | ೨೩೯.೫೦ | ೯೦.೫೦ | ೯೬.೮೦ |
| ೨. | ಭಾರತೀಯ ವೈದ್ಯ ಪದ್ಧತಿ | ೭.೦೦ | ೧೦.೦೦ | ೧೩.೦ | ೧೫.೦೦ | ೧೧.೩೪ | ೧೬.೯೮ |
| ೩. | ಕುಟುಂಬ ಕಲ್ಯಾಣ | ೨೩೨.೩೩ | ೨೭೫.೭೮ | ೩೧೭.೬೮ | ೪೫೧.೫೦ | ೩೫೨.೮೦ | ೩೧೦.೧೦ |

| | | |
|---|---|---|
| ೧. | ಕುಟುಂಬ ಕಲ್ಯಾಣ | ೨,೧೭,೪೩,೪೮೧.೦೦ |
| ೨. | ಚುಚ್ಚುಮದ್ದು | ೩,೩೦,೪೬೧.೦೦ |
| ೩. | ಕ್ಷಯರೋಗ | ೭,೬೨,೯೪೭.೦೦ |
| ೪. | ಕುಷ್ಠರೋಗ | ೨೬,೮೩,೨೨೭.೦೦ |
| ೫. | ಮಲೇರಿಯಾ | ೩೫,೮೮,೬೫೪.೦೦ |
| ೬. | ಶುಶ್ರೂಷಾ ಕಾರ್ಯಕ್ರಮ | ೧,೧೯,೩೯೪.೦೦ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ ಮಂಗಳೂರು.

೧೯೯೩–೯೪ ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಭೌತಿಕ ಗುರಿ ಹಾಗೂ ಸಾಧನೆಯ ವಿವರಗಳನ್ನು ಅನುಬಂಧ ೧ರಲ್ಲಿ ಲಗತ್ತಿಸಲಾಗಿದೆ. ೧೯೯೦–೯೧ ರಲ್ಲಿ ೧೫೨ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿತ್ತು. ರೋಗ ನಿವಾರಕ ಚುಚ್ಚು ಮದ್ದುಗಳನ್ನು ೧೯೯೦–೯೧ ರಲ್ಲಿ ಈ ಕೆಳಗಿನಂತೆ ನೀಡಲಾಗಿತ್ತು. ಡಿ.ಪಿ.ಟಿ ೭೦,೦೦೦, ಪೋಲಿಯೋ ೭೦,೦೦೦, ಬಿ.ಸಿ.ಜಿ ೮೧,೦೦೦, ದಡಾರ ೫೬,೦೦೦ ಹಾಗೂ ಟಿಟಿ (ಗರ್ಭಿಣಿಯರಿಗೆ) ೭೪,೦೦೦ ಚುಚ್ಚುಮದ್ದುಗಳನ್ನು ನೀಡಲಾಗಿತ್ತು.

**ಕೋಷ್ಟಕ ೧೫.೩.೨: ೧೯೯೩–೯೪ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಾಧನೆಯ ವಿವರಗಳು**

| | ಕಾರ್ಯಕ್ರಮ | ಗುರಿ | ಸಾಧನೆ | ಶೇಕಡಾ ಸಾಧನೆ |
|---|---|---|---|---|
| **ರೋಗ ನಿರೋಧಕ ಚುಚ್ಚು ಮದ್ದುಗಳ ಲಸಿಕಾ ಕಾರ್ಯಕ್ರಮ** | | | | |
| ೧. | ಡಿ.ಪಿ.ಟಿ | ೫೯೦೦೦ | ೫೯೨೮೪ | ೧೦೦.೫ |
| ೨. | ಪೋಲಿಯೋ | ೫೯೦೦೦ | ೫೯೬೦೧ | ೨೦೧.೦೦ |
| ೩. | ಬಿ.ಸಿ.ಜಿ | ೫೮೦೦೦ | ೬೯೮೦೪ | ೧೧೮.೪ |
| ೪. | ದಢಾರ | ೫೯೦೦೦ | ೫೩೩೧೫ | ೯೦.೪ |
| ೫. | ಟಿ.ಟಿ.(ಗರ್ಭಿಣಿಯರು) | ೬೬೩೦೦ | ೬೦೬೭೪ | ೯೧.೫ |
| **ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ** | | | | |
| ೬. | ಗ್ರಾಮೀಣ ನೈರ್ಮಲ್ಯ ಶೌಚಾಲಯಗಳು | ೩೧೯ | ೯೩೩ | ೩೦೧.೦೦ |
| ೭. | ಕುಷ್ಠರೋಗ ಪತ್ತೆ ಹಚ್ಚುವಿಕೆ | ೫೦೦ | ೬೫೩ | ೧೩೦.೬ |
| ೮. | ಕುಷ್ಠರೋಗ ಗುಣಪಡಿಸುವಿಕೆ | ೧೮೦೦ | ೮೭೦ | ೪೮.೩ |
| **ಕ್ಷಯರೋಗ ನಿವಾರಣಾ ಕಾರ್ಯಕ್ರಮ** | | | | |
| ೯. | ಕ್ಷಯರೋಗ ಪತ್ತೆಹಚ್ಚುವಿಕೆ | ೫೧೧೮ | ೩೭೭೩ | ೭೩.೭ |
| ೧೦. | ಕ್ಷಯರೋಗಿಗಳ ಕಫ ಪರೀಕ್ಷೆಗಳು | ೧೧೧೧೩ | ೧೧೬೧೬ | ೧೦೪.೫ |
| ೧೧. | ಅಂಧತ್ವ (ಕ್ಯಾಟರಾಕ್ಟ್) ಆಪರೇಶನ್ | ೮೨೦೦ | ೩೪೮೯ | ೪೨.೫ |
| **ಮಲೇರಿಯಾ ನಿರ್ಮೂಲನ ಕಾರ್ಯಕ್ರಮ** | | | | |
| ೧೨. | ರಕ್ತ ಲೇಪನ ಸಂಗ್ರಹಣೆ | ೩೨೩೦೪೦ | ೩೩೮೪೩೯ | ೧೦೪.೮ |
| **ರಾಷ್ಟ್ರೀಯ ಕಾರ್ಯಕ್ರಮ** | | | | |
| ೧೩. | ಸಂತಾನ ಹರಣ ಶಸ್ತ ಚಿಕಿತ್ಸೆ | ೧೭೦೦೦ | ೧೭೭೫೫ | ೧೦೪.೪ |
| ೧೪. | ವಂಕಿ ಅಳವಡಿಸುವಿಕೆ | ೧೫೭೦೦ | ೧೩೦೯೨ | ೮೩.೪ |
| ೧೫. | ನಿರೋಧ್ ವಿತರಣೆ | ೨೩೧೦೦ | ೧೭೦೯೪ | ೭೪.೦೦ |
| ೧೬. | ನುಂಗುವ ಮಾತ್ರೆಗಳು | ೬೪೦೦ | ೫೧೯೨ | ೫೯.೦೦ |

೧೯೯೪–೯೫ ನೇ ಸಾಲಿನಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮಗಳ ಆರ್ಥಿಕ ಪ್ರಗತಿ ಈ ಕೆಳಗಿನಂತಿದೆ.

| ಕಾರ್ಯಕ್ರಮಗಳು | ಆರ್ಥಿಕ ಪ್ರಗತಿ |
|---|---|
| ೧. ಕುಟುಂಬ ಕಲ್ಯಾಣ (ಸಿಬ್ಬಂದಿ ವೆಚ್ಚ ಸಮೇತ) | ೨೫೫೮೦೦೦೦–೦೦ |
| ೨. ಚುಚ್ಚುಮದ್ದು | ೬೦೦೦೦೦–೦೦ |
| ೩. ಕ್ಷಯಾರೋಗ | ೬೪೯೫೦–೦೦ |
| ೪. ಕುಷ್ಠರೋಗ | ೨೧೧೫೦೦೦–೦೦ |
| ೫. ಮಲೇರಿಯಾ | ೪೧೦೦೦೦೦–೦೦ |
| ೬. ಶುಶ್ರೂಷಾ ಕಾರ್ಯಕ್ರಮ | ೧೫೦೦೦೦–೦೦ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು

**ಕೋಷ್ಟಕ ೧೫.೩೩: ೧೯೯೪–೯೫ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಾಧನೆಯ ವಿವರಗಳು**

| | ಕಾರ್ಯಕ್ರಮ | ಗುರಿ | ಸಾಧನೆ | ಶೇಕಡಾ ಸಾಧನೆ |
|---|---|---|---|---|
| **ರೋಗ ನಿರೋಧಕ ಚುಚ್ಚುಮದ್ದುಗಳ** | | | | |
| **ಲಸಿಕಾ ಕಾರ್ಯಕ್ರಮ** | | | | |
| ೧. | ಡಿ.ಪಿ.ಟಿ | ೬೦೦೦೦ | ೫೭೯೧೧ | ೯೬.೫ |
| ೨. | ಪೋಲಿಯೊ | ೬೦೦೦೦ | ೫೭೯೨೦ | ೯೬.೫ |
| ೩. | ಬಿ.ಸಿ.ಜಿ | ೬೦೦೦೦ | ೬೭೦೪೩ | ೧೧೧.೭ |
| ೪. | ದಢಾರ | ೬೦೦೦೦ | ೫೨೩೮೭ | ೮೭.೩ |
| ೫. | ಟಿ.ಟಿ.(ಗರ್ಭಿಣಿಯರು) | ೬೭೫೦೦ | ೫೭೩೩೧ | ೮೪.೯ |
| **ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ** | | | | |
| ೬ | ಗ್ರಾಮೀಣ ನೈರ್ಮಲ್ಯ ಶೌಚಾಲಯಗಳು | ೩೦೯ | ೧೧೧೫ | ೩೬೮.೪ |
| **ಕುಷ್ಠರೋಗ ನಿವಾರಣಾ ಕಾರ್ಯಕ್ರಮ** | | | | |
| ೭. | ಕುಷ್ಠರೋಗ ಪತ್ತೆ ಹಚ್ಚುವಿಕೆ | ೫೦೦ | ೫೩೨ | ೧೦೬.೪ |
| ೮. | ಕುಷ್ಠರೋಗ ಗುಣಪಡಿಸುವಿಕೆ | ೧೮೦೦ | ೬೫೩ | ೩೬.೨ |
| **ಕ್ಷಯರೋಗ ನಿವಾರಣಾ ಕಾರ್ಯಕ್ರಮ** | | | | |
| ೯. | ಕ್ಷಯರೋಗ ಪತ್ತೆ ಹಚ್ಚುವಿಕೆ | ೫೧೧೮ | ೩೮೨೧ | ೭೪.೬ |
| ೧೦. | ಕ್ಷಯರೋಗ ಕಫ ಪರೀಕ್ಷೆಗಳು | ೧೧೧೧೨ | ೮೮೦೨ | ೭೯.೨ |
| ೧೧. | ಅಂಧತ್ವ (ಕ್ಯಾಟರಾಕ್ಟ್) ಆಪರೇಶನ್ | ೬೨೦೦ | ೫೭೬೫ | ೯೨.೯ |
| ೯. | ಕ್ಷಯರೋಗಿಗಳ ಕಫ ಪರೀಕ್ಷೆಗಳು | ೨೬೯೯೫ | ೧೧೪೮೬ | ೪೨.೫ |
| ೧೦. | ಅಂಧತ್ವ (ಕ್ಯಾಟರಾಕ್ಟ್) ಆಪರೇಶನ್ | ೧೦೦೦೦ | ೯೮೯೬ | ೯೮.೯ |
| **ಮಲೇರಿಯಾ ನಿರ್ಮೂಲನ ಕಾರ್ಯಕ್ರಮ** | | | | |
| ೧೧. | ರಕ್ತ ಲೇಪನ ಸಂಗ್ರಹಣೆ | ೩೮೭೩೮೪ | ೨೨೬೩೭೨ | ೫೮.೪ |
| **ರಾಷ್ಟ್ರೀಯ ಕಾರ್ಯಕ್ರಮ** | | | | |
| ೩. | ಸಂತಾನ ಹರಣ ಶಸ್ತ್ರ ಚಿಕಿತ್ಸೆ | ೯೬೪೨ | ೭೩೯೭ | ೭೬.೭ |
| ೧೪. | ವಂಕಿ ಅಳವಡಿಸುವಿಕೆ | ೮೬೩೬ | ೮೮೬೬ | ೧೦೨.೬ |
| ೧೫. | ನಿರೋಧ ಬಳಕೆದಾರರು (ಗುರಿ ರಹಿತ) | – | ೭೨೯೨೯೪ | – |
| ೧೬. | ನುಂಗುವ ಮಾತ್ರೆಗಳು | ೪೭೯೪ | ೫೭೭೨೫ | ೯೨.೬ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೩೪ : ೧೯೯೫-೯೬ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಾಧನೆಯ ವಿವರಗಳು**

| | ಕಾರ್ಯಕ್ರಮ | ಗುರಿ | ಸಾಧನೆ | ಶೇಕಡಾ ಸಾಧನೆ |
|---|---|---|---|---|
| **ರೋಗ ನಿರೋಧಕ ಚುಚ್ಚುಮದ್ದುಗಳ** | | | | |
| **ಲಸಿಕಾ ಕಾರ್ಯಕ್ರಮ** | | | | |
| ೧. | ಡಿ.ಪಿ.ಟಿ | ೫೮೫೦೦ | ೫೮೭೫೯ | ೧೦೦.೦ |
| ೨. | ಪೋಲಿಯೋ | ೫೮೫೦೦ | ೫೮೭೫೯ | ೧೦೦.೦೦ |
| ೩. | ಬಿ.ಸಿ.ಜಿ | ೫೮೫೦೦ | ೬೯೩೦೦ | ೧೧೮.೦ |
| ೪. | ದಢಾರ | ೫೮೫೦೦ | ೫೨೪೦೭ | ೯೦.೦ |
| ೫. | ಟಿ.ಟಿ.(ಗರ್ಭಿಣಿಯರು) | ೬೪೦೦೦ | ೬೦೩೩೪ | ೯೪.೦ |
| **ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ** | | | | |
| ೬. | ಗ್ರಾಮೀಣ ನೈರ್ಮಲ್ಯ ಶೌಚಾಲಯಗಳು | ೩೨೦ | ೪೬೯ | ೧೪೬.೫ |
| ೭. | ಕುಷ್ಠರೋಗ ಗುಣಪಡಿಸುವಿಕೆ | ೯೦೦ | ೫೪೨ | ೬೦.೨ |
| **ಕ್ಷಯರೋಗ ನಿವಾರಣಾ ಕಾರ್ಯಕ್ರಮ** | | | | |
| ೯. | ಕ್ಷಯರೋಗ ಪತ್ತೆಹಚ್ಚುವಿಕೆ | ೫೯೨೬ | ೩೭೩೭ | ೬೩.೦ |
| ೧೦. | ಕ್ಷಯರೋಗಿಗಳ ಕಫ ಪರೀಕ್ಷೆಗಳು | ೧೧೮೫ | ೮೧೧೩೯೬ | ೯೬.೧ |
| ೧೧. | ಅಂಧತ್ವ (ಕ್ಯಾಟರಾಕ್ಟ್) ಆಪರೇಶನ್ | ೮೪೦೦ | ೮೧೩೫ | ೯೬.೮ |
| **ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ** | | | | |
| ೧೨. | ರಕ್ತ ಲೇಪನ ಸಂಗ್ರಹಣೆ | ೩೨೩೬೦೦ | ೪೪೨೯೪೯ | ೧೩೬.೮೦ |
| **ರಾಷ್ಟ್ರೀಯ ಕಾರ್ಯಕ್ರಮ** | | | | |
| ೧೩. | ಸಂತಾನ ಹರಣ ಶಸ್ತ್ರಚಿಕಿತ್ಸೆ | ೨೦೫೦೦ | ೧೭೪೮೧ | ೮೫.೨ |
| ೧೪. | ವಂಕಿ ಅಳವಡಿಸುವಿಕೆ | ೨೧೦೦೦ | ೧೬೬೨೫ | ೮೫.೦ |
| ೧೫. | ನಿರೋಧ | ೨೦೩೧೭ | – | |
| ೧೬. | ನುಂಗುವ ಮಾತ್ರೆಗಳು | ೯೫೦೦ | ೭೦೪೫ | ೭೪.೧೫ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

೧೯೯೫–೯೬ ನೇ ಸಾಲಿನಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮಗಳ ಆರ್ಥಿಕ ಪ್ರಗತಿ ಈ ಕೆಳಗಿನಂತಿದೆ.

| ಕಾರ್ಯಕ್ರಮಗಳು | | ಆರ್ಥಿಕ ಪ್ರಗತಿ |
|---|---|---|
| ೧. | ಕುಟುಂಬ ಕಲ್ಯಾಣ (ಸಿಬ್ಬಂದಿ ವೆಚ್ಚ ಸಮೇತ) | ೨,೮೦,೦೬,೩೬೧.೦೦ |
| ೨. | ಚುಚ್ಚುಮದ್ದು | ೬,೨೦,೦೦೦.೦೦ |
| ೩. | ಕ್ಷಯರೋಗ | ೬೫,೪೦೩.೦೦ |

**ಕೋಷ್ಟಕ ೧೫.೩೫ : ೧೯೯೮–೯೯ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಾಧನೆಯ ವಿವರಗಳು**

| | ಕಾರ್ಯಕ್ರಮ | ಗುರಿ | ಸಾಧನೆ | ಶೇಕಡ ಸಾಧನೆ |
|---|---|---|---|---|
| **ರೋಗ ನಿರೋಧಕ ಚುಚ್ಚುಮದ್ದುಗಳ ಲಸಿಕಾ ಕಾರ್ಯಕ್ರಮ** | | | | |
| ೧. | ಡಿ.ಪಿ.ಟಿ | ೨೪೪೨೮ | ೨೪೦೮೧ | ೯೮.೫ |
| ೨. | ಪೋಲಿಯೋ | ೨೪೪೨೮ | ೨೪೦೮೧ | ೯೮.೫ |
| ೩. | ಬಿ.ಸಿ.ಜಿ | ೨೪೪೨೮ | ೨೩೧೫೩ | ೯೪.೭ |
| ೪. | ದಢಾರ | ೨೪೪೨೮ | ೨೨೩೫೨ | ೯೧.೫ |
| ೫. | ಟಿ.ಟಿ.(ಗರ್ಭಿಣಿಯರು) | ೨೬೮೬೮ | ೨೩೭೯೭ | ೮೬.೫ |
| **ಕುಷ್ಠರೋಗ ನಿವಾರಣಾ ಕಾರ್ಯಕ್ರಮ** | | | | |
| ೬. | ಕುಷ್ಠರೋಗ ಪತ್ತೆ ಹಚ್ಚುವಿಕೆ | ೨೧೦ | ೫೯೧ | ೨೮೧.೪ |
| ೭. | ಕುಷ್ಠರೋಗ ಗುಣಪಡಿಸುವಿಕೆ | ೬೯೦ | ೪೯೭ | ೭೨.೦ |
| **ಕ್ಷಯರೋಗ ನಿವಾರಣಾ ಕಾರ್ಯಕ್ರಮ** | | | | |
| ೯. | ಕ್ಷಯರೋಗ ಪತ್ತೆಹಚ್ಚುವಿಕೆ | ೨೫೨೪ | ೩೦೧೯ | ೧೧೯.೬ |
| ೧೦. | ಕ್ಷಯರೋಗಿಗಳ ಕಫ ಪರೀಕ್ಷೆಗಳು | ೨೬೯೫ | ೧೧೪೮೬ | ೪೨.೫ |
| ೧೧. | ಅಂಧತ್ವ (ಕ್ಯಾಟರಾಕ್ಟ್) ಆಪರೇಶನ್ | ೧೦೦೦೦ | ೯೮೯೬ | ೯೮.೯ |
| **ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ** | | | | |
| ೧೨. | ರಕ್ತ ಲೇಪನ ಸಂಗ್ರಹಣೆ | ೩೮೭೩೮೪ | ೨೨೬೩೭೨ | ೫೮.೪ |
| **ರಾಷ್ಟ್ರೀಯ ಕಾರ್ಯಕ್ರಮ** | | | | |
| ೧೩. | ಸಂತಾನ ಹರಣ ಶಸ್ತ್ರಚಿಕಿತ್ಸೆ | ೯೬೪೨ | ೭೩೯೭ | ೭೬.೭ |
| ೧೪. | ವಂಕಿ ಅಳವಡಿಸುವಿಕೆ | ೮೬೩೬ | ೮೮೬೬ | ೧೦೨.೬ |
| ೧೫. | ನಿರೋಧ್ ವಿತರಣೆ | – | ೭೨೯೨೯೪ | – |
| ೧೬. | ನುಂಗುವ ಮಾತ್ರೆಗಳು | ೪೭೯೪ | ೫೭೭೨೫ | ೯೨.೬ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೩೬ : ಆರೋಗ್ಯ ಇಲಾಖೆಯಿಂದ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ (೧೯೯೪–೯೫)**

| ಕ್ರಮ ಸಂ. | ಆರೋಗ್ಯ ಸಂಸ್ಥೆಯ ಹೆಸರು | ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ | | | | ಒಟ್ಟು ಸಂಖ್ಯೆ | | ದಿನ ಒಂದಕ್ಕೆ ಚಿಕಿತ್ಸೆ ಹೊಂದಿರುವ ಸರಾಸರಿ ಸಂಖ್ಯೆ | ಸಂಸ್ಥೆಯಲ್ಲಿ ಖರ್ಚಾದ ಒಟ್ಟು ಹಣ | | ಪ್ರತಿ ರೋಗಿಗೆ ಚಿಕಿತ್ಸೆ ವೆಚ್ಚ | |
|---|---|---|---|---|---|---|---|---|---|---|---|---|
| | | ಒಳರೋಗಿಗಳು | | ಹೊರರೋಗಿಗಳು | | | | | | | | |
| | | ಹಿಂದಿನ ವರ್ಷ | ವರದಿ ವರ್ಷ | ಹಿಂದಿನ ವರ್ಷ | ವರದಿ ವರ್ಷ | ಹಿಂದಿನ ವರ್ಷ | ವರದಿ ವರ್ಷ | | ವರದಿ ವರ್ಷ | ಹಿಂದಿನ ವರ್ಷ | ವರದಿ ವರ್ಷ | ಹಿಂದಿನ ವರ್ಷ |
| | | ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| ೧. | ಸ್ಥಳೀಯ ನಿಧಿಯ ಸಂಸ್ಥೆಗಳು | – | – | – | – | – | ಇಲ್ಲ | – | – | – | – | – |
| ೨. | ಸ್ವದೇಶಿ ವೈದ್ಯಕೀಯ ಸಂಸ್ಥೆ. | – | – | – | – | ಲಭ್ಯವಿಲ್ಲ | ಲಭ್ಯವಿಲ್ಲ | – | ೧೪೮೩೦೪೩ | ೭೮೪೦೦೪ | – | – |
| ೩. | ಇತರ ವೈದ್ಯಕೀಯ ಸಂಸ್ಥೆಗಳು | ೧೭೨೮೪ | ೧೭೪೩೬ | ೧೬೨೫೮೫೮ | ೧೬೯೪೪೬೬ | ೧೬೪೩೧೪೨ | ೧೭೧೧೯೦೨ | ೪೬೯೦ | ೭೨೩೦೦೫೩೭ | ೭೧೦೦೯೫೭೩ | ೪೨.೦೦ | ೪೩.೦೦ |
| | ಒಟ್ಟು | ೧೭೨೮೪ | ೧೭೪೩೬ | ೧೬೨೫೮೫೮ | ೧೬೯೪೪೬೬ | ೧೬೪೩೧೪೨ | ೧೭೧೧೯೦೨ | ೪೬೯೦ | ೭೩೭೮೩೫೮೦ | ೭೧೭೯೩೫೭೭ | ೪೨.೦೦ | ೪೩.೦೦ |

* **ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೩೭ : ಆರೋಗ್ಯ ಇಲಾಖೆಯಿಂದ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ (೧೯೯೫–೯೬)**

| ಕ್ರಮ ಸಂ. | ಆರೋಗ್ಯ ಸಂಸ್ಥೆಯ ಹೆಸರು | ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ ಒಳರೋಗಿಗಳು ಹಿಂದಿನ ವರ್ಷ | ಒಳರೋಗಿಗಳು ವರದಿ ವರ್ಷ | ಹೊರರೋಗಿಗಳು ಹಿಂದಿನ ವರ್ಷ | ಹೊರರೋಗಿಗಳು ವರದಿ ವರ್ಷ | ಒಟ್ಟು ಸಂಖ್ಯೆ ಹಿಂದಿನ ವರ್ಷ | ಒಟ್ಟು ಸಂಖ್ಯೆ ವರದಿ ವರ್ಷ | ದಿನ ಒಂದಕ್ಕೆ ಚಿಕಿತ್ಸೆ ಹೊಂದಿದವರ ಸರಾಸರಿ ಸಂಖ್ಯೆ | ಸಂಸ್ಥೆಯಲ್ಲಿ ಖರ್ಚಾದ ಒಟ್ಟು ಹಣ ವರದಿ ವರ್ಷ | ಸಂಸ್ಥೆಯಲ್ಲಿ ಖರ್ಚಾದ ಒಟ್ಟು ಹಣ ಹಿಂದಿನ ವರ್ಷ | ಪ್ರತಿ ರೋಗಿಗೆ ಚಿಕಿತ್ಸೆ ವೆಚ್ಚ ವರದಿ ವರ್ಷ | ಪ್ರತಿ ರೋಗಿಗೆ ಚಿಕಿತ್ಸೆ ವೆಚ್ಚ ಹಿಂದಿನ ವರ್ಷ |
|---|---|---|---|---|---|---|---|---|---|---|---|---|
| | | ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| ೧. | ಸ್ಥಳೀಯ ನಿಧಿಯ ಸಂಸ್ಥೆಗಳು | – | – | – | – | – | ಇಲ್ಲ | – | – | – | – | – |
| ೨. | ಸ್ವದೇಶಿ ವೈದ್ಯಕೀಯ ಸಂಸ್ಥೆ. | – | – | – | – | ಲಭ್ಯವಿಲ್ಲ | ಲಭ್ಯವಿಲ್ಲ | – | – | – | – | – |
| ೩. | ಇತರ ವೈದ್ಯಕೀಯ ಸಂಸ್ಥೆಗಳು | ೧೭೪೩೬ | ೨೦೦೬೨ | ೧೬೯೪೪೬೬ | ೧೭೧೨೭೭೮ | ೧೭೧೧೯೦೨ | ೧೭೩೫೬೪೦ | ೪೭೪೭ | ೧೧೯೬೨೦೧೯ | ೭೨೩೦೦೫೩೭ | ೬೯.೦೦ | ೪೨.೦೦ |
| | ಒಟ್ಟು | ೧೭೪೩೬ | ೨೦೦೬೨ | ೧೬೯೪೪೬೬ | ೧೭೧೨೭೭೮ | ೧೭೧೧೯೦೨ | ೧೭೩೫೬೪೦ | ೪೭೪೭ | ೧೧೯೬೨೦೧೯ | ೭೨೩೦೦೫೩೭ | ೬೯.೦೦ | ೪೨.೦೦ |

* **ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೩೪ : ೨೦೦೦–೨೦೦೧ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಾಧನೆಯ ವಿವರಗಳು**

| ಕ್ರ. ಸಂ. | ಕಾರ್ಯಕ್ರಮ | ಗುರಿ | ಸಾಧನೆ | ಶೇಕಡಾ ಸಾಧನೆ |
|---|---|---|---|---|
| **ರೋಗ ನಿರೋಧಕ ಚುಚ್ಚು ಮದ್ದುಗಳ** | | | | |
| **ಲಸಿಕಾ ಕಾರ್ಯಕ್ರಮ** | | | | |
| ೧ | ಡಿ.ಪಿ.ಟಿ | ೨೩೩೨೬ | ೨೩೧೯೩ | ೯೯.೪ |
| ೨. | ಪೋಲಿಯೋ | ೨೩೩೨೬ | ೨೩೧೯೩ | ೯೯.೪ |
| ೩. | ಬಿ.ಸಿ.ಜಿ | ೨೩೩೨೬ | ೨೨೩೨೨ | ೯೫.೬ |
| ೪. | ದಢಾರ | ೨೩೩೨೬ | ೨೨೫೩೭ | ೯೬.೬ |
| ೫. | ಟಿ.ಟಿ.(ಗರ್ಭಿಣಿಯರು) | ೨೬೩೬೨ | ೨೩೯೦೩ | ೮೭.೬ |
| **ಕುಷ್ಠರೋಗ ನಿವಾರಣಾ ಕಾರ್ಯಕ್ರಮ** | | | | |
| ೬. | ಕುಷ್ಠರೋಗ ಪತ್ತೆ ಹಚ್ಚುವಿಕೆ | ೧೭೦ | ೨೧೭ | ೧೨೭.೬ |
| ೭. | ಕುಷ್ಠರೋಗ ಗುಣಪಡಿಸುವಿಕೆ | ೩೦೦ | ೨೮೪ | ೯೪.೬ |
| **ಕ್ಷಯ ರೋಗ ನಿವಾರಣಾ ಕಾರ್ಯಕ್ರಮ** | | | | |
| ೮. | ಕ್ಷಯರೋಗ ಪತ್ತೆ ಹಚ್ಚುವಿಕೆ | ೨೩೭೦ | ೨೮೫೭ | ೧೨೦.೫ |
| ೯. | ಕ್ಷಯರೋಗಗಳ ಕಫ ಪರೀಕ್ಷೆಗಳು | ೮೭೯೮ | ೭೪೨೪ | ೮೪.೩ |
| ೧೦. | ಅಂಧತ್ವ (ಕ್ಯಾಟರಾಕ್ಟ್) ಅಪರೇಶನ್ | ೮೦೦೦ | ೭೯೮೬ | ೯೬.೦ |
| **ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ** | | | | |
| ೧೧. | ರಕ್ತಲೇಪನ ಸಂಗ್ರಹಣೆ | ೨೨೬೬೪೨ | ೨೨೦೧೦೫ | ೯೭.೧ |
| **ರಾಷ್ಟ್ರೀಯ ಕಾರ್ಯಕ್ರಮ** | | | | |
| ೧೨. | ಸಂತಾನಹರಣ ಶಸ್ತ್ರ ಚಿಕಿತ್ಸೆ | ೮೭೦೬ | ೭೮೦೧ | ೮೯.೬ |
| ೧೩. | ವಂಕಿ ಅಳವಡಿಸುವಿಕೆ | ೧೦೬೯೬ | ೯೮೬೫ | ೯೨.೨ |
| ೧೪. | ನಿರೋಧ್ ಬಳಕೆದಾರರು (ಗುರಿ ರಹಿತ) | – | ೬೫೫೨೩೭ | – |
| ೧೫. | ನುಂಗುವ ಮಾತ್ರೆ ಬಳಕೆದಾರರು | ೫೧೬೫ | ೪೭೮೮ | ೯೨.೭ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೩೯ : ಆರೋಗ್ಯ ಇಲಾಖೆಯಿಂದ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ (೧೯೯೮–೯೯)**

| ಕ್ರಮ ಸಂ. | ಆರೋಗ್ಯ ಸಂಸ್ಥೆಯ ಹೆಸರು | ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ: ಒಳರೋಗಿಗಳು ಹಿಂದಿನ ವರ್ಷ | ಒಳರೋಗಿಗಳು ವರದಿ ವರ್ಷ | ಹೊರರೋಗಿಗಳು ಹಿಂದಿನ ವರ್ಷ | ಹೊರರೋಗಿಗಳು ವರದಿ ವರ್ಷ | ಒಟ್ಟು ಸಂಖ್ಯೆ ಹಿಂದಿನ ವರ್ಷ | ಒಟ್ಟು ಸಂಖ್ಯೆ ವರದಿ ವರ್ಷ | ದಿನ ಒಂದಕ್ಕೆ ಚಿಕಿತ್ಸೆ ಹೊಂದಿದವರ ಸರಾಸರಿ ಸಂಖ್ಯೆ | ಸಂಸ್ಥೆಗೆ ಖರ್ಚಾದ ಒಟ್ಟು ಹಣ ವರದಿ ವರ್ಷ | ಸಂಸ್ಥೆಗೆ ಖರ್ಚಾದ ಒಟ್ಟು ಹಣ ಹಿಂದಿನ ವರ್ಷ | ಪ್ರತಿ ರೋಗಿಗೆ ಚಿಕಿತ್ಸೆ ವೆಚ್ಚ ವರದಿ ವರ್ಷ | ಪ್ರತಿ ರೋಗಿಗೆ ಚಿಕಿತ್ಸೆ ವೆಚ್ಚ ಹಿಂದಿನ ವರ್ಷ |
|---|---|---|---|---|---|---|---|---|---|---|---|---|
| | | ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| ೧. | ಸ್ಥಳೀಯ ನಿಧಿಯ ಸಂಸ್ಥೆಗಳು | – | – | – | – | – | ಇಲ್ಲ | – | – | – | – | – |
| ೨. | ಸ್ವದೇಶಿ ವೈದ್ಯಕೀಯ ಸಂಸ್ಥೆ ಇತ್ಯಾದಿ | – | – | – | – | – | – | – | – | – | – | – |
| ೩. | ಇತರ ವೈದ್ಯಕೀಯ ಸಂಸ್ಥೆಗಳು | ೨೧೩೦೨ | ೩೩೦೪೦ | ೧೮೮೬೭೨೫ | ೨೬೬೭೮೦೯ | ೧೯೦೮೦೨೭ | ೨೬೩೪೭೭೯ | ೭೨೧೯೦ | ೨೫೨–೬೪೩೫ | ೩೭೫೮೧೫೨೬ | ೩೪೯೨ | ೫೪೯೦ |
| | ಒಟ್ಟು | ೨೧೩೦೨ | ೩೩೦೪೦ | ೧೮೮೬೭೨೫ | ೨೬೬೭೮೦೯ | ೧೯೦೮೦೨೭ | ೨೬೩೪೭೭೯ | ೭೨೧೯ | ೨೫೨೦೬೪೩೫ | ೩೭೫೮೧೫೨೬ | ೩೪೯೨ | ೫೪೯೦ |

**ಕೋಷ್ಟಕ ೧೫.೪೦ : ಜಿಲ್ಲೆಯಲ್ಲಿ ಚುಚ್ಚು ಮದ್ದು ನೀಡಿಕೆ ಮತ್ತು ಕುಟುಂಬ ಕಲ್ಯಾಣ ಯೋಜನೆಯ ವಿವರ**

| | ೧೯೯೭–೯೮ | ೨೦೦೧–೦೨ | ೨೦೦೩–೦೪ |
|---|---|---|---|
| ಡಿ.ಪಿ.ಟಿ | ೩೦೭೭೨ | ೨೩೧೯೩ | ೨೩೪೯೪ |
| ಪೋಲಿಯೋ | ೩೦೭೭೨ | ೨೩೧೯೩ | ೨೩೪೯೪ |
| ಬಿ.ಸಿ.ಜಿ | ೩೨೩೧೫ | ೨೨೩೨೨ | ೨೩೪೨೨ |
| ದಢಾರ | ೨೭೮೩೧ | ೨೨೫೩೭ | ೨೩೧೩೧ |
| ಟಿ.ಟಿ | ೨೯೭೭೬ | ೨೩೯೦೩ | ೨೫೧೮೮ |
| ಸಂತಾನಹರಣ ಶಸ್ತ್ರ ಚಿಕಿತ್ಸೆ | ೮೪೬೯ | ೭೮೦೧ | ೭೭೫೯ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ: ೧೫.೪೧ ಜಿಲ್ಲಾ ಪಂಚಾಯತ್ ಆರೋಗ್ಯ ಸಂಸ್ಥೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ ಮತ್ತು ಖರ್ಚಿನ ವಿವರ (೧೯೯೮–೯೯)**

| ಕ್ರಮ ಸಂಖ್ಯೆ | ಆರೋಗ್ಯ ಸಂಸ್ಥೆಯ ಹೆಸರು | ಸಿಬ್ಬಂದಿ ವೆಚ್ಚ | ಬಾಡಿಗೆ | ಪೀಠೋಪಕರಣ | ಒಳರೋಗಿಗಳಿಗೆ ಆಹಾರ ಪೂರೈಕೆ | ಲಾಸಿಗೆ ಮತ್ತು ಬಟ್ಟೆಬರೆಗಳು | ಸಾದಿಲ್ವಾರು ವೆಚ್ಚ | ಔಷಧಾಲಯ ಕಟ್ಟಡ ದುರಸ್ತಿ ಮತ್ತು ನಿರ್ಮಾಣ | ಔಷಧ | ಒಟ್ಟು | ಖರ್ಚು |
|---|---|---|---|---|---|---|---|---|---|---|---|
| ೧. | ಸ್ಥಳೀಯನಿಧಿ ಆಸ್ಪತ್ರೆಗಳು | – | – | – | – | – | – | – | – | – | – |
| ೨. | ಸ್ವದೇಶಿ ವೈದ್ಯಕೀಯ ಸಂಸ್ಥೆಗಳು | – | – | – | – | – | – | – | – | – | – |
| ೩. | ಇತರ ವೈದ್ಯಕೀಯ ಸಂಸ್ಥೆಗಳು | ೧೧೮೯೪೬೬೦ | ೨೨೦೦೦ | ೩೩೨೮೪೩ | ೧೩೫೩೪೭೨ | ೧೯೯೪೬೦ | ೨೦೨೧೦೦೦ | ೪೯೧೦೦೦೦ | ೪೪೭೩೦೦೦೦ | | ೨೫೨೦೬೪೩೫ |
| | ಒಟ್ಟು | ೧೧೮೯೪೬೬೦ | ೨೨೦೦೦ | ೩೩೨೮೪೩ | ೧೩೫೩೪೭೨ | ೧೯೯೪೬೦ | ೨೦೨೧೦೦೦೦ | ೪೯೧೦೦೦೦ | ೪೪೭೩೦೦೦೦ | | ೨೫೨೦೬೪೩೫ |

**ಕೋಷ್ಟಕ ೧೫.೪೨ : ಆರೋಗ್ಯ ಇಲಾಖೆಯಿಂದ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ (೨೦೦೦–೦೧)**

| ಕ್ರಮ ಸಂ. | ಆರೋಗ್ಯ ಸಂಸ್ಥೆ ಹೆಸರು | ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ: ಒಳರೋಗಿಗಳು | | ಹೊರರೋಗಿಗಳು | | ಒಟ್ಟು ಸಂಖ್ಯೆ | | ದಿನ ಒಂದಕ್ಕೆ ಚಿಕಿತ್ಸೆ ಹೊಂದಿರುವ | ಸಂಸ್ಥೆಗೆ ಖರ್ಚಾದ ಒಟ್ಟು ಹಣ | | ಪ್ರತಿ ರೋಗಿಗೆ ಚಿಕಿತ್ಸೆ ವೆಚ್ಚ | |
|---|---|---|---|---|---|---|---|---|---|---|---|---|
| | | ಹಿಂದಿನ ವರ್ಷ | ವರದಿ ವರ್ಷ | ಹಿಂದಿನ ವರ್ಷ | ವರದಿ ವರ್ಷ | ಹಿಂದಿನ ವರ್ಷ | ವರದಿ ವರ್ಷ | ಸರಾಸರಿ ಸಂಖ್ಯೆ | ವರದಿ ವರ್ಷ | ಹಿಂದಿನ ವರ್ಷ | ವರದಿ ವರ್ಷ | ಹಿಂದಿನ ವರ್ಷ |
| ೧. | ಸ್ಥಳೀಯ ನಿಧಿಯ ಆಸ್ಪತ್ರೆಗಳು | – | – | – | – | – | – | – | – | – | – | – |
| ೨. | ಸ್ವದೇಶಿ ವೈದ್ಯಕೀಯ ಸಂಸ್ಥೆ | – | – | – | – | – | – | – | – | – | – | – |
| ೩. | ಇತರ ವೈದ್ಯಕೀಯ ಸಂಸ್ಥೆಗಳು | ೪೧೧೨ | ೧೩೪೬೮ | ೭೬೯೦೯೦ | ೧೩೨೨೧೭೯ | ೭೮೩೨೦೮ | ೧೩೩೫೬೪೭ | ೩೬೫೯ | ೧೦೦೫೭೧೦೦೦ | ೧೮೦೯೯೭೨೫ | ೭೩–೦೦ | ೫೪.೯೦ |
| | ಒಟ್ಟು | ೧೪೧೧೨ | ೧೩೪೬೮ | ೭೬೯೦೯೦ | ೧೩೨೨೧೭೯ | ೭೮೩೨೦೮ | ೧೩೩೫೬೪೭ | ೩೬೫೯ | ೧೦೦೫೭೧೦೦೦ | ೧೮೦೯೯೭೨೫ | ೭೩–೦೦ | ೫೪.೯೦ |

**ಆಧಾರ :** ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ : ೧೫.೪೩ ಚುಚ್ಚು ಮದ್ದು ನೀಡಿರುವ ಸಂಖ್ಯೆಗಳ ವಿವರ**

| ಅವಧಿ | ೧೯೮೯–೯೦ | ೧೯೯೦–೯೧ | ೧೯೯೧–೯೨ | ೧೯೯೨–೯೩ | ೧೯೯೩–೯೪ |
|---|---|---|---|---|---|
| ಡಿ.ಪಿ.ಟಿ | ೫೯೯೭೩ | ೭೦೦೦೦ | ೬೮೩೬೧ | ೬೨೮೭೧ | ೫೯೨೮೪ |
| ಪೋಲಿಯೋ | ೬೦೧೨೯ | ೭೦೦೦೦ | ೬೮೫೫೦ | ೬೨೮೦೬ | ೫೯೬೦೧ |
| ಬಿ.ಸಿ.ಜಿ | – | ೮೧೦೦೦ | ೭೧೦೨೦ | ೭೩೫೧೧ | ೬೯೮೦೪ |
| ದಡಾರ | – | ೫೬೦೦೦ | ೫೫೫೮೩ | ೫೪೭೩೩ | ೫೩೩೧೮ |
| ಟಿ.ಟಿ.(ಗರ್ಭಿಣಿಯರು) | – | ೭೪೦೦೦ | ೬೫೪೨೯ | ೬೫೬೪೧ | ೬೦೬೭೪ |
| | ೧೫೨೧೯ | – | ೧೫೨೭೧ | ೧೭೦೫೪ | – |

**ಕೋಷ್ಟಕ : ೧೫.೪೪ ಜಿಲ್ಲಾ ಪಂಚಯತ್ ಆರೋಗ್ಯ ಸಂಸ್ಥೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ ಮತ್ತು ಖರ್ಚಿನ ವಿವರ ೨೦೦೦–೨೦೦೧ ವರ್ಷದಲ್ಲಿ**

| ಕ್ರಮ ಸಂಖ್ಯೆ | ಆರೋಗ್ಯ ಸಂಸ್ಥೆಯ ಹೆಸರು | ಸಿಬ್ಬಂಧಿ ವೆಚ್ಚ | ಬಾಡಿಗೆ | ಪೀಠೋಪಕರಣ | ಒಳರೋಗಿಗಳಿಗೆ ಆಹಾರ ಪೂರೈಕೆ | ಹಾಸಿಗೆ ಮತ್ತು ಬಟ್ಟೆಬರೆಗಳು | ಸಾದಿಲ್ವಾರು ವೆಚ್ಚ | ಔಷಧಾಲಯ ಕಟ್ಟಡ ದುರಸ್ತಿ ಮತ್ತು ನಿರ್ಮಾಣ | ಔಷಧ | ಒಟ್ಟುಖರ್ಚು |
|---|---|---|---|---|---|---|---|---|---|---|
| ೧. | ಸ್ಥಳೀಯ ನಿಧಿ ಆಸ್ಪತ್ರೆ ಗಳು | – | – | – | – | – | – | – | – | – |
| ೨. | ಸ್ವದೇಶಿ ಸಂಸ್ಥೆ ವೈದ್ಯಕೀಯ ಇತ್ಯಾದಿ | – | – | – | – | – | – | – | – | – |
| ೩. | ಇತರ ವೈದ್ಯಕೀಯ ಸಂಸ್ಥೆಗಳು | ೯೦೨೭೬೦೦೦ | – | ೨೬೫೦೦೦ | ೧೪೧೬೦೦೦ | ೧೭೭೦೦೦ | ೨೪೩೫೦೦೦ | ೨೩೨೬೦೦೦ | ೩೬೭೭೦೦೦ | ೧೦೦೫೭೧೦೦೦ |
| | ಒಟ್ಟು | ೯೦೨೭೬೦೦೦ | – | ೨೬೫೦೦೦ | ೧೪೧೬೦೦೦ | ೧೭೭೦೦೦ | ೨೪೩೫೦೦೦ | ೨೩೨೬೦೦೦ | ೩೬೭೭೦೦೦ | ೧೦೦೫೭೧೦೦೦ |

**ಆಧಾರ**: ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೪೫ : ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹತೋಟಿಯಲ್ಲಿರುವ ಘಟಕಗಳ ವಿವರ.**

| ಕ್ರಮ ಸಂಖ್ಯೆ | ಸಂಸ್ಥೆಗಳ ಹೆಸರು | ತಾಲೂಕು | ಉಪಕೇಂದ್ರಗಳು | |
|---|---|---|---|---|
| | | | ಸಂಖ್ಯೆ | ಕಟ್ಟಡಗಳು |
| ೧ | ೨ | ೩ | ೪ | ೫ |
| **೧** | **ಸಾರ್ವಜನಿಕ ಆಸ್ಪತ್ರೆಗಳು** | | | |
| | ಪುತ್ತೂರು | ಪುತ್ತೂರು | | |
| **೨.** | **ಸಮುದಾಯ ಆರೋಗ್ಯ ಕೇಂದ್ರಗಳು** | | | |
| ೧ | ಮುಲ್ಕಿ | ಮಂಗಳೂರು | ೧ | ೧ |
| ೨ | ಮೂಡಬಿದಿರೆ | | ೧೦ | ೪ |
| ೩ | ಬೆಳ್ತಂಗಡಿ | ಬೆಳ್ತಂಗಡಿ | ೧೩ | ೪ |
| ೪ | ಬಂಟ್ವಾಳ | ಬಂಟ್ವಾಳ | – | – |
| ೫ | ವಾಮದಪದವು | " | ೩ | ೨ |
| ೬ | ಸುಳ್ಯ | ಸುಳ್ಯ | ೧೬ | ೬ |
| ೭ | ವಿಟ್ಲ | ಬಂಟ್ವಾಳ | ೯ | ೩ |
| **೩.** | **ಪ್ರಾಥಮಿಕ ಆರೋಗ್ಯ ಕೇಂದ್ರಗಳು** | | | |
| ೧ | ಸುರತ್ಕಲ್ | ಮಂಗಳೂರು | ೧೨ | ೩ |
| ೨ | ಉಳ್ಳಾಲ | " | ೮ | ೪ |
| ೩ | ಬಜಪೆ | " | ೯ | ೧ |
| ೪ | ಗಂಜೀಮಠ | " | ೫ | ೨ |
| ೫ | ಅಂಬಲಮೊಗರು | " | ೫ | ೨ |
| ೬ | ಕೊಂಪದವು | " | ೪ | ೨ |
| ೭ | ಕುಡುಪು | " | ೭ | ೩ |
| ೮ | ಕಟೀಲು | " | ೧೦ | ೩ |
| ೯ | ನಾಟೆಕಲ್ | " | ೧೩ | ೩ |
| ೧೦ | ಬೊಂದೆಲ್ | " | ೩ | – |
| ೧೧ | ಅತ್ತೂರು ಕೆಮರಾಲ್ | " | ೧೦ | ೩ |
| ೧೨ | ಕಾಟಿಪಳ್ಳ | " | ೯ | ೨ |
| ೧೩ | ಕುಪ್ಪೆಪದವು | " | ೨ | ೨ |
| ೧೪ | ಬೊಳ್ಳಿಯಾರ್ | " | ೫ | ೧ |
| ೧೫ | ಕೋಟೆಕಾರ್ | " | ೪ | ೨ |
| ೧೬ | ಅಡ್ಯಾರ್ | " | ೫ | – |
| ೧೭ | ಶಿರ್ತಾಡಿ | " | ೪ | ೩ |
| ೧೮ | ಕಲ್ಲುಂಡುಕರ್ | " | ೫ | ೧ |
| ೧೯ | ನೆಲ್ಲಿಕ್ಕಾರ್ | " | ೨ | ೧ |

ಮುಂದುವರೆದಿದೆ...

| ೧ | ೨ | ೩ | ೪ | ೫ |
|---|---|---|---|---|
| ೨೦ | ಬೆಳುವಾಯಿ | " | ೪ | ೧ |
| ೨೨ | ಪಾಲಡ್ಕ | " | ೪ | ೩ |
| ೨೩ | ನರಿಯ | ಬೆಳ್ತಂಗಡಿ | ೭ | ೨ |
| ೨೪ | ಹತ್ಯಾಡ್ಕ | " | ೮ | – |
| ೨೫ | ಉಜಿರೆ | " | ೬ | ೧ |
| ೨೬ | ಕೊಕ್ಕಡ | " | ೩ | ೨ |
| ೨೭ | ವೇಣೂರು | " | ೫ | ೨ |
| ೨೮ | ನಾರಾವಿ | " | ೩ | ೨ |
| ೨೯ | ಧರ್ಮಸ್ಥಳ | " | ೩ | ೨ |
| ೩೦ | ಇಂದಬೆಟ್ಟು | " | ೪ | ೩ |
| ೩೧ | ಕಣಿಯೂರು | " | | |
| ೩೨ | ಮುಂಡಾಜೆ | ಬೆಳ್ತಂಗಡಿ | ೫ | ೨ |
| ೩೩ | ಆಲದಂಗಡಿ | " | ೬ | ೧ |
| ೩೪ | ಪದಂಗಡಿ | " | ೭ | ೧ |
| ೩೫ | ಪುಂಜಲಕಟ್ಟೆ | ಬಂಟ್ವಾಳ | ೬ | ೧.೩ |
| ೩೬ | ಕುರ್ನಾಡ್ | " | ೭ | ೪ |
| ೩೭ | ದೈವಸ್ಥಳ | " | ೪ | ೧ |
| ೩೮ | ಮಾಣಿ | " | ೧೧ | ೨ |
| ೩೯ | ಅಡ್ಯನಡ್ಕ | " | ೪ | ೧ |
| ೪೦ | ಮಂಚಿ | " | ೬ | ೪ |
| ೪೧ | ಬೆಂಜನಪದವು | " | ೩ | – |
| ೪೨ | ಸಜಿಪ ನಡು | " | ೪ | ೩ |
| ೪೩ | ರಾಯಿ | " | ೫ | ೧ |
| ೪೪ | ಕಲ್ಲಡ್ಕ ಬಳ್ತಿಲ | " | ೫ | – |
| ೪೫ | ಪಂಜಿಕಲ್ | " | ೮ | ೧ |
| ೪೬ | ಕನ್ಯಾನ | " | ೩ | ೩ |
| ೪೭ | ಪೆರುವಾಯಿ | " | ೩ | ೧ |
| ೪೮ | ನಾವೂರು | " | ೩ | ೧ |
| ೪೯ | ಪುದು | " | ೫ | – |
| ೫೦ | ಅಳಿಕೆ | " | ೩ | – |
| ೫೧ | ಕಡಬ | ಪುತ್ತೂರು | ೮ | ೫ |
| ೫೨ | ಪಾಣಾಜೆ | " | ೯ | ೪ |
| ೫೩ | ಉಪ್ಪಿನಂಗಡಿ | " | ೮ | ೨ |
| ೫೪ | ನೆಲ್ಯಾಡಿ | " | ೭ | ೩ |
| ೫೫ | ಕೊಲ್ತಿಗೆ | " | ೫ | ೩ |

ಮುಂದುವರೆದಿದೆ...

| ೧ | ೨ | ೩ | ೪ | ೫ |
|---|---|---|---|---|
| ೫೬ | ಈಶ್ವರಮಂಗಲ | " | ೪ | ೩ |
| ೫೭ | ತಿಂಗಳಾಡಿ | " | ೧೦ | ೪ |
| ೫೮ | ಕೊಯ್ಲ | " | ೭ | ೩ |
| ೫೯ | ಕಾಣಿಯೂರು | " | ೪ | ೨ |
| ೬೦ | ಶಿರ್ತಾಡಿ | " | ೭ | ೩ |
| ೬೧ | ಸರ್ವೆ | " | ೬ | ೨ |
| ೬೨ | ಕೊಲ್ಲಮೊಗರು | ಸುಳ್ಯ | ೬ | ೧ |
| ೬೩ | ಸುಬ್ರಹ್ಮಣ್ಯ | " | ೭ | ೨ |
| ೬೪ | ಗುತ್ತಿಗಾರ್ | " | ೯ | ೧ |
| ೬೫ | ಬೆಳ್ಳಾರೆ | " | ೧೦ | ೩ |
| ೬೬ | ಆರಂತೋಡ್ | " | ೯ | ೧ |
| ೬೭ | ಪಿಲಿಪಂಜ | " | ೩ | ೧ |
| **೪** | **ರಾಷ್ಟ್ರೀಯ ಕುಷ್ಠ ನಿಯಂತ್ರಣಾ ಕೇಂದ್ರಗಳು** | | | |
| ೧ | ಮೂಡಬಿದಿರೆ | ಕಾರ್ಕಳ | | |
| ೨ | ಪುತ್ತೂರು | ಪುತ್ತೂರು | | |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೪೬ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಘಟಕಗಳ ಸಂಖ್ಯೆ**

| | |
|---|---|
| ಪ್ರಾಥಮಿಕ ಆರೋಗ್ಯ ಕೇಂದ್ರಗಳು | ೬೬ |
| ಸಮುದಾಯ ಆರೋಗ್ಯ ಕೇಂದ್ರಗಳು | ೭ |
| ಸಾರ್ವಜನಿಕ ಆಸ್ಪತ್ರೆಗಳು | ೧ |
| ಭಾರತೀಯ ವೈದ್ಯಕೀಯ ಪದ್ಧತಿಯ ಶುಶ್ರೂಷ ಕೇಂದ್ರಗಳು | ೧೧ |
| ಮಂಜೂರಾದ ವೈದ್ಯರುಗಳ ಹುದ್ದೆ | ೧೪೦ |
| ಕೆಲಸ ನಿರ್ವಹಿಸುತ್ತಿರುವ ವೈದ್ಯರು | ೧೨೩ |
| ಮಂಜೂರಾದ ದಾದಿಯರು | ೭೮ |
| ಕೆಲಸ ನಿರ್ವಹಿಸುತ್ತಿರುವ ದಾದಿಯರು | ೭೮ |
| ಆಂಬುಲೆನ್ಸ್‌ಗಳ ಸಂಖ್ಯೆ | ೧೧ |
| ಕಾರ್ಯನಿರ್ವಹಿಸುತ್ತಿರುವ ಒಟ್ಟು ಉದ್ಯೋಗಿಗಳು | ೧೧೮೨ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೪೭ : ಪ್ರಾಥಮಿಕ ಆರೋಗ್ಯ ಕೇಂದ್ರ (ಪ್ರಾ.ಆ.ಕೇ.), ಸಮುದಾಯ ಆರೋಗ್ಯ ಕೇಂದ್ರ(ಸ.ಆ.ಕೇ.) ಹಾಗೂ ಇತರ ಅಂಕಿ ಅಂಶಗಳು**

| ತಾಲೂಕು | ಪ್ರಾ.ಆ.ಕೇ. | ಸ.ಆ.ಕೇ. | ಸಾ.ಆಸ್ಪತ್ರೆ | ಭಾರತೀಯ ವೈದ್ಯಕೀಯ ಪದ್ಧತಿ | ಅನುಮತಿ ಪಡೆದಿರುವ ವೈದ್ಯರ ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ವೈದ್ಯರು |
|---|---|---|---|---|---|---|
| ಬೆಳ್ತಂಗಡಿ | ೧೨ | ೧ | – | ೨ | ೨೧ | ೧೮ |
| ಬಂಟ್ವಾಳ | ೧೬ | ೨ | – | ೧ | ೨೯ | ೨೬ |
| ಮಂಗಳೂರು | ೨೧ | ೨ | – | ೮ | ೫೧ | ೪೬ |
| ಪುತ್ತೂರು | ೧೧ | – | ೧ | – | ೨೫ | ೨೧ |
| ಸುಳ್ಯ | ೬ | ೧ | – | – | ೧೪ | ೧೨ |
| ಒಟ್ಟು | ೬೬ | ೭ | ೧ | ೧೧ | ೧೪೦ | ೧೨೩ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

ಕುಟುಂಬ ಕಲ್ಯಾಣ ಕಾರ್ಯಕ್ರಮವು ಇತ್ತೀಚಿಗಿನ ವರ್ಷಗಳಲ್ಲಿ ಮಹತ್ವವನ್ನು ಪಡೆದಿದೆ. ಅತೀಯಾಗಿ ಹೆಚ್ಚುತ್ತಿರುವ ಜನ ಸಂಖ್ಯೆಯ ಪರಿಣಾಮಗಳನ್ನು ಗುರುತಿಸಿರುವುದೇ ಇದಕ್ಕೆ ಕಾರಣ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಟುಂಬ ಕಲ್ಯಾಣ ಕೇಂದ್ರವನ್ನು ಮೊತ್ತ ಮೊದಲು ೧೯೫೫ ರಲ್ಲಿ ಲೇಡಿ ಗೋಷನ್ ಆಸ್ಪತ್ರೆಯಲ್ಲಿ ತೆರೆಯಲಾಯಿತು. ೧೯೫೭ ರಿಂದ, ರಾಜ್ಯ ಕುಟುಂಬ ಕಲ್ಯಾಣ ಮಂಡಳಿಯು ಕಾರ್ಯ ನಿರ್ವಹಿಸುತ್ತಿದೆ. ವಿವಿಧ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಗುರಿ ಮತ್ತು ಸಾಧನೆಯನ್ನು ಕೋಷ್ಟಕ ೧೫.೪೮ರಲ್ಲಿ ಗಮನಿಸಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಭಾರತೀಯ ಕುಟುಂಬ ಕಲ್ಯಾಣ ಸಂಘದವರ ಶಾಖೆಯನ್ನು ೧೯೫೬ ರಲ್ಲಿ ತೆರೆಯಲಾಯಿತು. ಶಾಲೆಗಳಲ್ಲಿ ಆರೋಗ್ಯ ಸೇವೆಯನ್ನು ನಾನಾ ರೀತಿಯಲ್ಲಿ ಸಲ್ಲಿಸಲಾಯಿತು, ಜಿಲ್ಲೆಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಶಾಲೆಗಳಲ್ಲಿ ವೈದ್ಯಕೀಯ ಪರೀಕ್ಷೆ ಹಾಗೂ ಚಿಕಿತ್ಸೆ ನೀಡುವುದು ಮತ್ತು ಮುಂಜಾಗರೂಕತೆಯ ಕ್ರಮಗಳನ್ನು ತಿಳಿಸಿಕೊಡಲಾಗುತ್ತಿದೆ.

**ಕೋಷ್ಟಕ ೧೫.೪೮ : ವಿವಿಧ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಗುರಿ ಮತ್ತು ಸಾಧನೆ**

| | ಸಂತಾನಹರಣ ಶಸ್ತ್ರಚಿಕಿತ್ಸೆ | | | ವಂಕಿ ಅಳವಡಿಕೆ | | | ಗರ್ಭ ನಿರೋಧಕಗಳ ಬಳಕೆ | | |
|---|---|---|---|---|---|---|---|---|---|
| ವರ್ಷ | ಗುರಿ | ಸಾಧನೆ | % | ಗುರಿ | ಸಾಧನೆ | % | ಗುರಿ | ಸಾಧನೆ | % |
| ೧೯೬೪–೬೫ | – | ೯೮೬ | – | – | – | – | – | – | – |
| ೧೯೬೫–೬೬ | – | ೧,೩೨೧ | – | – | ೧,೮೦೩ | – | – | – | – |
| ೧೯೬೬–೬೭ | ೫,೪೭೯ | ೧,೬೧೪ | ೨೯.೫ | ೧೩,೨೫೪ | ೪,೫೪೦ | ೧೪.೫ | – | – | – |
| ೧೯೬೯–೭೦ | ೯.೭೫೦ | ೨,೨೮೩ | ೨೪.೯ | ೨,೨೯೫ | ೧,೨೩೧ | ೫೩.೬ | ೧೧,೪೭೦ | ೪,೭೦೬ | ೪೧.೦ |
| ೧೯೭೦–೭೧ | ೯,೮೩೫ | ೨,೧೫೪ | ೨೦.೦ | ೨,೭೪೦ | ೧,೧೩೩ | ೪೧.೩ | ೧೫,೮೫೫ | ೫,೧೮೯ | ೩೨.೭ |
| ೧೯೭೧–೭೨ | ೪,೫೦೫ | ೪,೩೯೫ | ೯೩.೪ | ೨,೦೧೫ | ೯೧೩ | ೪೫.೩ | ೬,೪೧೦ | ೫,೧೭೯ | ೮೦.೭ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

**ಕೋಷ್ಟಕ ೧೫.೪೯ : ಜಿಲ್ಲೆಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಶಾಲೆಗಳಲ್ಲಿ ವೈದ್ಯಕೀಯ ಪರೀಕ್ಷೆ, ಚಿಕಿತ್ಸೆ, ಮುಂಜಾಗರೂಕತೆಯ ಕ್ರಮಗಳ ವಿವರ**

| ಕೇಂದ್ರಗಳ ಹೆಸರು | ಆಯ್ಕೆಗೊಂಡ ಶಾಲೆಗಳು | ಮಕ್ಕ ಳ ಸಂಖ್ಯೆ |
|---|---|---|
| ಬ್ರಹ್ಮಾವರ | ೮ | ೧,೮೮೧ |
| ಹಿರಿಯಡ್ಕ | ೮ | ೧,೬೮೪ |
| ಸುಳ್ಯ | ೧೧ | ೧,೯೫೫ |
| ಒಟ್ಟು | ೨೭ | ೫,೫೨೦ |

**ಕೋಷ್ಟಕ ೧೫.೫೦ : ಕುಟುಂಬ ಕಲ್ಯಾಣ ಕಾರ್ಯಕ್ರಮದ ಪ್ರಗತಿ (೧೯೯೫–೯೬)**

| ವರ್ಷ | ಸಂತಾನಹರಣ ಶಸ್ತ್ರ ಚಿಕಿತ್ಸೆ | | | ಐ.ಯು.ಡಿ. ಅಳವಡಿಕೆ | | | ಒ.ಪಿ. ಜನಸಂಖ್ಯೆ | | | ಸಿ.ಸಿ.ಜನಸಂಖ್ಯೆ |
|---|---|---|---|---|---|---|---|---|---|---|
| | ಗುರಿ | ಸಾಧನೆ | % | ಗುರಿ | ಸಾಧನೆ | % | ಗುರಿ | ಸಾಧನೆ | % | ಸಾಧನೆ |
| ೧೯೯೫–೯೬ | ೨೦೫೦೦ | ೧೭೪೮೧ | ೮೫.೨ | ೨೧೦೦೦ | ೧೬೬೨೫ | ೭೯ | ೯೫೦೦ | ೬೮೯೪ | ೭೨.೫ | ೨೦೩೧೭ |
| ೧೯೯೬–೯೭ | ೨೫೪೫೦ | ೧೭೨೬೭ | ೬೭.೮ | ೨೦೨೦೦ | ೧೮೭೯೯ | ೯೨.೭ | ೧೦೮೯೫ | ೯೩೬೪ | ೮೬ | ೧೨೬೧೪ |
| ೧೯೯೭–೯೮ | ೨೪೨೫೦ | ೧೬೯೯೯ | ೭೦ | ೧೯೨೬೦ | ೧೭೨೪೭ | ೮೯.೫ | ೧೦೩೭೫ | ೮೦೩೭ | ೭೭.೪ | ೧೯೧೯೮ |
| ೧೯೯೮–೯೯ | ೯೬೪೨ | ೭೩೯೨ | ೭೬.೭ | ೮೬೩೬ | ೮೮೬೬ | ೧೦೨.೬ | ೪೭೯೪ | ೪೪೪೦ | ೯೨.೬ | ೧೧೧೨೯ |
| ೧೯೯೯–೦೦ | ೮೫೦೬ | ೭೯೦೪ | ೯೩ | ೮೬೨೯ | ೧೦೨೮೩ | ೧೧೯ | ೪೬೮೪ | ೪೫೫೬ | ೯೭.೨ | ೯೧೬೬ |
| ೨೦೦೦–೦೧ | ೮೭೦೬ | ೭೮೦೧ | ೮೯.೬ | ೧೦೬೭೬ | ೯೮೬೮ | ೯೨.೨ | ೫೨೯೨ | ೪೭೮೮ | ೯೦.೪ | ೯೧೦೦ |
| ೨೦೦೧–೦೨ | ೮೦೬೦ | ೭೫೮೮ | ೯೪ | ೯೩೩೨ | ೯೩೬೧ | ೧೦೦.೩ | ೫೫೫೬ | ೫೦೩೫ | ೯೦.೬ | ೨೦೦೦೭ |
| ೨೦೦೨–೦೩ | ೮೦೮೦ | ೭೫೨೩ | ೯೩ | ೯೪೧೬ | ೯೨೫೭ | ೯೮.೩ | ೫೩೮೫ | ೫೪೪೧ | ೯೮ | ೨೦೪೧೪ |
| ೨೦೦೩–೦೪ | ೮೧೭೫ | ೭೭೫೯ | ೯೫ | ೯೪೯೯ | ೯೪೭೪ | ೯೯.೭ | ೫೩೬೬ | ೫೨೯೮ | ೧೦೧.೪ | ೧೦೫೨೬ |
| ೨೦೦೪–೦೫ | ೮೨೦೨ | ೭೫೭೬ | ೯೨.೪ | ೯೫೦೪ | ೯೧೨೬ | ೯೬ | ೫೪೭೦ | ೫೩೫೬ | ೯೭ | ೧೦೭೮೯ |
| ೨೦೦೫–೦೬ | ೮೧೪೪ | ೫೩೨೬ | ೬೫.೪ | ೯೩೭೪ | ೬೩೯೪ | ೬೮.೨ | ೫೪೧೭ | ೫೩೫೯ | ೯೮.೯ | ೬೬೮೨ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

## ವೈದ್ಯಕೀಯ ಸಂಸ್ಥೆಗಳು

ಜಿಲ್ಲೆಯಲ್ಲಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಹೆಚ್ಚುತ್ತಿವೆ. ೧೯೯೦–೯೧ ರಲ್ಲಿ ಈ ಜಿಲ್ಲೆಯಲ್ಲಿ, ಎರಡು ಅಲೋಪತಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿದ್ದವು. ಇದರಲ್ಲಿ ಸುಮಾರು ೨೬೩೪ ವಿದ್ಯಾರ್ಥಿಗಳು ಆರೋಗ್ಯ ಶಿಕ್ಷಣವನ್ನು ಪಡೆಯುತ್ತಿದ್ದರು. ಭಾರತೀಯ ಪದ್ಧತಿಯ ವೈದ್ಯಕೀಯ ಶಿಕ್ಷಣವನ್ನು ನೀಡುತ್ತಿದ್ದ ಎರಡು ಸಂಸ್ಥೆಗಳಲ್ಲಿ ಸುಮಾರು ೨೮೫ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಮೂರು ದಂತ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಸುಮಾರು ೬೧೫ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಿದ್ದರು.

೧೯೯೦–೯೧ ರಲ್ಲಿ ಜಿಲ್ಲೆಯಲ್ಲಿ ಸುಮಾರು ೪೫೪೧ ಹಾಸಿಗೆಗಳನ್ನೊಳಗೊಂಡ ೧೮ ಆಸ್ಪತ್ರೆಗಳಿದ್ದವು. ೭೫೭ ಹಾಸಿಗೆಗಳನ್ನೊಳಗೊಂಡ ೧೦೬ ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದವು. ಮಾತ್ರವಲ್ಲದೆ ೧೬ ಪ್ರಾಥಮಿಕ ಆರೋಗ್ಯ ಘಟಕಗಳು ೨೯ ಕುಟುಂಬ ಕಲ್ಯಾಣ

ಕೇಂದ್ರಗಳು ಇದ್ದವು. ೧೯೯೭–೯೮ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೫೧೦ ಹಾಸಿಗೆಗಳನ್ನೊಳಗೊಂಡ ೬೬ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಒಂದು ಪ್ರಾಥಮಿಕ ಆರೋಗ್ಯ ಘಟಕ ಹಾಗೂ ೧೮ ಕುಟುಂಬ ಕಲ್ಯಾಣ ಕೇಂದ್ರಗಳು ಇದ್ದವು. ೨೦೦೦–೨೦೦೧ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೨೦೦ ಹಾಸಿಗೆಗಳನ್ನೊಳಗೊಂಡ ಐದು ಸರ್ಕಾರಿ ಆಸ್ಪತೆಗಳು, ೧೦೮೩ ಹಾಸಿಗೆಗಳನ್ನೊಳಗೊಂಡ ೬೫ ಖಾಸಗಿ ನರ್ಸಿಂಗ್ ಹೋಮ್‌ಗಳು ಇದ್ದವು. ೨೦೦೩–೦೪ ರಲ್ಲಿ ೧೭೧೧ ಹಾಸಿಗೆಗಳನ್ನೊಳಗೊಂಡ ೭೩ ಖಾಸಗಿ ನರ್ಸಿಂಗ್ ಹೋಮ್‌ಗಳು, ೨೦೦೧–೦೨ ರಲ್ಲಿ ೩೯೬ ಹಾಸಿಗೆಗಳನ್ನೊಳಗೊಂಡ ೬೮ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ೨೧೦ ಹಾಸಿಗೆಗಳನ್ನೊಳಗೊಂಡ ಆರು ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ೬೬ ಕುಟುಂಬ ಕಲ್ಯಾಣ ಕೇಂದಳಿದ್ದವು. ೨೦೦೩–೨೦೦೪ ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ೭೩ ಕ್ಕೆ ಹೆಚ್ಚಿದೆ ಹಾಗೂ ಹಾಸಿಗೆಗಳ ಸಂಖ್ಯೆ ೭೮೭ ಕ್ಕೆ ಹೆಚ್ಚಿಸಲಾಗಿದೆ. ಇದೇ ಅವಧಿಯಲ್ಲಿ ೨೧೫ ಹಾಸಿಗೆಗಳನ್ನೊಳಗೊಂಡ ಏಳು ಸಮುದಾಯ ಆರೋಗ್ಯ ಕೇಂದ್ರಗಳಿದ್ದವು.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಮುಖ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು

೧. ಕಸ್ತೂರ್ ಬಾ ಮೆಡಿಕಲ್ ಕಾಲೇಜು ೨. ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜು ೩. ನಿಟ್ಟೆ ಕೆ.ಎಸ್.ಹೆಗ್ಡೆ ಸ್ಮರಣಾರ್ಥ ಮೆಡಿಕಲ್ ಕಾಲೇಜು ೪. ಯೆನೆಪೋಯ ಮೆಡಿಕಲ್ ಕಾಲೇಜು ೫. ಎ.ಬಿ.ಶೆಟ್ಟಿ ದಂತ ವೈದ್ಯಕೀಯ ಕಾಲೇಜು

## ಗ್ರಾಮೀಣ ನೈರ್ಮಲ್ಯ ಯೋಜನೆ

ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಗ್ರಾಮೀಣ ಜನರಿಗೆ ಶೌಚಾಲಯಗಳನ್ನು ಕಟ್ಟುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಕೋಷ್ಟಕ ೧೫.೫೧ರಲ್ಲಿ ಈ ಯೋಜನೆಯ ವಿವರವನ್ನು ಕೊಡಲಾಗಿದೆ.

**ಕೋಷ್ಟಕ ೧೫.೫೧ : ಗ್ರಾಮೀಣ ನೈರ್ಮಲ್ಯ ಯೋಜನೆಯಲ್ಲಿ ನಿರ್ಮಿಸಿದ ಶೌಚಾಲಯ ಮತ್ತು ಅದರ ವೆಚ್ಚ**

| ವರ್ಷ | ಶೌಚಾಲಯ | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೫–೯೬ | ೨೦೯೪೯ | ೨೮೭.೪೧೮ |
| ೧೯೯೭–೯೮ | ೯೦೨೫ | ೧೩೭.೧೮೧ |
| ೧೯೯೮–೯೯ | ೮೦೨೨ | ೧೧೪,೧೭೬ |
| ೯೯–೨೦೦೦ | ೭೧೯೩ | ೯೩.೮೯೨ |

**ಕೋಷ್ಟಕ : ೧೫.೫೨ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯೋನ್ಮುಖವಾಗಿದ್ದ ಆರೋಗ್ಯ ಸಂಸ್ಥೆಗಳ ವಿವರ**

| ಕ್ರಮ ಸಂಖ್ಯೆ | | ೧೯೯೭–೯೮ | ೨೦೦೦–೦೧ | ೨೦೦೩–೦೪ |
|---|---|---|---|---|
| ೧. | ಮೆಡಿಕಲ್ ಕಾಲೇಜುಗಳು ವಿದ್ಯಾರ್ಥಿಗಳು | ೨೧೬೮೪ | ೫೩೧೧೬ | ೧೦೪೯೮೪ |
| ೨. | ದಂತ ವೈದ್ಯ ಕಾಲೇಜುಗಳು ವಿದ್ಯಾರ್ಥಿಗಳು | – | ೪೨೦೯೭ | ೪೧೮೦೦ |
| ೩. | ಅಲೋಪತಿ ಆಸ್ಪತ್ರೆಗಳು | – | – | ೫ |
| ೪ | ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳು | – | – | ೬ |
| ೫. | ಖಾಸಗಿ ಆಸ್ಪತ್ರೆಗಳು | – | ೬೫ | ೭೩ |
| ೬. | ಪ್ರಾಥಮಿಕ ಆರೋಗ್ಯ ಕೇಂದ್ರಗಳು | ೬೬ | ೬೮ | ೭೩ |
| ೭. | ಸಮುದಾಯ ಆರೋಗ್ಯ ಕೇಂದ್ರಗಳು | – | – | ೭ |
| ೮. | ಕುಟುಂಬ ಕಲ್ಯಾಣ ಕೇಂದ್ರಗಳು | ೧೮ | ೬೬ | ೬೬ |
| ೯. | ರಕ್ತ ನಿಧಿಗಳು | – | – | ೧೨ |
| ೧೦. | ಜನನ–ಮರಣ ನೋಂದಾವಣೆ ಘಟಕಗಳು | ೨೭೩ | ೩೮೧ | ೩೮೧ |

**ಆಧಾರ** : ಜಿಲ್ಲಾ ಆರೋಗ್ಯ ಇಲಾಖೆ, ಮಂಗಳೂರು.

### ಪಲ್ಸ್ ಪೋಲಿಯೋ ಕಾರ್ಯಕ್ರಮ

ದೇಶದಲ್ಲಿ ಕ್ರಿಶ.೨೦೦೦ನೇ ಇಸವಿ ವೇಳೆಗೆ ಪೋಲಿಯೋ ಸಂಪೂರ್ಣ ನಿವಾರಣೆ ಆಗಬೇಕೆಂಬ ವಿಶ್ವ ಆರೋಗ್ಯ ಸಂಸ್ಥೆಯ ಘೋಷಣೆಯ ಹಿನ್ನೆಲೆಯಲ್ಲಿ ದೇಶದ ಎಲ್ಲಾ ಮಕ್ಕಳಿಗೆ ಪೋಲಿಯೋ ನಿರೋಧಕ ಲಸಿಕೆ ನೀಡುವ ದೇಶವ್ಯಾಪಿ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿತು. ಈ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಆರೋಗ್ಯ ಘಟಕ ಹಾಗೂ ಉಪಕೇಂದ್ರಗಳು ಲಸಿಕೆ ನೀಡುವ ಕಾರ್ಯಕ್ರಮವನ್ನು ೧೯೯೫ ರಿಂದಲೇ ಕಾರ್ಯರೂಪಕ್ಕೆ ತಂದಿವೆ. ಸರ್ಕಾರ ವರ್ಷದ ಎರಡು ನಿರ್ದಿಷ್ಟ ದಿನಗಳಲ್ಲಿ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಎರಡು ಸುತ್ತಿನ ಲಸಿಕೆ ನೀಡುವ ಕಾರ್ಯಕ್ರಮವನ್ನು ದೇಶದಾದ್ಯಂತ ಕೈಗೊಂಡಿದೆ.

### ಭಾರತೀಯ ವೈದ್ಯಕೀಯ ಸಂಘ

ದೇಶದ ವೃತ್ತಿನಿರತ ಆಲೋಪಥಿ ವೈದ್ಯರ ಸ್ವಯಂಸೇವಾ ಸಂಸ್ಥೆಯಾಗಿ 'ಭಾರತೀಯ ವೈದ್ಯಕೀಯ ಸಂಘವು' ೧೯೪೨ ರಲ್ಲಿ ಸ್ಥಾಪನೆಗೊಂಡಿತು. ಈ ಸಂಘವು ಮಂಗಳೂರಿನಲ್ಲಿ ತನ್ನ ಶಾಖೆಯನ್ನು ೧೯೩೦ರಲ್ಲಿ ೨೦ ಸದಸ್ಯರೊಂದಿಗೆ ಪ್ರಾರಂಭಿಸಿತು. ಸಂಘವು ಸಾರ್ವಜನಿಕ ಆರೋಗ್ಯ ಸೇವೆ, ವೈದ್ಯರಿಗಾಗಿ ವಿಶೇಷ ಉಪನ್ಯಾಸ, ಚರ್ಚಾಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ತನ್ನ ಸದಸ್ಯರು ರಾಜ್ಯ ಹಾಗೂ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸಿ, ಕುಟುಂಬ ಕಲ್ಯಾಣ, ತಾಯಿಮಕ್ಕಳ ಆರೋಗ್ಯ ಕಾರ್ಯಕ್ರಮ ಮತ್ತು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮಗಳಲ್ಲಿ ಸಹಯೋಗ ನೀಡುವಂತೆ ಸೂಚನೆ ನೀಡುತ್ತದೆ. ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ತಜ್ಞ ವೈದ್ಯ ಸೇವೆಯಂತಹ ಕಾರ್ಯಕ್ರಮಗಳನ್ನೂ ಕಾಲಕಾಲಕ್ಕೆ ಏರ್ಪಡಿಸುತ್ತದೆ. ವೈದ್ಯ ಸದಸ್ಯರು ಹಾಗೂ ಅವರ ಕುಟುಂಬ ವರ್ಗದವರ ಮನೋರಂಜನೆಗಾಗಿ ಸಂಘ ಒಂದು ರಿಕ್ರಿಯೇಶನ್ ಕ್ಲಬ್ ಅನ್ನು ಜನವರಿ ೨೦೦೦ ರಲ್ಲಿ ಪ್ರಾರಂಭ ಮಾಡಿದೆ, ಹಾಗೂ ಒಳಾಂಗಣ ಆಟಗಳ ಸೌಲಭ್ಯವನ್ನೂ ಒದಗಿಸಿದೆ. ಸಾಂಸ್ಕೃತಿಕ ಚಟುವಟಿಕೆಗಾಗಿ 'Doctors'Day'(ವೈದ್ಯರ ದಿನ) ಯನ್ನು ಆಚರಿಸಲಾಗುತ್ತದೆ.

### ಔಷಧ ನಿಯಂತ್ರಣ

ಗ್ರಾಹಕರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ರಾಜ್ಯದಲ್ಲಿ ತಯಾರಾಗುವ ಔಷಧ ಹಾಗೂ ಕಾಂತಿವರ್ಧಕಗಳ ಮೇಲೆ ಕಟ್ಟುನಿಟ್ಟಾದ ನಿಯಂತ್ರಣ, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಔಷಧಗಳು ನಿಯಂತ್ರಿತ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವ ಮುಖ್ಯ ಜವಾಬ್ದಾರಿಯನ್ನು ಔಷಧ ನಿಯಂತ್ರಣ ಇಲಾಖೆ ಹೊಂದಿದೆ. ಮಾರಾಟಕ್ಕಾಗಿ ಸರಬರಾಜುಗೊಳ್ಳುವ ಔಷಧಿಗಳನ್ನು ಈ ಇಲಾಖೆ ಪರೀಕ್ಷಿಸಿ ಮಾರಾಟ ಮಾಡಲು ಅನುಮತಿ ನೀಡುತ್ತದೆ. ಇಲಾಖೆ ತನ್ನ ಮೂರು ವಿಭಾಗಗಳಾದ ೧. ಆಡಳಿತ ಮತ್ತು ಅಮಲು ಜಾರಿ ೨. ಔಷಧ ಪರೀಕ್ಷಾ ಪ್ರಯೋಗ ಶಾಲೆ ಮತ್ತು ೩. ಔಷಧಿ ಶಾಸ್ತ್ರ ( ಫಾರ್ಮಸಿ) ಶಿಕ್ಷಣಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ೧೯೪೦ರ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮಗಳನ್ವಯ ಕಚೇರಿ ಇದ್ದು, ಇದು ಜಿಲ್ಲಾ ವ್ಯಾಪ್ತಿಯ ಅಧಿಕಾರವನ್ನು ಹೊಂದಿರುತ್ತದೆ. ಜಿಲ್ಲೆಯ ಎಲ್ಲಾ ಔಷಧಿ ಹಾಗೂ ಕಾಂತಿವರ್ಧಕ ತಯಾರಿಕಾ ಘಟಕಗಳಿಗೆ ಹಾಗೂ ಮಾರಾಟಗಾರರಿಗೆ ಪರವಾನಗಿ ನೀಡುವುದು, ನಕಲಿ ಔಷಧಿಗಳ ತಯಾರಿಕೆಯಲ್ಲಿ ನಿರತರಾದವರ ಬಗ್ಗೆ ಎಚ್ಚರ ವಹಿಸುವುದು, ನಿಗದಿತ ಗುಣಮಟ್ಟಗಳಿಗೆ ಅನುಗುಣವಾಗಿ ಔಷಧಿ ಇಲ್ಲವೇ ಕಾಂತಿವರ್ಧಕಗಳು ಇವೆಯೇ ಎಂದು ಅವುಗಳ ಮಾದರಿಗಳನ್ನು ಪಡೆದು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಗುಣಮಟ್ಟವನ್ನು ನಿಶ್ಚಯಿಸುವುದೇ, ಮುಂತಾದವು ಈ ಕಚೇರಿಯ ಕರ್ತವ್ಯಗಳಾಗಿವೆ. ಔಷಧಿ ಪರಿವೀಕ್ಷಕರು ಔಷಧಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕಾಯ್ದೆ ಹಾಗೂ ನಿಯಮಗಳಾದ ೧) ಔಷದಗಳ (ಬೆಲೆ ನಿಯಂತ್ರಣ) ಆದೇಶ ೧೯೮೭ ೨) ಔಷಧ ಮತ್ತು ಮಂತ್ರೋಪಾಯ ಉಪಶಮನಗಳು, (ಆಕ್ಷೇಪಣೀಯ ಜಾಹಿರಾತು) ಅಧಿನಿಯಮ ೧೯೫೪ ೩) ಫಾರ್ಮಸಿ ಅಧಿನಿಯಮ ೧೯೪೮, ೪) ಆಮದು ವ್ಯಾಪಾರಿ ನಿಯಮ ರೀತ್ಯಾ ಔಷಧ ತಯಾರಿಕಾ ಉದ್ಯಮಗಳಿಗೆ ಅವಶ್ಯಕ ಯೋಗ್ಯತಾ ಪತ್ರ ನೀಡುವ ನಿಯಮ ೫) ವಿಷವಸ್ತುಗಳ ಅಧಿನಿಯಮ ೧೯೧೯ ಮತ್ತು ಕರ್ನಾಟಕ ವಿಷವಸ್ತುಗಳ ಅಧಿನಿಯಮ ೧೯೧೮ ಹಾಗೂ ೬) ಮಾದಕ ಔಷಧಿಗಳ ಹಾಗೂ ಮಾನಸಿಕ ಭ್ರಮೆ ಉಂಟು ಮಾಡುವ ವಸ್ತುಗಳ ಅಧಿನಿಯಮ ೧೯೫೮ ಇವುಗಳನ್ನು ಜಾರಿಗೊಳಿಸುತ್ತಾರೆ.

♦♦♦